
॥ ಶ್ರೀಃ ಹರಿಃ ಓಂ ॥

ಶ್ರೀ ಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀ ಜಗನ್ನಾಥದಾಸವರ್ಯ ವಿರಚಿತ

# ಶ್ರೀಮದ್ಧರಿಕಥಾಮೃತಸಾರ

## ನೈವೇದ್ಯಸಮರ್ಪಣ ಸಂಧಿ

## (ಸಂಧಿ 31)

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

'ಶ್ರೀ ಉರಗಾದ್ರಿ', ನಂ-61, 5ನೆಯ ಅಡ್ಡರಸ್ತೆ

ನರಸಿಂಹರಾಜಾ ಕಾಲೋನಿ, ಬೆಂಗಳೂರು-560 019

ದೂರವಾಣಿ : 6604727

ಶ್ರೀಮದ್ಹರಿಕಥಾಮೃತಸಾರ
ಸರ್ವವ್ಯಾಖ್ಯಾನಸಾರಸಂಗ್ರಹ
ನೈವೇದ್ಯಸಮರ್ಪಣ ಸಂಧಿ (ಸಂಧಿ–31)

ಪ್ರಥಮ ಮುದ್ರಣ : 1996
ಪ್ರತಿಗಳ ಸಂಖ್ಯೆ : 1000

ಬೆಲೆ : 50 ರೂ.ಗಳು

ಪ್ರತಿಗಳು ದೊರೆಯುವ ಸ್ಥಳ :

1) **ಹೆಚ್. ಎಸ್. ಶ್ರೀನಿವಾಸಮೂರ್ತಿ**
ನಂ. 61, 'ಶ್ರೀ ಉರಗಾದ್ರಿ'
5ನೇ ಅಡ್ಡರಸ್ತೆ, ನರಸಿಂಹರಾಜಾಕಾಲೋನಿ
ಬೆಂಗಳೂರು – 560 019
ದೂರವಾಣಿ : 6604727

2) **ವೇದಾಂತ ಬುಕ್ ಹೌಸ್**
ಉಮಾ ಚಿತ್ರಮಂದಿರದ ಸಮೀಪ
ಚಾಮರಾಜಪೇಟೆ, ಬೆಂಗಳೂರು–560 018
ದೂರವಾಣಿ : 600480

3) **ನ್ಯೂ ವೇದಾಂತ ಬುಕ್ ಹೌಸ್**
8ನೆಯ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003

ಮುದ್ರಕರು :
**ಶ್ರೀರಂಗ ಪ್ರಿಂಟರ್ಸ್ ಅಂಡ್ ಬೈಂಡರ್ಸ್**
ಹನುಮಂತನಗರ, ಬೆಂಗಳೂರು–560 019
ದೂರವಾಣಿ : 602333

॥ ಶ್ರೀಃ ಹರಿಃ ಓಂ ॥

# ಪ್ರಕಾಶಕರ ನುಡಿ

ಸನ್ಮಾನ್ಯರಾದ ಹರಿದಾಸ ಸಾಹಿತ್ಯಾಭಿಮಾನಿಗಳಲ್ಲಿ ವಿನಂತಿ.

ಶ್ರೀಮದ್ಧರಿಕಥಾಮೃತಸಾರದ ಮೂವತ್ತೊಂದನೆಯ ಸಂಧಿಯ ಅಂದರೆ, ನೈವೇದ್ಯ ಪ್ರಕರಣ ಸಂಧಿಯ ಪ್ರತಿಯನ್ನು ನಿಮ್ಮ ಕೈಯೊಳಗಿಡಲು ಪರಮ ಸಂತಸದ ಸಂಗತಿ.

ಕಾರಣಾಂತರಗಳಿಂದ ಈ ಸಂಪುಟವು ಪ್ರಕಟವಾಗಲು ವಿಳಂಬ ವಾಗಿದೆ. ಇದಕ್ಕಾಗಿ ತಮ್ಮಲ್ಲಿ ಕ್ಷಮೆ ಯಾಚಿಸುತ್ತಿದ್ದೇನೆ. ಈ ಸಂಪುಟದ ಪ್ರಕಟನೆಯಲ್ಲಿ 1000 ರೂ.ಗಳ ಧನ ಸಹಾಯ ಮಾಡಿದ ಶ್ರೀ ಟಿ. ಕೆ. ರಾಘವೇಂದ್ರರಾವ್, ಶಿವಮೊಗ್ಗ ಇವರಿಗೂ ಮತ್ತು ಅವರ ಕುಟುಂಬ ವರ್ಗಕ್ಕೂ ನಮ್ಮ ಕೃತಜ್ಞತೆಯ ವಂದನೆಗಳು ಹಿಂದಿನಂತೆ ಸಂಪುಟಕ್ಕೂ ಸಹ ಈ ಜಾಹಿರಾತು ರೂಪದಲ್ಲಿ ಸಹಾಯ ಮಾಡಿದ ಕಿರ್ಲೋಸ್ಕರ್ ಇನ್‌ವೆಸ್ಟ ಮೆಂಟ್ ಅಂಡ್ ಫೈನಾನ್ಸ್ ಸಂಸ್ಥೆಗೂ ಮತ್ತು ಅದರ ಮುಖ್ಯ ಆಡಳಿತ ಗಾರರಾದ ಶ್ರೀಮಾನ ಪಿ. ಆರ್. ಮುಂಡೇವಾಡಿಯವರಿಗೂ ಪ್ರಕಾಶಕರ ವಂದನೆಗಳು. (ಕಕ್ಷತಾರತಮ್ಯ ಸಂಧಿ–32ನೇಯ ಸಂಧಿಯ ರೂಪದಲ್ಲಿ ಪ್ರಕಟವಾಗಲಿದೆ)

ಪ್ರಸಕ್ತ ಸಂಪುಟದ ಪ್ರಕಟಣೆಗೆ ನೆರವಾದವರೆಲ್ಲರಿಗೂ ಕೃತಜ್ಞತೆಯ ವಂದನೆಗಳು. ಈ ಸಂಪುಟವನ್ನು ಅಂದವಾಗಿ ಮುದ್ರಿಸಿಕೊಟ್ಟ ಶಿಲ್ಪ ಪ್ರಿಂಟರ್ಸ್ ಮಾಲೀಕರಾದ ಶ್ರೀ ಗುರುಶಾಂತಮೂರ್ತಿಯವರಿಗೂ ಮತ್ತು ಪ್ರತಿಗಳನ್ನು ಬೈಂಡ್ ಮಾಡಿ ಸಿದ್ಧಪಡಿಸಿದ ಶ್ರೀ ಬಾಲಕೃಷ್ಣರವರಿಗೂ ಧನ್ಯವಾದಗಳು.


ಹರಿದಾಸಸಾಹಿತ್ಯಾಭಿಮಾನಿಗಳಲ್ಲಿ ವಿಶೇಷ ವಿನಂತಿ,

ಶ್ರೀ ಜಗನ್ನಾಥದಾಸವರ್ಯರ ಉಪಾಸ್ಯಮೂರ್ತಿ ಶ್ರೀಗರುಡವಾಹನ ಲಕ್ಷ್ಮೀನರಸಿಂಹದೇವರ ಅನುಗ್ರಹದಿಂದ ಶ್ರೀಮದ್ಧರಿಕಥಾಮೃತಸಾರದ 33 ಸಂಧಿಗಳ ಸಮಗ್ರ ಪ್ರಕಟನಾಕಾರ್ಯವು ಮುಕ್ತಾಯವಾಗಿದೆ. ಈಗ ಪ್ರಕಟವಾಗಿರುವ 31, 32 ಮತ್ತು 33 ಸಂಧಿಗಳಿಗೆ ಮುದ್ರಣ ವೆಚ್ಚವು ಈಗಿನ ದರದಂತೆ ಅಧಿಕವಾಗಿದೆ. ಇದಲ್ಲದೆ ಹಿಂದಿನ ಕೆಲವು ಸಂಧಿಗಳ ಪುನರ್ ಮುದ್ರಣವಾಗಬೇಕಾಗಿದೆ. ಈ ಕಾರಣದಿಂದ ತಮ್ಮಲ್ಲಿ ಪ್ರತಿಯೊಬ್ಬರು ಕನಿಷ್ಠ ಪಕ್ಷ 200 ರೂ.ಗಳನ್ನು ಹೆಚ್ಚಿನ ಮೊಬಲಗನ್ನು ನೀಡಿ ಸಹಕರಿಸಬೇಕಾಗಿ ವಿನಂತಿ.

ಬೆಂಗಳೂರು
ದಿನಾಂಕ 1-4-97

ಇಂತಿ ನಮಸ್ಕಾರಗಳು
ಹೆಚ್. ಎಸ್. ಶ್ರೀನಿವಾಸಮೂರ್ತಿ
(ಪ್ರಕಾಶಕರು)

॥ ಶ್ರೀಃ ಹರಿಃ ಓಂ॥



## ಶ್ರೀಮತಿ ಹೆಚ್. ಸೀತಾಬಾಯಿ (1907ರಿಂದ 1971)

ಶ್ರೀಮತಿ ಹೆಚ್. ಸೀತಾಬಾಯಿಯವರು ಪ್ರಕಾಶಕರ ಮಾ॥ ಶ್ರೀಯವರು. ಇವರ ಪತಿ ಹೊಳೇನರಸೀಪುರದ ಹೆಚ್. ರಾಮರಾಯರು –ಶ್ರೀ ರಂಗಪ್ರಿಯರ ಹಿರಿಯ ಪ್ರಥಮ ಶಿಷ್ಯರು. ಇವರ ತಂದೆ ಸಿ. ನಾಗೇಶರಾಯರು ಮತ್ತು ತಾಯಿ ವೆಂಕೂಬಾಯಿ. ಪುಸ್ತಕ ಸಂಪುಟವನ್ನು ಇವರ ಸ್ಮರಣಾರ್ಥವಾಗಿ ಅರ್ಪಿಸಲಾಗಿದೆ.

॥ ಶ್ರೀ ಹರಿ ಓಂ॥



## ಶ್ರೀ ಡಿ. ಎಮ್. ಶೇಷಗಿರಿರಾವ್ ಮತ್ತು ಸರಸ್ವತಿಬಾಯಿ ದಂಪತಿಗಳು

ಶ್ರೀ ಡಿ. ಎಮ್. ಶೇಷಗಿರಿರಾಯರು ಮೈಸೂರು ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರಾಗಿದ್ದು, ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ಹೊಂದಿದರು. ಉತ್ತಮಮಟ್ಟದ ಅಧ್ಯಾಪಕರೆಂದು ಖ್ಯಾತಿ ಗಳಿಸಿದ್ದರು. ಶ್ರೀಯುತರು ಪ್ರಕಾಶಕರ ಮಾವಂದಿರು, ಶ್ರೀಮತಿ ಸರಸ್ವತೀಬಾಯಿಯವರು ತಮ್ಮ ಕೌಟುಂಬಿಕ ಜೀವನದಲ್ಲಿ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ, ತಮ್ಮ ಪತಿಗೆ ಸರ್ವವಿಧದಲ್ಲಿಯೂ ಸಹಾಯಕರಾಗಿದ್ದರು. ಪ್ರಸಕ್ತ ಸಂಪುಟವನ್ನು ಇವರು ಸ್ಮರಣಾರ್ಥವಾಗಿ ಪ್ರಕಟಿಸಲಾಗಿದೆ.




ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವಃ ಸರ್ವಮಿತಿ ಸಮಹಾತ್ಮಾ ಸುದುರ್ಲಭಃ ॥
-ಗೀತಾವಾಕ್ಯ (ಅಧ್ಯಾಯ-7, ಶ್ಲೋಕ-19)

**WITH BEST COMPLIMENTS FROM :**

**KIRLOSKAR INVESTMENTS AND FINANCE LTD.**

**REGD. OFFICE :**
**UNITY BUILDINGS, II FLOOR, C-BLOCK,**
**J. C. ROAD, BANGALORE-560 002**

॥ ಶ್ರೀಃ ಹರಿಃ ಓಂ ॥

॥ ಶ್ರೀಃ ಗರುಡವಾಹನ ಶ್ರೀಲಕ್ಷ್ಮೀನರಸಿಂಹಾಭಿನ್ನ
ಶ್ರೀಜಗನ್ನಾಥವಿಠ್ಠಲಾಯನಮಃ ॥

# ನೈವೇದ್ಯಸಮರ್ಪಣ ಸಂಧಿ

## ಸಂಧಿ ೩೧

ಪಲ್ಲವಿ :-

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಹೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ಪ ॥

## ಪದ್ಯ ೧

ಮೂಲ :

ಲೆಕ್ಕಸದೆ ಲಕುಮಿಯನು ಬೊಮ್ಮನ ।
ಪೊಕ್ಕುಳಿಂದಲಿ ಪಡೆದ ಪೊಸ ಪೊಂ ।
ಬಕ್ಕದೇರನು ಪಡೆದವಯವಗಳಿಂದ ದಿವಿಜರನು ॥
ಮಕ್ಕಳಂದದಿ ಪೊರೆವ ಸರ್ವದ ।
ರಕ್ಕಸಾಂತಕ ರಣದೊಳಗೆ ನಿ ।
ದುಃಖ ಸುಖಮಯ ಕಾಯ್ದ ಪಾರ್ಥನ ಸೂತನೆಂದೆನಿಸಿ ॥೧॥

**ಅವತರಣಿಕೆ :**

ಶ್ರೀಲಕ್ಷ್ಮೀಪತಿಯಾದ ಶ್ರೀ ಪರಮಾತ್ಮನ ಮಹಾತ್ಮೆಯನ್ನು ಹೇಳುತ್ತಾರೆ. ॥ ೧ ॥

**ಪ್ರತಿಪದಾರ್ಥ :**

**ಲಕುಮಿಯನು** = ಶ್ರೀಲಕ್ಷ್ಮೀದೇವಿಯರನ್ನು, **ಲೆಕ್ಕಿಸದೆ** = ಲಕ್ಷ್ಯ ಮಾಡದೆ, **ಬೊಮ್ಮನ** = ಚತುರ್ಮುಖ ಬ್ರಹ್ಮದೇವರನ್ನು, **ಪೊಕ್ಕಳಿಂದಲಿ ಪಡೆದ** = ಐವತ್ತನೇ ವರ್ಷದ ಅಂತ್ಯದಿನದ ರಾತ್ರಿಯಲ್ಲಿ, ಅಂಡದ ಒಳಗೆ ಪದ್ಮ = ಕಲ್ಪದಲ್ಲಿ ತನ್ನ ನಾಭೀಕಮಲದಿಂದ ಪಡೆದನು. **ಹೊಸ** = ನೂತನ ನೂತನವಾದ ಅನಂತಕಲ್ಯಾಣಗುಣಗಣವುಳ್ಳವನು. **ಪೊಂಬಕ್ಕಿದೇರನು** = ಸುವರ್ಣಛಾಯಾಯುಕ್ತವಾದ, ರೆಕ್ಕೆಗಳುಳ್ಳ ಗರುಡದೇವರನ್ನೇ ರಥವಾಗಿ ಉಳ್ಳವನು (ಗರುಡವಾಹನನು). **ಅವಯವಗಳಿಂದ** = ಅಂಡದ ಒಳಗೆ ವೈರಾಜಸೃಷ್ಟಿಯಲ್ಲಿ ತನ್ನ ವಿರಾಡ್ರೂಪದಿಂದ, ತನ್ನ ಕರಚರಣಾದ್ಯವಯ ಗಳಿಂದ. **ದಿವಿಜರನು** = ದೇವತೆಗಳನ್ನು, **ಪಡೆದ** = ಸೃಷ್ಟಿಸಿದನು. **ಮಕ್ಕಳಂದದಿ** = ಸ್ವಂತ ಮಕ್ಕಳೋಪಾದಿಯಲ್ಲಿ, **ಪೊರೆವ** = ಸಮಸ್ತ ಜೀವರನ್ನೂ (ಪುತ್ರವತ್) ಸಂರಕ್ಷಿಸುವನು. **ಸರ್ವದ** = ನಿರಂತರದಲ್ಲಿ. **ರಕ್ಕಸಾಂತಕ** = ದೈತ್ಯರನ್ನು ಸಂಹರಿಸುವನು. (ದೈತ್ಯಾರಿ), **ನಿರ್ದುಃಖ** = ಅಜ್ಞಾನ-ಭಯ-ಯಾವ ವಿಧವಾದ ದುಃಖಗಳು ಯಾವ ಕಾಲಕ್ಕೂ ಇಲ್ಲದವನು, **ಸುಖಮಯ** = ಆನಂದ ಸ್ವರೂಪನು, **ತನ್ನ ನಂಬಿದ** = ತನ್ನನ್ನೇ ನಿರಂತರವಾಗಿ ದೃಢಭಕ್ತಿಯಿಂದ ನಂಬಿಕೊಂಡಿರುವ, **ಪಾರ್ಥನ** = ತನ್ನ ಅಂತರಂಗಭಕ್ತನಾದ ಅರ್ಜುನನ, **ಸೂತನೆಂದೆನಿಸಿ** = ರಥದ ಸಾರಥಿ ಎಂದೆನಿಸಿಕೊಂಡು, (ಬಂಡಿಬೋವನಾಗಿ), **ರಣದೊಳು** = ಕುರುಕ್ಷೇತ್ರ ಮಹಾಸಂಗ್ರಾಮದಲ್ಲಿ, **ಕಾಯ್ದ** = ಶತ್ರುಗಳಿಂದ ಪಾರ್ಥನನ್ನು ಸಂರಕ್ಷಿಸಿದ ಪರಮ = ಕರುಣಾಳು. ॥೧॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಶ್ರೀಪರಮಾತ್ಮನ ಮಹಾತ್ಮೆಯನ್ನು ಹೇಳುತ್ತಾರೆ.

ಲಕ್ಷ್ಮೀದೇವಿಯರನ್ನು ಲಕ್ಷ್ಯಮಾಡದೆ, ಚತುರ್ಮುಖಬ್ರಹ್ಮನನ್ನ ಐವತ್ತನೇ ವರ್ಷದ ಅಂತ್ಯದಿವಸದ ರಾತ್ರಿಯಲ್ಲಿ, ಅಂಡದ ಒಳಗೆ, ಪದ್ಮಕಲ್ಪದಲ್ಲಿ ತನ್ನ ನಾಭೀಕಮಲದಿಂದ ಪಡೆಯೋವವನಾದ, ನೂತನ ನೂತನವಾದ ಕಲ್ಯಾಣಗುಣಗಳುಳ್ಳವ, ಬಂಗಾರದ ಛಾಯಾದಿಂದ ಯುಕ್ತವಾದ ಗರುಡದೇವರೇ ರಥವಾಗುಳ್ಳವನು. ಅಂಡದ ಒಳಗೆ, ವೈರಾಜ ಸೃಷ್ಟಿಯಲ್ಲಿ ತನ್ನ ವಿರಾಡ್ರೂಪದಿಂದ ಕರಚರಣಾದಿ ಅವಯವಗಳಿಂದ ದೇವತೆಗಳನ್ನು ಸೃಷ್ಟಿ ಮಾಡೋವನಾಗಿದ್ದಾನೆ. ಚರಾಚರಪ್ರಾಣಿಗಳನ್ನು ಮಾತಾ–ಪಿತೃಗಳು ಮಕ್ಕಳ ಪಾಲಿಸಿ ದೋಷಾದಿಯಲ್ಲಿ ಸಂರಕ್ಷಣ ಮಾಡತಕ್ಕವ. ನಿರಂತರ ದೈತ್ಯರ ಸಂಹಾರ ಮಾಡತಕ್ಕವ. ಅಜ್ಞಾನವೇನು, ದುಃಖವೇನು, ಭಯವೇನು–ಇವುಗಳು ಇಲ್ಲದವ. ಸುಖಸಮೂಹವೇ ಶರೀರವಾಗುಳ್ಳವ. ಇಂಥಾ ಶ್ರೀಪರಮಾತ್ಮ, ತನ್ನ ನಂಬಿದ ತನ್ನ ಭಕ್ತನಾದ ಅರ್ಜುನನ ರಥದ ಸಾರಥಿ–ಎಂತ ಕರಸಿದವನಾಗಿ, ಕುರುಕ್ಷೇತ್ರದಲ್ಲಿ ಯುದ್ಧರಂಗದೊಳಗೆ, ಶತ್ರುಗಳನ್ನು ಅರ್ಜುನನಿಂದ ಸಂಹಾರಮಾಡಿಸಿ ರಕ್ಷಿಸೋವನಾದ. ಆದ್ದರಿಂದ, ಶ್ರೀದೇವರನ್ನ ನಂಬಿದವರಿಗೆ, ಬಂದ ಭಯ ನಿವಾರಣವಾಗಿ, ತಮ್ಮ ಮನೋಭೀಷ್ಟ ಹೊಂದಿ, ಸುಖ ಪಡುತ್ತಾರೆಂತ ತಾತ್ಪರ್ಯ. ॥ ೧ ॥

## ೨. ಭಾವಪ್ರಕಾಶಿಕೆ :

ಶ್ರೀಲಕ್ಷ್ಮೀದೇವಿಯರನ್ನು ಲಕ್ಷ್ಯಮಾಡದೇ, ತನ್ನ ನಾಭಿಯಿಂದ ಶ್ರೀಬ್ರಹ್ಮದೇವರನ್ನು ಸೃಷ್ಟಿಸಿದನು.

"ಚಕ್ಷೋಃ ಸೂರ್ಯೋ ಅಜಾಯತ । ಮುಖಾದಿಂದ್ರಶ್ಚಾಗ್ನಿಶ್ಚ'- ಎಂಬ ಪುರುಷಸೂಕ್ತವಾಕ್ಯದ ರೀತಿಯಾಗಿ, ಕಣ್ಣುಗಳಿಂದ ಸೂರ್ಯನನ್ನೂ, ಮುಖದಿಂದ ಇಂದ್ರಾಗ್ನಿಗಳನ್ನೂ, ಹೀಗೆ ತನ್ನ ಅವಯವಗಳಿಂದ ದೇವತೆಗಳನ್ನು ಸೃಷ್ಟಿಸಿದನು. ಅವರೆಲ್ಲರನ್ನೂ ತನ್ನ ವಾಕ್ಯಳಂತೆ ರಕ್ಷಿಸುವನು. ದುಃಖಲೇಶವಿಲ್ಲದ ಆನಂದಸ್ವರೂಪನಾದ ರಾಕ್ಷಸಾಂತಕನಾದ ಶ್ರೀ ಹರಿಯು ಶ್ರೀ ಕೃಷ್ಣಾವತಾರದಲ್ಲಿ ಪಾರ್ಥಸಾರಥಿಯಾಗಿ, ರಣರಂಗದಲ್ಲಿ ಅರ್ಜುನನನ್ನು ಸಂರಕ್ಷಿಸಿದನು. ॥ ೧ ॥

## ೪. ಶ್ರೀ ವ್ಯಾಸರಾಜ ಸಿದ್ಧಾಂತ ಕೌಮುದೀ :

ಬಿಂಬಾರ್ಪಣಮವಿಜ್ಞಾಯ ನೈವೇದ್ಯಾರಹ ಸಂಯುತಾಃ॥ ಶ್ರೀಪಾದ ರಾಧಂ ಸಂಪಾದ್ಯ ಘಾತಂ ಪರಸುಖಿಸ್ಯಾಹಿ, ಬಂಭ್ರಮ್ಯಮಾಣಾಃ ಸಂಸಾರೇ ಮಹಾಸಂತ ವಿವರ್ಜಿತಾಃ॥ ವೃಥಾನಷ್ಯಂತಿ ಭೋದೇವ ಮಾಯಾಮಾತೇ ವಿಮೋಹಿತಾಃ॥ ಪ್ರತಿ ಜನ್ಮನಿ ಲಕ್ಷ್ಮೀತ್ವದೀಯ ಚರಣಾಲಯಮ್॥ ಕುರು ಮಾಮಾಗ್ರಹೋ ಮಾಸ್ತುಶಮೋಽಸ್ತುಮಾಮ ಮಾನಸೇ॥ ಪ್ರೀತೋಽಸ್ತು ಕಮಲಾಕಾಂತಃ ಸಂತಃ ಸಂತಃ ಸಂತು ಸುಧೀಯತುः॥ ಸ್ವಬಿಂಬಾರ್ಪಿತ ಭೋಜೀಯುः ಸಂಪೂರ್ಣ ಫಲಮಶ್ನುತೇ ॥ ಇತಿ ಪ್ರಾಚೀನ ಮಾನಸ್ಯ ಸಮಸ್ಯಗರ್ಥಃ ಪ್ರದರ್ಶ್ಯತೇ ॥ ಪ್ರತ್ಯುತ್ತರೈः ದಶಭೀ ರಾಜನ್ ಶ್ರೀಪಾದ ಸ್ವಪಸಂಮುದಾ ॥ ಚಿಕೀರ್ಷುः ಗುರುರಾಜಂ ಹಿಸ್ತೃತ್ಯಾಸಂಧಿಂ ಪ್ರಚಕ್ರಮೇ ॥ ಹರಿರಿತಿ । "ನೈವಾತ್ಮನः ಪ್ರಭುರಯಂ ಇತಿಪದ್ಯೇನಿಗಲಾಭ ಪೂರ್ವಾತ್ಮ ಮುಕ್ತಮ್ ಅತः ದಯಯೈವ ಅಸ್ಮನ್ನಿವೇದಿತೇ-ಭೋಕ್ತೃತ್ವಮ್ । ತೇನ ಪ್ರತಿಮುಖಸ್ಯ ಮುಖಶ್ರೀರಿವ ದೇವಾನಾಮೇವ ಶ್ರೇಯಃ ಇತ್ಯುಕ್ತಂಭವತಿ । ತತ್ರ ಇಯಮಾಶಂಕ್ ಉದೇತಿ. ರಮಾ ರಮಣತ್ವಾತ್ ಹರೇः ಕಥः ಸ್ವರತತ್ವಮಿತಿ ? ಮೈವಮ್ ರತಿಪುತ್ರ ಫಲಾದಾರಾ-ಇತ್ಯುಕ್ತೇः ರತಿ ಕರಣಸ್ಯ ಅಪತ್ಯಾರ್ಥತ್ವಾತ್, ರತ್ಯಭಾವೇಽಪ ಸುತೋತ್ಪತ್ತೇः, ನ ರಮಯಾ ಅರ್ಥः ತಸ್ಯ ॥ ಪರಂತು ಪರಮ ಭಕ್ತ್ಯೋತ್ಪ

ಮತ್ಪಾದೇವ ತಸ್ಯಾಂ ಹೆತ್ಯಾದರಃ ನತುಭಾರ್ಯಾತ್ವಾತ್ ಇತ್ಯಾಹ.'ಲೆಕ್ಕಿಸದೆ-ಲಕ್ಷಿಸದೆ, 'ಪೊಸ ಪೊಂಬಂಕ್ಕಿ'—ಹೊಸ ಭಂಗಾರದ ಗರುಡ ಇತ್ಯರ್ಥಃ ॥ ಅಂತಃ ಕರಣೇಸ್ಥಿತ್ವಾ''. ॥ ೧ ॥

### ಕನ್ನಡಾರ್ಥ :

ಬಿಂಬಸಮರ್ಪಣವನ್ನು ಅರಿಯದೇ, ನೈವೇದ್ಯಾಗ್ರಹಯುಕ್ತರಾದವರು ಶ್ರೇಷ್ಠಾಪರಾಧವನ್ನು, ಪಾರಮಾರ್ಥಿಕ ಹಾನಿಯನ್ನು ಸಂಪಾದಿಸಿಕೊಳ್ಳುತ್ತಾರೆ. ಅದ್ದರಿಂದ. ಅವರು ಸಂಸಾರದಲ್ಲಿ ಭ್ರಮಿತ್ತ, ಮಹತ್ಸಹವಾಸವನ್ನು ಹೊಂದದೆ, ದೇವನೇ ! ನಿನ್ನ ಮಾಯಾವಿಮೋಹಿತರಾಗಿ ವ್ಯರ್ಥವಾಗಿ ನಾಶ ಹೊಂದುತ್ತಾರೆ. ಆದುದರಿಂದ, ಹೇ ಲಕ್ಷ್ಮೀಪತೇ ! ನನಗೆ ಈ ಆಗ್ರಹ ಬೇಡ । ಜನ್ಮಜನ್ಮಾಂತರದಲ್ಲಿಯೂ ನನ್ನ ಮನಸ್ಸನ್ನು ನಿನ್ನ ಚರಣದಲ್ಲಿ ಇರುವಂತೆ (ನಿಲ್ಲುವಂತೆ) ಮಾಡು. ನನ್ನ ಮನಸ್ಸು ನಿನ್ನನ್ನೇ ವಿಷಯೀಕರಿಸುವ ಬುದ್ಧಿ, ಶ್ರಮವನ್ನು ಹೊಂದಲಿ । ಕಮಲಾಕಾಂತನು ಸಂಪ್ರೀತನಾಗಲಿ । ಸಜ್ಜನರು ನನ್ನ ಮೇಲೆ ಕೃಪಾಮತಿಯುಳ್ಳವರಾಗಲಿ । ಸ್ವಬಿಂಬಮೂರ್ತಿಗೆ ಅರ್ಪಿತವಾದುದನ್ನು ಭುಂಜಿಸುವವನು ಸಂಪೂರ್ಣ ಫಲವನ್ನು ಪಡೆಯುತ್ತಾನೆ, ಇತ್ಯಾದಿ ಪ್ರಾಚೀನ ಪ್ರಮಾಣವಾಕ್ಯಗಳ ಸರಿಯಾದ ತಾತ್ಪರ್ಯವನ್ನು ಈ ಸಂಧಿಯಲ್ಲಿ ತೋರಿಸುತ್ತಾರೆ. ಶ್ರೀಹರಿಯ ಪಾದಸ್ತವನವನ್ನು ಮಾಡಲು, ಗುರುರಾಜರನ್ನು ನಮಿಸಿ. ಸಂಧಿಯನ್ನು **"ಹರಿ"**-ಈ ಪದ್ಯದಿಂದ ಉಪಕ್ರಮಿತ್ತಾರೆ.

"ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣಃ ಮಾನಂ ಜನಾದ ವಿದುಷೋ ವೃಣುತೇ."

ಈ ಪದ್ಯದಲ್ಲಿ (ಭಾಗವತ ಸಪ್ತಮಸ್ಕಂದ ಪ್ರಹ್ಲಾದ ಕೃತ ನೃಸಿಂಹ ಸ್ತುತಿ) "ಪರಮಾತ್ಮನು ನಿಜಲಾಭ ಪೂರ್ಣನು''. (ನಿತ್ಯ ಪೂರ್ಣಸಂತೃಪ್ತನು) ಎಂದು ಹೇಳಲಾಗಿದೆ. ಆದುದರಿಂದ, ನಾವು ಸಮರ್ಪಿಸಿದ ನೈವೇದ್ಯಾನ್ನಾದಿಗಳನ್ನು ಕೇವಲ ದಯೆಯಿಂದಲೇ ಶ್ರೀಹರಿಯು ಸ್ವೀಕರಿಸುತ್ತಾನೆ

ಆದುದರಿಂದ, ಕನ್ನಡಿಯು ಅಲಂಕರಣವು ನನ್ನ ಮುಖದ ಅಲಂಕಾರಕ್ಕಾಗಿ ಇರುವುದೆಂದು, ಇದರಿಂದ ವ್ಯಕ್ತವಾಗುತ್ತದೆ.

ಇಲ್ಲಿ ಈ ಸಂಶಯವು ಬರುತ್ತದೆ. ಶ್ರೀಹರಿಯು ರಮಾರಮಣ (ರಮಾದೇವಿಯರಲ್ಲಿ ರತಿ ವಿಹಾರ ಮಾಡುವವನು). ಆದುದರಿಂದ, ಸ್ವರತ ನೆಂಬುದು ಹೇಗೆ ? ಇದರ ಉತ್ತರ-ವಾಕ್ಯಳನ್ನು ಪಡೆಯುವುದೇ ರತಿಯು ಅಥವಾ ಸತಿಯರ ಫಲವಾಗಿರುತ್ತದೆ. ಆದುದರಿಂದ, ಪರಮಾತ್ಮನಿಗೆ ರತಿ ಯಿಲ್ಲದಿದ್ದರೂ, ಸುಖೋತ್ಪತ್ತಿಯಾಗುತ್ತದೆ. ತಾನೂ ತನ್ನ ಸುರತ ಲಾಭ ಕ್ಕಾಗಿ. ರಮಾದೇವಿಯರೊಡನೆ ರತಿಯನ್ನು ಪಡೆಯುವ ಕಾರಣವಿಲ್ಲ. ಆದರೂ, ಆಕೆಯು ಪರಮಾತ್ಮನಲ್ಲಿ ಅತ್ಯುಚ್ಚಭಕ್ತ್ಯುದ್ರೇಕವುಳ್ಳವಳು. ಆದುದರಿಂದ, ಪರಮಭಕ್ತಳಾದುದರಿಂದ, ಪರಮಾತ್ಮನು ಅವಳ ಸುಖಕ್ಕಾಗಿ ಅಲ್ಲಿ ರತಿಕ್ರೀಡಿಸುವವನೇ ಹೊರತು, ಕೇವಲ ಭಾರ್ಯಾತ್ವೇನ ಸ್ವಾರ್ಥಕ್ಕಾಗಿ ವಿಹರಿಸುವುದಿಲ್ಲ. ಈ ವಿಷಯವನ್ನು ಲೆಕ್ಕಿಸದೆ, ಈ ಪದ್ಯದಿಂದ ನಿರೂಪಿ ಸುತ್ತಾರೆ. "ಪೊಸ ಪೊಂಬಕ್ಕಿ"-ಹೊಸ ಬಂಗಾರದಂತಿರುವ ಪಕ್ಷವುಳ್ಳ ಪಕ್ಷಿ ಅಥವಾ ಗರುಡ ಪಕ್ಷಿ.

"ಅಂತಃಕರಣದೊಳಗೆ"-ಅಂತಃಕರಣ (ಹೃದಯ)ದಲ್ಲಿಟ್ಟು. ॥೧॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ದೇವರ ಭಕ್ತವಾತ್ಸಲ್ಯಾತಿಶಯವು ಸಾಕನಾವಕವರೂಪ ಪ್ರಕಾರಾಂತರ ಚಿಂತನೆಯು, ಸರ್ವಚೇಷ್ಟಾಪ್ರವರ್ತಕತ್ವವು. ಸರ್ವತ್ರ ದೇವರ ಕಾಣುವ ಬಗೆಯು, ತತ್ತ್ವೇಶದೇವತೆಗಳು ಪೂಜಾಕಾಲದಲ್ಲಿ ಹರಿಸೇವಕರೆಂಬ ಭಾವನೆ-ಮೊದಲಾದ ಹರಿಕಥೆಯೆಂಬ ಮೋಕ್ಷಸಾಧನರೂಪ ಕಥಾಸಾರವನ್ನು ಗುರು ಕೃಪಾಬಲದಿಂದ ವಿವರಿಸುವೆನು. ಪರಮಹರಿಭಕ್ತರು ಕೇಳಬೇಕರು. ॥೧॥
॥ಸಂ।ಸೂ॥

ಪೊಸ ಪೊಂಬಕ್ಕಿದೇರನೆಂಬ ನೂತನ ಸ್ವರ್ಣಪ್ರಕಾಶ ಗರುಡನನ್ನೇ ಕೇರಾಗಿ ಉಳ್ಳ ಶ್ರೀಹರಿಯು, ಲಕ್ಷ್ಮಿಯನ್ನು ಲಕ್ಷ್ಯಮಾಡದೆ, ಬ್ರಹ್ಮದೇವರನ್ನು ತನ್ನ ಹೊಕ್ಕಳಿಂದ ಸೃಷ್ಟಿಸಿದನು. ತನ್ನ ಮುಖ ಮೊದಲಾದ ಅವಯವಗಳಿಂದ ಇಂದ್ರಾದಿ ದೇವತೆಗಳನ್ನು ಪಡೆದನು. ಸದಾ ಸರ್ವರನ್ನೂ ಮಕ್ಕಳಂತೆ ಸಂರಕ್ಷಿಸುವನು. ನಿರ್ದುಃಖ ಸುಖಸ್ವರೂಪನಾಗಿ ಪರಾಪೇಕ್ಷೆಯಿಲ್ಲದಿದ್ದರೂ, ಭಕ್ತವಾತ್ಸಲ್ಯದಿಂದ ಪಾರ್ಥನೆಂಬ ಅರ್ಜುನನನ್ನು ರಣದಲ್ಲಿ ಸೂತನೆಂಬ ಸಾರಥಿಯಾಗಿ ಸರ್ವಾಪತ್ತಿನಿಂದಲೂ ರಕ್ಷಿಸಿ ಪೋಷಿಸಿದನು. ॥೧॥

## ಸರ್ವವ್ಯಾಖ್ಯಾನಸಾರ ಸಂಗ್ರಹ

1. ಅಪಾರಮಹಿಮಾಸಂಪನ್ನನಾದ ಶ್ರೀಪರಮಾತ್ಮನು ಪದ್ಮಕಲ್ಪದಲ್ಲಿ ಕ್ಷೀರಸಾಗರದಲ್ಲಿ ಪವಡಿಸಿದನು. ಆಗ, ಅವನ ಇಚ್ಛಾಮಾತ್ರದಿಂದ, ನಾಭೀಎಂಬ ಮಡುವಿನಿಂದ ಕಮಲವು ಉತ್ಪನ್ನವಾಯಿತು. ಆ ಕಮಲವು ಶ್ರೀಲಕ್ಷ್ಮೀದೇವಿಯ ಸಾನ್ನಿಧ್ಯದಿಂದ ಸುವರ್ಣಾತ್ಮಕವಾಯಿತು. ಆ ನಾಭೀ–ಕಮಲದಿಂದ ಚತುರ್ಮುಖ ಬ್ರಹ್ಮದೇವರು ಉತ್ಪನ್ನರಾದರು. ಶ್ರೀಹರಿಯು ಸ್ವರಮಣನು, ಸ್ವರತನು, ಆಪ್ತಕಾಮನು, ಪರಾಪೇಕ್ಷಾರಹಿತನು, ಶ್ರೀಲಕ್ಷ್ಮೀದೇವಿಯರನ್ನು ಲಕ್ಷ್ಯಕ್ಕೆ ತಾರದೇ, ನಾಭಿಯಿಂದ ಕಮಲದ್ವಾರಾ, ಬ್ರಹ್ಮದೇವರ ಸೃಷ್ಟಿಸಿದ ಸ್ವರಮಣನು.

ಇಲ್ಲಿ, ಶ್ರೀಲಕ್ಷ್ಮೀದೇವಿಯನ್ನು ಅಲಕ್ಷಿಸದನೆಂದರ್ಥವಲ್ಲ. ಜಗತ್ತಿನ ಸೃಷ್ಟಿಗೆ ಮುಖ್ಯಕಾರಣನು ಶ್ರೀಹರಿ, ಚಿತ್ಪ್ರಕೃತಿನಾಮಕಳಾದ ಶ್ರೀರಮಾ ಉಪಾದಾನ ಕಾರಣಳೆಂದು ತಿಳಿಯಬೇಕು. ಶ್ರೀ ರಮಾದೇವಿಯರ ಆನಂದ ಉನ್ಮಾಹಕ್ಕಾಗಿ, ಅಕೆಯನ್ನು ಜಗತ್ಸೃಷ್ಟ್ಯಾದಿ ವ್ಯಾಪಾರಗಳಲ್ಲಿ ನಿಯೋಜಿಸುವನು, ಜಗತ್ಸೃಷ್ಟಿ ಉಪಾದಾನ ಕಾರಣವು ಸೂಕ್ಷ್ಮ ಮೂಲಪ್ರಕೃತಿ. ಜಡಾತ್ಮಕವಾದ ಈ ಪ್ರಕೃತಿಯ ಸಹಜ ಗುಣಗಳು ಸತ್ವ–ರಜ-ತಮ-ಎಂಬ ಗುಣತ್ರಯಗಳು. ಈ ಗುಣತ್ರಯಗಳಿಗೆ ಅಭಿಮಾನಿ ಶ್ರೀಲಕ್ಷ್ಮೀದೇವಿ. ಗುಣ ವೈಷಮ್ಯದಿಂದ ಸೃಷ್ಟಿ.

2. ನಿತ್ಯನೂತನ ನೂತನವಾಗಿ ವಿರಾಜಿಸುವ ವಿರಾಡ್ರೂಪಿ ವಿಠ್ಠಲನು 'ಪೊಸ'—ಶಬ್ದವಾಚ್ಯನು. ಅಂದರೆ, ನಿತ್ಯ ನೂತನವೆಂದರ್ಥ.

3. **ಪೊಂಬಕ್ಕಿದೇರನು :-**

ಪೊನ್ನು + ಹಕ್ಕಿ = ಪೊಂಬಕ್ಕಿ, ಅಂದರೆ, ಸುವರ್ಣಾತ್ಮಕವಾದ, ಹೊಂಬಣ್ಣವುಳ್ಳ ಪಕ್ಷಿ. ಅವರೇ ಶ್ರೀಗರುಡದೇವರು. ಅವರನ್ನೇ 'ದೇರ'- ಅಂದರೆ, ತೇರನ್ನಾಗಿ (ವಾಹನ) ಉಳ್ಳವನು— ಗರುಡವಾಹನನಾದ ಶ್ರೀಹರಿಯು. ಇದರಿಂದ, **ಪೊಂಬಕ್ಕಿದೇರನು.**

4. ಅಂತಹ ಪೊಂಬಕ್ಕಿದೇರನು ಸ್ವಯಂ ತನ್ನ ವಿವಿಧ ಅವಯವ- ಗಳಿಂದ ಅಂಡದ ಒಳಗೆ ವೈರಾಜ್ಯಸೃಷ್ಟಿಯಲ್ಲಿ ಸಕಲದೇವತೆಗಳನ್ನು ಸೃಷ್ಟಿ ಸಿದನು. ಅವನ ಕರಚರಣಾದ್ಯವಯವಗಳಿಂದ ದೇವತಾವರ್ಗದ ಸೃಷ್ಟಿ.

''ಚಂದ್ರಮಾ ಮನಸೋಜಾತ: ಸೂರ್ಯೋಚಕ್ಷುರಜಾಯತ''- **ಪುರುಷಸೂಕ್ತವಾಕ್ಯ.**

5. ಮಾತಾಪಿತೃಗಳು ತಮ್ಮ ಮಕ್ಕಳನ್ನು ಪ್ರೀತಿ ವಾತ್ಸಲ್ಯದಿಂದ ಸಾಕಿ ಸಂರಕ್ಷಿಸುವಂತೆ, ಜಗಜ್ಜನಕನಾದ ಜಗದೀಶನು ಸರ್ವಜೀವವನ್ನು ತನ್ನ ಮಕ್ಕಳೋಪಾದಿ ಸಂರಕ್ಷಿಸುವನು.

6. ಸರ್ವದಾ ಮಕ್ಕಳಂದದಿ ಪೊರೆವ ಜಗದ್ರಕ್ಷಕನು ದೈತ್ಯಕುಲ ಕುಠಾರಿಯು. ದುಷ್ಟದೈತ್ಯರ ಸಂಹಾರದ್ವಾರಾ, ಶಿಷ್ಟರ ಪರಿಪಾಲನೆ ಮತ್ತು ಧರ್ಮಸಂಸ್ಥಾಪನೆಯೇ, ಆ ಧರ್ಮಸ್ವರೂಪನನು ವ್ಯಾಪಾರ ವಿಶೇಷ. ಇದರಿಂದ, **ರಕ್ಕಸಾಂತಕನು.** (ಅಂತಕ-ದೈತ್ಯರ ಪಾಲಿಗೆ ಯಮ ಸ್ವರೂಪನು. ಮೃತ್ಯುಸ್ವರೂಪನು).

7. ಜೀವ ಜಡರುಗಳಿಂದ ಅತ್ಯಂತ ಭಿನ್ನನಾದ ಆ ಸರ್ವೇಶ್ವರನು ಅಪ್ರಾಕೃತ. ಆನಂದಸ್ವರೂಪನು. ದುಃಖ ಕ್ಲೇಶಾದಿಗಳ ಸಂಪರ್ಕವೇ ಅನಾದ್ಯನಂತಕಾಲದಿಂದಲೂ ಅವನಿಗಿಲ್ಲ. ಇದರಿಂದ **ನಿರ್ದುಃಖನು**.

8. ಅಂತಹ ನಿದುಃಖನಾದ ನಿರಂಜನನು ಸದಾ ಆನಂದಉದ್ರಿಕ್ತನು. ಪರಮಾನಂದಮಯನು. ಇದರಿಂದ **ಸುಖಮಯನು**, ಅಪ್ರಾಕೃತ ಜಗದ್ವಿಲಕ್ಷಣವಾದ ಆನಂದವೇ — ಅವನ ಸ್ವರೂಪವು.

9. ಕುರುಕ್ಷೇತ್ರದ ಮಹಾಸಮರಾಂಗಣದಲ್ಲಿ ಮಧ್ಯಮಪಾಂಡವನ ಸಾರಥಿಯಾಗಿ, ಗೀತೋಪದೇಶ ದ್ವಾರಾ, ಅವನ ಸಂಶಯಗಳನ್ನು ನಿವಾರಿಸಿ, ಪಾರ್ಥನಿಗೆ ತಾನು ಶತ್ರುಗಳಿಂದ ಅವನ ಪ್ರಾಣವನ್ನು ಸಂರಕ್ಷಿಸಿದ ಪಾರ್ಥಸಖನು ಮತ್ತು ಅವನ ಒಡಿಜೋವನು. ॥ ೮ ॥

## ಪದ್ಯ-೨

ಮೂಲ :—

**ದೋಷ ಗಂಧ ವಿದೂರ ನಾನಾ ।**
**ವೇಷಧಾರಿ ವಿಚಿತ್ರಕರ್ಮ ಮ ।**
**ನೀಷಿ ಮಾಯಾರಮಣ ಮಧ್ವಾಂತಃಕರಣರೂಢ ॥**
**ಶೇಷಶಾಯಿ ಶರಣ್ಯ ಕೌಸ್ತುಭ ।**
**ಭೂಷಣ ಸುಕಂಧರ ಸದಾ ಸಂ ।**
**ತೋಷ ಬಲ ಸೌಂದರ್ಯಸಾರನ ಮಹಿಮಗೇನೆಂಬೆ ॥ ೨ ॥**

**ಅವತರಣಿಕೆ :**

ಶ್ರೀಪರಮಾತ್ಮನ ಮಹಿಮಾವಿಶೇಷಗಳನ್ನು ಸ್ತೋತ್ರಪೂರ್ವಕ ತಿಳಿಸುತ್ತಾರೆ. ॥ ೨ ॥

**ಪ್ರತಿಪದಾರ್ಥ** :

**ಮಾಯಾರಮಣ** = ಮಾಯಾನಾಮಕಳಾದ ಶ್ರೀಲಕ್ಷ್ಮೀದೇವಿಯರಿಗೆ ಪತಿಯಾದ ಶ್ರೀವಾಸುದೇವರೂಪೀ ಪರಮಾತ್ಮನು. **ದೋಷಗಂಧವಿದೂರನು** ಲವಲೇಶವೂ ದೋಷಗಳ ಸಂಪರ್ಕವಿಲ್ಲದವ. ಅಂದರೆ, ಸಂಪೂರ್ಣ ಗುಣ ಯುತನಾದವನು. **ನಾನಾವೇಷಧಾರಿ**= ನಾನಾ ವಿಧವಾದ ಆಕಾರವಿಶಿಷ್ಟರಾದ ಜೀವರಲ್ಲಿ ತದಾಕಾರನಾಗಿ, ಅಂತರ್ಗತನಾಗಿ ಬಿಂಬರೂಪದಿಂದ ಇರುವವನು. (ಬಹುರೂಪ-ಆಕಾರಧಾರಿಯು). **ವಿಚಿತ್ರಕರ್ಮ**= ಆಯಾಯ ಜೀವರ ಸ್ವರೂಪ ಸ್ವಭಾವಗಳನ್ನು ಅನುಸರಿಸಿ, ಅದರಂತೆ, ಚಿತ್ರವಿಚಿತ್ರವಾದ ವ್ಯಾಪಾರಗಳನ್ನು ಮಾಡಿಸುವವನು. **ಮನೀಷಿ** = ಮಹಾಪ್ರಾಜ್ಞಾಣಿ ಗಳಿಂದ. (ಪೂರ್ಣಬೋಧರಾದ) **ಮಧ್ವಾಂತಃಕರಣರೂಢ** = ಶ್ರೀಮನ್ಮಧ್ವಾ ಚಾರ್ಯರ ಅಂತಃಕರಣದಲ್ಲಿ ಸಂಸ್ಥಿತನಾದವನು. (ಮಧ್ವಮಾನಸಮಂದಿರನು). **ಶೇಷಶಾಯಿ** = ಶ್ರೀಶೇಷದೇವರನ್ನೇ ಹಾಸಿಗೆಯನ್ನಾಗಿ ಉಳ್ಳವನು. **ಶರಣ್ಯ**= ತನ್ನ ಭಕ್ತಜನರಿಗೆ ಆಶ್ರಯಪ್ರದನು. (ಶರಣಾಗತವತ್ಸಲನು). **ಸುಕಂಧರ**= ಮನೋಹರವಾದ ತನ್ನ ಕಂಠದಲ್ಲಿ, **ಕೌಸ್ತುಭ ಭೂಷಣ**= ಕೌಸ್ತುಭ—ಎಂಬ ಆಭರಣವಿಶೇಷದಿಂದ ಅಲಂಕೃತನಾದವನು. **ಸದಾ** = ನಿರಂತರದಲ್ಲೂ, (ಅನಾದ್ಯನಂತ ಕಾಲದಿಂದಲೂ). **ಸಂತೋಷ** = ಆನಂದ ವೇನು, **ಬಲ** = ಶರೀರ ದಾರ್ಢ್ಯರೂಪವಾದ ಪರಾಕ್ರಮವೇನು, **ಸೌಂದರ್ಯ** = ಅನುಪಮ ಲಾವಣ್ಯಾತಿಶಯವೇನು, **ಸಾರನ** = ಅವುಗಳ ಸ್ವರೂಪವೇ (ಮಯ) ಆಗಿರುವ **ಶ್ರೀ** ಪರಮಾತ್ಮನ, **ಮಹಿಮೆ ಗೇನೆಂಬೆ** = ಅಗಣಿತ ಅಪಾರವಾದ ಮಹಾತ್ಮ್ಯಗಳನ್ನು ಏನೆಂದು ಹೇಳಲಿ ? ಸಾಕಲ್ಯೇನ ರಮಾಬ್ರಹ್ಮಾದಿಗಳಿಗೇ ಸ್ತೋತ್ರ ಮಾಡಲು ಸಾಧ್ಯವಿಲ್ಲದಂತಹ ಅಪಾರಮಹಿಮಾ ಸಂಪನ್ನನೆಂದು ತಾತ್ಪರ್ಯ. ॥ ೨ ॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :

ಶ್ರೀದೇವರನ್ನು ಸ್ತೋತ್ರಮಾಡಿ, ಅವನ ಮಹಿಮಾ ಏನಂತ ಹೇಳಲಿ?- ಎಂತ ಹೇಳುತ್ತಾರೆ.

ಮಾಯಾನಾಮಕ ಲಕ್ಷ್ಮೀದೇವಿಗೆ ಪತಿಯಾದ ಶ್ರೀವಾಸುದೇವರೂಪಿ ಪರಮಾತ್ಮ ಎಂಥಾವನೆಂದರೆ- **ಅಪೂರ್ಣವಾದ ಗುಣದೆಂಬ ವಾಸನಿಯಿಂದ ದೂರನಾದವ. ಅಂದರೆ,** ಸಂಪೂರ್ಣ ಗುಣೋಪೇತನಾದವ. ಪ್ರಾಣಿಗಳು ನಾನಾ ವಿಧವಾದ ಆಕಾರವಿಶಿಷ್ಟರು. ಅವರಂತೆ, ಅಂತರ್ಗತದಲ್ಲಿ ಬಿಂಬ ನಾಗಿದ್ದಾನೆ. ಆದಕಾರಣದಿಂದ, ಶ್ರೀ ಪರಮಾತ್ಮ ಬಹುರೂಪ-ಎಂತ ನಾಮ ಪಡೆದವ, ಆಯಾ ಪ್ರಾಣಿಗಳ ಸ್ವರೂಪ ಸ್ವಭಾವವನ್ನನುಸರಿದ ಕರ್ಮ ಮಾಡಿಸತಕ್ಕವ. ಮಹಾಪ್ರಾಜ್ಞಶಾಲಿಯಾದವ, ಶ್ರೀಮಧ್ವಾಚಾರ್ಯರ ಅಂತಃಕರಣಕ್ಕೆ ಪಾತ್ರರಾದವರಿಗೆ ಪ್ರತ್ಯಕ್ಷನಾಗತಕ್ಕವ. ಶೇಷದೇವರ ಮೇಲೆ ಮಲಗಿ ಇರತಕ್ಕವ. ತನ್ನ ಭಕ್ತಜನರಿಂದ ವಂದನೆ ಮಾಡಿಸಿಕೋತಕ್ಕವ. ಸುಮನೋಹರವಾದ ಕಂಠದಲ್ಲಿ ಕೌಸ್ತುಭನಾಮಕ ಆಭರಣದಿಂದ ಅಲಂಕೃತ ನಾದವ. ನಿರಂತರದಲ್ಲೂ ಆನಂದವೇನು, ಶರೀರದಾರಢ್ಯವೇನು, ಉಪ ಮಾನರಹಿತವಾದ ಶರೀರ ಕಾಂತಿಯೇನು, ಇವುಗಳಿಗೆ ಆಸ್ಪದನಾದ ಶ್ರೀಪರಮಾತ್ಮನ ಮಹಾತ್ಮೆಗೆ ಏನಂತ ಹೇಳಲಿ ? ಇವನ ಮಹಾತ್ಮ್ಯ ರಮಾ ಬ್ರಹ್ಮಾದಿಗಳಿಗೇ ಹೇಳೋದಕ್ಕೆ ಆಗಲಾರದು— ಎಂತ ಹೇಳಿದ್ದಾರೆಂದು ತಾತ್ಪರ್ಯ. ॥ ೧ ॥

## ೨. ಭಾವಪ್ರಕಾಶಿಕೆ :

ಲೇಶಮಾತ್ರವಾದರೂ, ದೋಷಸಂಬಂಧವಿಲ್ಲದವನು. ಅನೇಕ ಅವತಾರಗಳನ್ನು ಮಾಡಿದವನು. ಆಶ್ಚರ್ಯಕರವಾದ ಕರ್ಮ, ವಿಚಿತ್ರ

ಬುದ್ಧಿಯುಳ್ಳವನು. ಮಾಯಾನಾಮಕ ಶ್ರೀಲಕ್ಷ್ಮೀದೇವಿಯರಿಗೆ ಪತಿಯಾದವನು. ಶ್ರೀಮನ್ಮಧ್ವಾಚಾರ್ಯರ ಮನಸ್ಸಿನಲ್ಲಿ ಸರ್ವದಾ ನೆಲೆಸಿರುವವನು. ಶೇಷಶಾಯಿ, ಮೊರೆಹೋಗಲು ಯೋಗ್ಯನು, ಕೌಸ್ತುಭ ಮಾಣಿಕ್ಯದಿಂದ ಭೂಷಿತವಾದ ಕತ್ತುಳ್ಳವನು. ಸರ್ವದಾ ಆನಂದಸ್ವರೂಪನು. ಬಲಪೂರ್ಣನು. ಸೌಂದರ್ಯದ ಗಣಿಯು, ಇಂತಹ ಭಗವಂತನ ಮಹಿಮೆಯನ್ನು ಏನೆಂದು ವರ್ಣಿಸುವೆ ?. ॥ ೨ ॥

## ೩. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :

"ದೋಷಗಂಧವಿದೂರ"—ಗಂಧ = ಲೇಶ, ಸ್ವಲ್ಪವೂ ದೋಷವಿಲ್ಲದವನು. ॥ ೨ ॥

## ಶ್ರೀಗುರುಹೃದಯ ಪ್ರಕಾಶಿಕೆ :

ದೋಷಲೇಶವು ಇಲ್ಲದವನು. ನಾನಾ ವೇಷವೆಂಬ ಅನೇಕ ರೂಪ ಪ್ರಕಾಶನು. ವಿಚಿತ್ರವಾದ ಜಗತ್ಸೃಷ್ಟ್ಯಾದಿ ವ್ಯಾಪಾರವುಳ್ಳವನು. ಮನೀಷಿ—ಎಂಬ ಸರ್ವಜ್ಞನು. ಮಾಯಾದೇವಿ—ಎಂಬ ಲಕ್ಷ್ಮೀಪತಿಯು ಮಧ್ವಾಚಾರ್ಯರ ಅಂತಃಕರಣವೆಂಬ ಮನಸ್ಸಿನಲ್ಲಿ ವಿಶೇಷಸನ್ನಿಧಿಯಿಂದ ಇರುವವನು, ಶೇಷದೇವರೇ ಶಯನನಾಗಿ ಉಳ್ಳವನು. ಶರಣ್ಯನೆಂಬ ಸರ್ವಾಶ್ರಯನು. ಬ್ರಹ್ಮದೇವರೇ ಅಭಿಮಾನಿಯಾಗಿರುವ ಕೌಸ್ತುಭರತ್ನದಿಂದ ಅಲಂಕೃತವಾದ ಕಂಠವುಳ್ಳವನು. ಸ್ವರೂಪ ಸುಗಂಧ ರಸ ಸೌಂದರ್ಯ ಮುಖ್ಯದೇಹನಾದ ಶ್ರೀಹರಿಯ ಮಹಿಮೆಗೆ ಏನೆಂಬೆ ? ಅಂದರೆ, ಅನಂತವಾದ್ದರಿಂದ, ಮಹಿಮೆ ಕೊನೆಗಾಣುವುದಿಲ್ಲವೆಂದರ್ಥ. ॥ ೨ ॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ಅನಾದ್ಯನಂತಕಾಲದಿಂದಲೂ, ಶ್ರೀಪರಮಾತ್ಮನು ನಿರ್ದೋಷನು. ದೋಷವೆಂಬುದು ಲವಲೇಶವಾದರೂ ಅವನಲ್ಲಿ ಯಾವಾಗಲೂ ಇಲ್ಲವೇ ಇಲ್ಲ.

ಅಂತಹ ಶುದ್ಧಸ್ವರೂಪನು. ಅನಂತ ಕಲ್ಯಾಣ ಗುಣಗಧಾಮನು. ದೋಷದ ಗಂಧವೇ (ಸಂಪರ್ಕ-ಲೇಪ) ಇಲ್ಲವಾದುದರಿಂದ-**ದೋಷಗಂಧವಿದೂರನು.**

೨. ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಸರ್ವತ್ರ ವ್ಯಾಪಕನು. ಜೀವರಲ್ಲಿ ಜೀವರ ಆಕಾರನಾಗಿ ತದ್ರೂಪಿಯಾಗಿ ಅಂತರ್ಯಾಮಿಯಾಗಿರುವನು. ಜಡವಸ್ತುಗಳ ಕಣಕಣಗಳಲ್ಲಿ ತದಾಕಾರನಾಗಿ, ತತ್ತದ್ರೂಪನಾಗಿ ವ್ಯಾಪ್ತರೂಪಗಳಿಂದ ಇದ್ದಾನೆ. ಧರ್ಮಸಂಸ್ಥಾಪನೆಗಾಗಿ, ಸಜ್ಜನರ ಸಂರಕ್ಷಣೆಗಾಗಿ, ನಾನಾ ಅವತಾರಗಳನ್ನು ಎತ್ತಿ, ಅದಕ್ಕನುಗುಣವಾದ ವೇಷಭೂಷಣಧಾರಿಯಾಗಿರುವನು. ಇದರಿಂದ **ನಾನಾವೇಷಧಾರಿಯು.**

೩. ದೋಷಗಂಧವಿದೂರನೂ, ನಾನುವೇಷಧಾರಿಯೂ ಆದ ಶ್ರೀಪರಮಾತ್ಮನು ಅತ್ಯಾಶ್ಚರ್ಯಕವಾದ ಚಿತ್ರವಿಚಿತ್ರವಾದ ಕ್ರಿಯಾವಿಶೇಷಗಳುಳ್ಳವನು. ಅವನ ಜಗದ್ವ್ಯಾಪಾರರೂಪವಾದ ಕಾರ್ಯವಿಶೇಷಗಳೆಲ್ಲವೂ ಪರಮಾದ್ಭುತ, ಅಗಣಿತ, ಅಪಾರ. ಇದರಿಂದ–**ವಿಚಿತ್ರಕರ್ಮನು.**

೪. ಶ್ರೀವಾಯುದೇವರ ತೃತೀಯಾವತಾರಭೂತರಾದ ಆಚಾರ್ಯ ಮಧ್ವರು ಮಹಾಪ್ರಾಜ್ಞಶಾಲಿಗಳು, ವಿಜ್ಞಾನತತ್ತ್ವಕ್ಕೆ ಅಭಿಮಾನಿಗಳು. ಸತ್ವಪ್ರಾಚುರ್ಯ ದೇಹವುಳ್ಳವರು. ಅತಿರೋಹಿತವಿಮಲ ವಿಜ್ಞಾನಿಗಳು. ಇದರಿಂದ **ಮುನೀಷಿ** —ಎಂದಿದ್ದಾರೆ.

೫. ಶ್ರೀಮಧುಸೂದನನು ಮುನೀಷಿಗಳಾದ ಮಧ್ವಮಾನ ಮಂದಿರನು. ಗುರುಮಧ್ವರ ಅಂತಃಕರಣಸ್ಥನಾಗಿ, ಸದಾ ವಿರಾಜಮಾನನಾ ದ್ದಾನೆ. ಇದರಿಂದ, **ಮಧ್ವಾಂತಃಕರಣರೂಢ**—ಎಂದಿದ್ದಾರೆ. ಅಂತಃಕರಣ-ಮಾನಸವೆಂಬ ಮಂದಿರ, ರೂಢ—ಸದಾಸನ್ನಿಹಿತನಾಗಿ ನೆಲೆಸಿರುವವನು. ಶ್ರೀವಾಯುದೇವರಿಗೆ ಶ್ರೀಹರಿಯು ಪ್ರತ್ಯಕ್ಷಕ್ಕಾಗಿ ಸದಾ ವಿಷಯನು.

೬. ಮಾಯಾನಾಮಕರಾದ ಶ್ರೀಲಕ್ಷ್ಮೀದೇವಿಯು ರಮಣನಾ
ಶ್ರೀವಾಸುದೇವರೂಪೀ ಪರಮಾತ್ಮನು — **ಮಾಯಾರಮಣನು**.

೭. ಶೇಷದೇವರನ್ನೇ ಹಾಸಿಗೆಯನ್ನಾಗಿ ಉಳ್ಳವನು. ಇದರಿಂ
**ಶೇಷಾಶಾಯಿಯು**. (ಶಾಯಿ—ಹಾಸಿಗೆಯನ್ನಾಗಿ ಉಳ್ಳವನು. ಶಯನ
ಶಾಯಿ).

೮. ಅಂತಹ ಶೇಷಶಾಯಿಯು ಸರ್ವರಿಂದಲೂ ವಂದ್ಯನು. ಸಕ
ಸಜ್ಜನರೂ ಅವನಿಗೆ ಮರೆಹೋಗುವರು. ಇದರಿಂದ **ಶರಣ್ಯನು**.

೯. ಶರಣ್ಯನಾಮಕನಾದ ಶತಾನಂದನಪಿತನ ಕೊರಳಿನಲ್ಲಿ **ಕೌಸ್ತು**
**ಎಂಬ** ಪದಕವು ಸದಾ ಶೋಭಾಯಮಾನವಾಗಿರುವುದು. ಇದರಿಂ
**ಕೌಸ್ತುಭಭೂಷಣ ಸುಕಂಧರನು**.

ಇಲ್ಲಿ—"ಸುಕಂಧರ"—ಎಂಬ ಶಬ್ದವನ್ನು ಪ್ರಯೋಗಿಸಿದ್ದಾರ
ದಾಸಾರ್ಯರು. "ಸು"-ಶಬ್ದವೆಂದರೆ ಸಮೀಚೀನವಾದ ಎಂದರ್ಥ. ಅಂದ
ಅವ್ಯಾಕೃತವಾದ ಜಗದ್ವಿಲಕ್ಷಣ ರೂಪವಾದ ಕಂಧರ-ಕತ್ತು (ಕಂಠ) ಎಂ
ತಾತ್ಪರ್ಯ. ಅಂತಹ ಸುಂದರವಾದ ಸುಕಂಧರರಲ್ಲಿ ಬ್ರಹ್ಮದೇವ
ಕೌಸ್ತುಭಮಣಿಯ ರೂಪದಲ್ಲಿ ಶ್ರೀಹರಿಯನ್ನು ನಿತ್ಯ ಸೇವಿಸುತ್ತಿರುವರ
ಅವರಲ್ಲಿ ಶ್ರೀಲಕ್ಷ್ಮಿಯ ಸನ್ನಿಧಾನ ವಿಶೇಷ.

೧೦. ಕೌಸ್ತುಭ ವಿಭೂಷಿತ ಸುಕಂಧರನು, ಸದಾ ಸರ್ವಕಾಲಗಳಲ್ಲಿ
ಆದರೆ, ಅನಾದ್ಯನಂತಕಾಲದಿಂದಲೂ ಆನಂದಸ್ವರೂಪನು (ಸಂತೋಷ
ಅಸದೃಶಪರಾಕ್ರಮಿಯು (ಬಲ). ಸೌಂದರ್ಯವೆಂಬ ಗುಣಗಳಸಾರಭೂತನ
ನಿರತಿಶಯ ಲಾವಣ್ಯಮೂರ್ತಿಯು.

ಇಂತಹ ಜ್ಞಾನಾನಂದಸ್ವರೂಪಿಯೂ, ಬಲಾಢ್ಯನೂ, ಲಾವ
ಸಾರನೂ ಆದ ಆ ಅನಂತನ ಮಹಿಮಾತಿಶಯಗಳನ್ನು ನಾನು ಹೇಗ
ವರ್ಣಿಸಲಿ ? — ಎಂದು ಉದ್ಗಾರ ತೆಗೆದಿದ್ದಾರೆ — ದಾಸಶ್ರೇಷ್ಠರು. ॥ ೨

## ಪದ್ಯ ೨

**ಮೂಲ :**

ಸಾಶನಾಶನೇ ಅಭೀ ಎಂ ||
ಬೀ ಶ್ರುತಿಪ್ರತಿಪಾದ್ಯನೆನಿಸುವ |
ಕೇಶವನ ರೂಪದ್ವಯವ ಚಿದ್ದೇಹ ಒಳಹೊರಗೆ |
ಬೀಸರದೆ ಸದ್ಭಕ್ತಿಯಿಂದ ಉ |
ಪಾಸನೆಯ ಗೈಯುತ್ತ ಬುಧರು ಹು |
ತಾಶನನವೋಲಿಪ್ಪ ನಂದನವರತ ತುತಿಸುತಿರು ||೨||

**ಅವತರಣಿಕೆ :**

ಶ್ರೀ ಪರಮಾತ್ಮನ "ಸಾಶನ–ಅಶನ - ರೂಪಗಳ ಪ್ರತ್ಯರ್ಥ ವಿಚಾರ ತಿಳಿಸುತ್ತಾರೆ. ||೨||

**ಪ್ರತಿಪಾದರ್ಥ :**

**ಸಾಶನ**=ಸರ್ವಜೀವರ ಸ್ಥೂಲ ದೇಹಗತವನ್ನಾಗಿದ್ದು. ಜೀವರು ಉಣ್ಣುವ ಭೋಜನ ವಸ್ತುಗಳಲ್ಲಿ ಸ್ವಾಖ್ಯರಸ ರೂಪದಿಂದ ಇರುವ ಅಂತರ್ಯಾಮಿ ರೂಪ ಒಂದು. **ಅನಶನ**=ಜೀವರ ಸ್ವರೂಪ, ದೇಹದಲ್ಲಿ (ಚಿದ್ದೇಹದಲ್ಲಿ) ಬೇರೆ ರೂಪದಿಂದಿದ್ದು ಉಣ್ಣದಿರುವ ರೂಪ ಮತ್ತೊಂದು, **ಅಭೀ**=ಪುರುಷ ಸೂಕ್ತವಾಕ್ಯದಂತೆ ಇತರರು ಅಭಿಧಾನಗಳಿಂದ (ಸ್ಥೂಲದೇಹಗತ ರೂಪ ಸಾಶನ. ಸ್ವರೂಪ ದೇಹಗತ ರೂಪ ಅನಶನ) **ಶ್ರುತಿಪ್ರತಿಪಾದನೆನಿಸುವ**=ಶ್ರುತಿಗತ ಪುರುಷಸೂಕ್ತ ಪ್ರತಿಪಾದ್ಯನಾದ, **ಕೇಶವನ**=ಶ್ರೀ ಕೇಶವಶಬ್ದವಾಚ್ಯನಾದ ಶ್ರೀಮನ್ನಾರಾಯಣನ, **ರೂಪದ್ವಯಂ**=ಸಾಶನ ಮತ್ತು ಅನಶನ ಎಂಬ-ಎರಡು ರೂಪ ವಿಶೇಷಗಳನ್ನು, **ಚಿದ್ದೇಹದ ಒಳಗೆ**=ಸ್ವರೂಪ ದೇಹವಲ್ಲಿ **ಹೊರಗೆ**=ಬಾಹ್ಯವಾಗಿರುವ ಸ್ಥೂಲ, ದೇಹ

ದಲ್ಲಿ. **ಬೇಸರದೆ**=ಬೇಜಾರು ಮಾಡಿಕೊಳ್ಳದೇ, **ಸದ್ಭಕ್ತಿಯಿಂದ** = ಮಹಾತ್ಮ್ಯ, ಜ್ಞಾನಪೂರ್ವಕವಾದ ಸುದೃಢಸ್ನೇಹ ಯುಕ್ತವಾದ ಭಕ್ತಿಪುರಸ್ಕರ ವಾಗಿ, **ಉಪಾಸನೆಯು**=ಧ್ಯಾನ-ಮನನ-ಚಿಂತನಾದಿಗಳಿಂದ, **ಗೈಯುತ್ತ** = ನಿರಂತರವೂ ಮಾಡುತ್ತಾ, **ಬುಧರು**=ಬ್ರಹ್ಮಜ್ಞಾನಿಗಳು, **ಹುತಾಶನನ ವೋಲ್**=ಅಗ್ನಿಯು ಕಾಷ್ಠಾದಿಗಳನ್ನು ಸುಟ್ಟು ನಾಶ ಮಾಡುತ್ತಾ, ಅವುಗಳಿಂದ ನಿರ್ಲಿಪ್ತನಾಗಿರುವಂತೆ, **ಇಪ್ಪನೆಂದೂ** ಬಿಂಬರೂಪಿಯಾದ ನಿರ್ದೋಷಿ ಯಾದ ಶ್ರೀ ಪರಮಾತ್ಮನು, ಪೂರ್ವೋಕ್ತ ರೂಪದ್ವಯಗಳಿಂದ ಇದ್ದಾನೆಂದು ತಿಳಿದು, **ಅನವರತ ತುತಿಸುತಿರು**=ಸದಾ ಸರ್ವಕಾಲಗಳಲ್ಲೂ ಕೊಂಡಾಡು ತ್ತಿರು ‖೩‖

## ವ್ಯಾಖ್ಯಾನಗಳು

### ೧ ಶ್ರೀ ಸಂಕರುರ್ಷಣ ಒಡೆಯರ ವ್ಯಾಖ್ಯಾನ

ಸಾಶನಾನಶನರೂಪಗಳ ಉಪಾಸನ ಮಾಡೆಂದು ಹೇಳುತ್ತಾರೆ.

ಪುರುಷಸೂಕ್ತದಲ್ಲಿ ಸಾಶನಾನಶನೇ ಅಭೀ-ಎನತಕ್ಕ ಶ್ರುತಿಯಿಂದ ಸರ್ವೋತ್ತಮನೆಂದು ಪ್ರತಿಪಾದ್ಯನಾದವ. ಈ ಪ್ರಕಾರ ಎನಿಸತಕ್ಕ ಶ್ರೀಕೇಶವ ಶಬ್ದವಾಚ್ಯ ಶ್ರೀನಾರಾಯಣ ದೇವರ ಸಾಶನ ರೂಪ ಒಂದು. ಅನಶನ ರೂಪ ಒಂದು. ಅಂತು ಎರಡು ರೂಪಗಳು. ಸರ್ವಪ್ರಾಣಿಗಳ ಸ್ವರೂಪ ದೇಹದ ಒಳಗೆ ಚಿತ್ ಎಂದರೆ, ಜ್ಞಾನ. ಜ್ಞಾನ ಸ್ವರೂಪರು ಮುಕ್ತಿ ಯೋಗ್ಯರು. ಅಜ್ಞಾನ ಸ್ವರೂಪರು ತಮೋಯೋಗ್ಯರು. ಚಿತ್-ಎಂಬ ಉಪಲಕ್ಷಣಯಾ, ತಮೋಯೋಗ್ಯರೂ ನಿತ್ಯಸಂಸಾರಿಗಳೂ ಗ್ರಾಹ್ಯ. ಅಂತು, ತ್ರಿವಿಧ ಜೀವರ ಸ್ವರೂಪದೇಹದಲ್ಲಿ ಅನಶನ ರೂಪ. ಜೀವನ ಅನಾದಿ ಸ್ವರೂಪಕ್ಕೆ ಪ್ರಾಕೃತ ಅನ್ನಾದಿಗಳ ಭೋಜನವೇನು, ಅದರಿಂದ, ಉಪಚಯ ಗಳೇನು ಇಲ್ಲದ, ಕಾರಣ ಜೀವ ಅನಶನ ಎಂತ ಕರಿಸಿದ. ಆ ಅಧಿಷ್ಠಾನಗತ ಬಿಂಬರೂಪ ಪರಮಾತ್ಮ ತನ್ನಾಮದಿಂದ ಅನಶನ-ಎಂತ ಕರೆಸೋವನಾದ. ಚಿದ್ದೇಹನ ರೂಪಕ್ಕೆ ಅನಶನ-ಎಂತ ನಾಮ. ಈ ಚಿದ್ದೇಹಕ್ಕೆ ಬಹಿಃ ಇರ

ತಕ್ಕದು ಸ್ಥೂಲದೇಹ. ಈ ದೇಹ. ಅನ್ನದಿಂದ ಪೋಷಿತವಾದದ್ದು. ಅದರಿಂದ ತದ್ಗತಬಿಂಬ ತನ್ನಾಮದಿಂದ **ಸಾಶನ** - ಎಂತ ನಾಮದಿಂದ ಕರೆಸೋವನಾದ. **ಸಾಶನ ಅನಶನ** - ರೂಪಗಳ ಜ್ಞಾನಿಗಳಾದವರು ಅತಿಶಯವಾಗಿ ಕರ್ಮ ಅಂತೂ, ಎರಡು ರೂಪಕಲಾಪದಲ್ಲಿ ಬಿದ್ದು ಭ್ಯಾಸರದೆ, ಕರ್ಮ, ಕಲಾಪವನ್ನು ಸಂಕೋಚ ಮಾಡಿಕೊಂಡು, ಮಹಾತ್ಮ್ಯ ಜ್ಞಾನಪೂರ್ವಕ ಸದೃಢ ಸ್ನೇಹಯುಕ್ತವಾದ ಭಕ್ತಿಯಿಂದ ಸಹಿತರಾಗಿ, ಧ್ಯಾನಾದಿಗಳಿಂದ ಉಪಾಸನೆ ಗೈಯುತ್ತ ಇರೋವರಾಗಿದ್ದಾರೆ. ಅದರಿಂದಲೇ. **ಮೋಕ್ಷವೂ** ಐದೋವರಾಗಿದ್ದಾರೆ. ನಿಷ್ಕಾಮಕನಾಗಿ ಧ್ಯಾನೋಪಸನಾದಿಗಳ ಮಾಡುತ,–ಪೂರ್ವೋಕ್ತ ಭಕ್ತರಿಗೆ ಸಂಘವಿಸಿದ ದೋಷಗಳೆಂಬ ಕಾಷ್ಟಗಳ ಅಗ್ನಿಯೋಪಾದಿಯಲ್ಲಿ ನಾಶನ ಮಾಡುತ್ತಾ–ಸ್ವರೂಪ, ಬಾಹ್ಯದಲ್ಲಿ ಅನಶನ, ಸಾಶನ=ರೂಪಗಳಿಂದ ಇದ್ದಾನೆಂದು, ನಿರಂತರವಲ್ಲೂ, ಅವನ ಕಲ್ಯಾಣ ಗುಣಗಳ ಮಹಾತ್ಮ್ಯಯನ್ನು ಸ್ತೋತ್ರ ಮಾಡುತ್ತಾ ಸಂತೋಷದಿಂದ ಇರೋವನಾಗು-ಎಂತ ತಾತ್ಪರ್ಯ.
॥೩॥

**ಭಾವಪ್ರಕಾಶಿಕೆ :**

ಭಗವಂತನಿಗೆ **ಸಾಶನ** - ರೂಪವೆಂತಲೂ, **ಅನಶನ**-ರೂಪವೆಂತಲೂ ಎರಡು ರೂಪಗಳು. **ಸಾಶನನೆಂದರೆ**–ನಿತ್ಯವಲ್ಲೂ ಭೋಜನವನ್ನು ಮಾಡುತ್ತಿರುವ ಮನುಷ್ಯಾದಿಗಳೆಂತಲೂ, **ಅನಶನವೆಂದರೆ**–ದೇವತೆಗಳೆಂತಲೂ, ಇವೆರಡರ ಅಂತರ್ಯಾಮಿರೂಪಗಳೆಂದು ಒಂದರ್ಥ. ಸ್ವರೂಪದೇಹದಲ್ಲಿದ್ದು. ಅಲ್ಲಿ ಅಶನಾದಿಗಳು ಇಲ್ಲದಿರುವುದರಿಂದ, **ಅನಶನವೆಂತಲೂ,** ಸ್ಥೂಲದೇಹದಲ್ಲಿದ್ದು, ಭೋಜನಾದಿಗಳನ್ನು ಮಾಡುವುದರಿಂದ, **ಸಾಶನನೆಂತಲೂ,** ಒಬ್ಬ ಪರಮಾತ್ಮನು ಎರಡು ರೂಪಗಳಿಂದ ಕೂಡಿ, ಸ್ವರೂಪದೇಹದಲ್ಲೂ, ಸ್ಥೂಲದೇಹದಲ್ಲೂ ಇರುತಿಹನೆಂದು ಜ್ಞಾನಿಗಳು ಉಪಾಸನೆ ಮಾಡುತ್ತಾ, ತಾವು ಮಾಡುವ ಭೋಜನ ಪಾನಾದಿಗಳೆಲ್ಲವೂ ಭಾಗವದ್ವ್ಯಾಪಾರವೆಂದರಿತು. ಅಗ್ನಿಯಂತಿರುವರು.

ಅಂದರೆ–

"ತೇಜಸ್ವೀತಪಸಾದೀಪ್ತೋ ದುರ್ಧರ್ಷೋ ದೂರ

ಸರ್ವಭಕ್ಷ್ಯೋಽಪಿ ಯುಕ್ತಾತ್ಮಾ ನಾ ದತ್ತೇ ಪಾಪಮ

ಎಂಬ **ಭಾಗವತ ಏಕಾದಶ ಸ್ಕಂಧದಲ್ಲಿ** ಹೇಳಿದ

ಪ್ರಜ್ವಲಿಸುತ್ತಾ ತೇಜಸ್ವಿಯಾಗಿ ಇಚ್ಛಾ ದ್ವೇಷಾದಿಗಳನ್ನು ಹೇಗೆ ಸರ್ವಭಕ್ಷಕನಾದರೂ, ಅವನಿಗೆ ಪಾಪವಿಲ್ಲವೋ, ಹ ಏನು ಭೋಜನಾದಿಗಳನ್ನು ಮಾಡಿದರೂ. ಪಾಪ ತಾತ್ಪರ್ಯ. ಇಂತಹ ಮಹಿಮೆ ಭಗವದ್ಭಕ್ತರದಲ್ಲಿರುತ ಮಹಿಮೆಯನ್ನು ಹೇಳುವುದೇನು ? ಎಂದು ಕೊಂಡಾಡುತ

೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

"ಸಾಶನ–" ಇತಿ ಸಾಶನೇತಿ ಮುಕ್ತಾ ಮುಕ್ತಾನ್ ಅತಿ ಚಕ್ರಾಮತ ದೂತ್ತಮಃ ಇತಿ ಶ್ರುತ್ಯರ್ಥಃ ॥ ರೂ ತರ್ಗತಃ ಪುರುಷಾಂತರ್ಗತಶ್ಚೇತಿ

ಕನ್ನಡಾರ್ಥ –

ಈ ಪದ್ಯದಲ್ಲಿ "ಸಾಶನಾ**ಶನೇ** ಅಭೀ"–ಎಂಬ ಪ ಪುರುಷಸೂಕ್ತದಲ್ಲಿರುವ "ತತೋವಿಷ್ವಙ್ ವ್ಯಕ್ರಾಮತ್ ಸ ಈ ವಾಕ್ಯವನ್ನು ಪೂರ್ಣ ಪರಿಗ್ರಹಿಸುತ್ತಾರೆ. ಇಲ್ಲಿ 'ಸಾಶ ಅಂದರೆ, ಮುಕ್ತರು ಅಮುಕ್ತರು ಆದ ದೇವ ಹಾಗೂ ಅರ್ಥ. ಇವರೆಲ್ಲರನ್ನೂ "ಅಕ್ರಾಮತ್"–ಅತಿಕ್ರಮಿಸಿದವ ಸೂಕ್ತಶ್ರುತಿ ವಾಕ್ಯದ ಅರ್ಥ "ರೂಪದ್ವಯನ"–ದೇ ವಾದುದು-ಒಂದು ರೂಪ ಪುರುಷಾಂತರ್ಗತವಾದುದು ಹೀಗೆ ರೂಪ ಎರಡು ರೂಪಗಳು.

## ೫. ಗುರು ಹೃದಯ ಪ್ರಕಾಶಿಕ

ಆದರೂ ಯಾಥಾಶಕ್ತಿ ಚಿಂತಿಸಬೇಕಾದ್ದರಿಂದ, ಸಾ ಸೂಕ್ತ ಪ್ರಕಾರಾಂತರ ಚಿಂತಿಸುವ ಬಗೆ ಬೋಧಿಸುತ್ತಾರೆ

'ಸಾಶನಶನೇ ಅಭಿ'-ಎಂಬ ಈ ವೇದದಿಂದ ಪ್ರತಿಪಾದ್ಯನಾದ ಕೇಶವ ನೆಂಬ ಸ್ವಾಮಿಯ ರೂಪದ್ವಯಗಳನ್ನು-ಅಂದರೆ, ಚಿದ್ದೇಹವೆಂಬ ಜೀವಸ್ವರೂಪ ದೊಳಗೆ ಅನಶನವೆಂಬ ಸಾಕ್ಷೀ ರೂಪವನ್ನು, ಹೊರಗೆ ಎಂಬ ಸ್ಥೂಲದೇಹದಲ್ಲಿ ಸಾಶನವೆಂಬ ಸ್ವರಸವನ್ನು ತಾನು ಸ್ವೀಕರಿಸಿ, ಇತರರಿಗೆ ತದ್ಯೋಗ್ಯ ರಸಭೋಗ ಶಕ್ತಿ ಕೊಡುವವ್ಪರಿಂದ, ಭೋಕ್ತೃರೂಪವನ್ನು ಬುಧರೆಂಬ ಅಧಿಕಾರಿಗಳು. ಚಿಂತಿಸುತ್ತಾ, ಸದ್ಭಕ್ತಿಯಿಂದ ಉಪಾಸನೆಯೆಂಬ ಮಾನಸಪೂಜೆಯನ್ನು ಮಾಡುತ್ತಾ, ಹುತಾಶನನವೊಲ್. ಅಂದರೆ, ಅಗ್ನಿ ಸರ್ವಭಕ್ಷಕನಾದರೂ, ಪರಿ ಶುದ್ಧನಾಗಿರುವಂತೆ, ನಿರ್ದೋಷನೂ ದೇವರು ಸದಾ ಬೇಸರವೆಂಬ ಚಂಚಲ ಮನಸ್ಸು ಮಾಡದೆ ಸ್ತುತಿಸುತ್ತಿರುವುದು. ॥೩॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧ ಸಾಶನಾಶನ ಅಭೀ–

"ತಪೋಽವಿಷ್ಟುಕ್ ವ್ಯಕ್ರಾಮತ ಸಾಶನಾಶನೇ ಅಭೀ"–ಎಂದು ಶ್ರುತ್ಯ ರ್ಥರೂಪವಾದ **ಪುರುಷಸೂಕ್ತ ವಚನವಿದೆ.**

ಅಂದರೆ, ಶ್ರೀ ಪರಮಾತ್ಮನಿಗೆ ಎರಡು ರೂಪಗಳು–

**(೧) ಸಾಶನ ಮತ್ತು (೨) ಅನಶನ**–ಎರಡು ರೂಪದ್ವಯಗಳು.

**೨. ಸಾಶನ:–**

ಜೀವರು ಸ್ಥೂಲದೇಹದಲ್ಲಿದ್ದು, ಜೀವರು ಭೋಜನ ಮಾಡುವ ಶಬ್ದಾದಿ ಸಕಲ ವಿಷಯಗಳನ್ನು ಅಂತರ್ಗತನಾಗಿದ್ದು, ಸ್ವಾಖ್ಯಿರಸವನ್ನು ಮಾತ್ರ ತಾನು ಸ್ವೀಕರಿಸಿ. ಇತರರಿಗೆ ತದ್ಯೋಗ್ಯ ರಸಭೋಗ, ಶಕ್ತಿಪ್ರನಾಗಿ, ದೇಹಕ್ಕೆ ಉಪಚಯವನ್ನು ಕೊಡುವುದರಿಂದ, ಸ್ಥೂಲ ದೇಹದವ ಭಗವ ದ್ರೂಪಕ್ಕೆ **ಸಾಶನ**–ಎಂತ ಹೆಸರು. ಸಾ + ಅಶನ = ಅಸಶನ ರಹಿತನು.

೧ **ಅನಶನ :-**

ಜೀವರ ಸ್ವರೂಪದೇಹದಲ್ಲಿ ಬಿಂಬರೂಪದಿಂದ ಅಂತರ್ಯಾ
ಯಾಗಿದ್ದು, ಸ್ವರೂಪಗತ ಕಾರ್ಯಗಳನ್ನು ಮಾಡಿಸುವುದರಿಂದ, ಅನ
ಎಂದು ಹೆಸರು. ಅಲ್ಲಿ ಭೋಗ ಅಪ್ರಾಕೃತ ವಿಷಯಗಳ ಭೋಗ.
ವಿಷಯಾದಿಗಳಾಗಲೀ, ಪ್ರಕೃತಿ ಸಂಬಂಧವೇ ಇಲ್ಲ.

ದೇವತೆಗಳು ಅನಶನಿಗಳು. ದೇವತಾಯಾಂತರ್ಗತ ಭಗವದ
ಅನಶನವೆಂದೇ ಕರೆಯಿಸಲ್ಪಡುವುದು.

೪ **ಶ್ರುತಿಪ್ರತಿಪಾದ್ಯನೆನಿಸುವ-**

"ಪುರುಷಸೂಕ್ತ"ವು ಶ್ರುತ್ಯಂತರ್ಗತವಾದುದ್ದು. ಪುರುಷ
ಸುಮೇಯನಾದ ಪರಮಪುರುಷನು **ಸಾಶನಾಶನ** ಅಭೀ ಎಂಬ
ಪ್ರತಿಪಾದ್ಯನಾಗಿದ್ದಾನೆ.

೫. ಶ್ರುತಿಪ್ರತಿಪಾದ್ಯನಾದ ಶ್ರೀಕೇಶವಗೆ ಪೂರ್ವೋಕ್ತ, ಸಾಶನ
ಅನಶನ-ಎಂಬ ರೂಪದ್ವಯಗಳನ್ನು ಚಿಂತಿಸಬೇಕು. ಚಿದ್ದೇಹ
ಸ್ವರೂಪದೇಹ. ಚಿದಾನಂದಾಕಲಾತ್ಮಕ ಜೀವನ ಸ್ವರೂಪವು. ಒಳಗೆ
ಅಂದರೆ, ಸ್ಥೂಲಾಖ್ಯ ಶರೀರದಲ್ಲಿ "ಸಾಶನ" ರೂಪ. ಹೀಗೆ, ರೂಪ
ಹೊರ ಚಿದ್ದೇಹದ ಹೊರಗೆ, ಅಂದರೆ ಸ್ಥೂಲಾಖ್ಯ ಶರೀರದಲ್ಲಿ"
ರೂಪ - ಹೀಗೆ, ರೂಪದ್ವಯಗಳ ಉಪಾಸನಾ ಕ್ರಮ. "ಕೇಶವ"-
(ಕ) + ಈಶ=(ವ) ಅಂದರೆ, ಬ್ರಹ್ಮ (ಕ) ಮತ್ತು ರುದ್ರ (ಈಶ)
ಗಿಂತ ವರಿಷ್ಠನು. (ವ)-ಉತ್ತಮೋತ್ತಮ ಶ್ರೀ ಹರಿಯೆಂದರ್ಥ.

೬ ಜೀವನದಲ್ಲಿ ಬೇಸರಿಸದೆ, ಮಹಾತ್ಮ ಜ್ಞಾನಪೂರ್ವ
ಸುದೃಢವಾದ ಸ್ನೇಹಭಾವದಿಂದ, ಸದ್ಭಕ್ತಿಯಿಂದ ಬ್ರಹ್ಮ ಜ್ಞಾನಿಗಳ
(ಬುಧರು) ಕೇಶವನ-ಸಾಶನ ಅನಶನ-ಎಂಬ ರೂಪದ್ವಯಗಳನ್ನು
ದೇಹದಲ್ಲಿ ಮತ್ತು ಸ್ಥೂಲದೇಹದಲ್ಲಿ ಅಂತರ್ಬಹಿಷ್ಟ ಸದಾ
ಮಾಡುತ್ತಿರುವರು.

೭ ಹೂವಾಶನನ ಮೇಲೆ ಇಪರು

"ಹುತಾಶನ"–ಎಂದರೆ, ಯಜ್ಞ ಯಾಗಾದಿಗಳಲ್ಲಿ ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವ ಅಮರಾಸ್ಯನಾದ ಅಗ್ನಿ ಪುರುಷ ದೇವರು. ಅಗ್ನಿಯು ಸಕಲ ವಸ್ತುಗಳನ್ನು ಸುಟ್ಟು, ತಾನು ಮಾತ್ರ ನಿರ್ಲಿಪ್ತನಾಗಿರುವನು. ಅದರಂತೆಯೇ ನಾಶನ–ಅನಶನ-ರೂಪದ್ವಯಗಳನ್ನು ಸದಾ ಚಿಂತಿಸುವ ಬುಧರು ಹುತಾಶನನಂತೆ ಪಾಪಗಳಿಂದ ನಿರ್ಲಿಪ್ತರಾಗಿರುವರು ಎಂತ ತಾತ್ಪರ್ಯ.

ಈ ರೀತಿಯಲ್ಲಿ ನೀನು ತಿಳಿದು, ಬುಧರ ಸೇವೆಯನ್ನು ಮಾಡುತ್ತಾ, ಅವರ ಅಂತರ್ಗತವಾದ ನಾಶನ-ಅನಶನ ಶಬ್ದವಾಚ್ಯನಾದ ಕೇಶವನ ಗುಣಗಣಗಳನ್ನು ಸ್ತೋತ್ರ ಮಾಡುತ್ತಿರು ಎಂದು-ದಾಸಾರಾಯರ ಬೋಧನೆ. ||೩||

## ಪದ್ಯ ೪

ಮೂಲ :

ಸಕಲ ಸದ್ಗುಣ ಪೂರ್ಣ ಜನ್ಮಾ।
ದ್ಯ ಖಿಳ ದೋಷ ವಿದೂರ ಪ್ರಕಟಾ ।
ಪ್ರಕಟ ಸದ್ವ್ಯಾಪಾರಿ ಗತ ಸಂಸಾರಿ ಕಂಸಾರಿ ||
ನಕುಲ ನಾನಾರೂಪ ನೀಯಾ ।
ಮಕ ನಿಯಮ್ಯ ನಿರಾಮಯ ರವಿ ।
ಪ್ರಕರಸನ್ನಿಭ ಪ್ರಭು ಸದಾ ಮಾಂ ಪಾಹಿ ಪರಮಾತ್ಮ ||೪||

ಅವತರಣಿಕೆ :

ಸಕಲ ಸದ್ಗುಣಪರಿಪೂರ್ಣನಾದ ಸರ್ವೇಶ್ವರನ ಗುಣಗಾನ ಮಾಡುತ್ತಾ, ಸಂರಕ್ಷಿಸೆಂದು ಪ್ರಾರ್ಥಿಸುತ್ತಾರೆ. ||೪||

**ಪ್ರತಿಪದಾರ್ಥ :**

**ಸಕಲ ಸದ್ಗುಣಪೂರ್ಣ**=ಸಮಸ್ತವಾದ ಸುಸವಿಂಚೀನವಾ ಅನಂತ ಕಲ್ಯಾಣ ಗುಣಗಳಿಂದ ಪರಿಪೂರ್ಣನಾದವನು. **ಜನ್ಮಾದಿ**=ಉತ್ಪತ್ತಿ ಸ್ಥಿತಿ-ಮರಣ-ಈ ಮೂರು ದೋಷಗಳಿಂದಲೂ, **ಅಖಿಳದೋಷ ವಿದೂ**ತದಸ್ಯವಾದ ಅಸ್ವಾತ್ರ್ಯಂತ್ರಾದಿ ಸಕಲ ದೋಷಗಳಿಂದಲೂ,ಅತ್ಯಂತ ದೂರನವನು. **ಪ್ರಕಟ**=ಮುಕ್ತಿಯೋಗ್ಯರಾದ ಭಕ್ತರಿಗೆ ಅಪರೋಕ್ಷದಿಂದ ಪ್ರನಾಗುವವನು. **ಅಪ್ರಕಟ**=ತಮೋಯೋಗ್ಯರಿಗೆ ಅಪ್ರತ್ಯಕ್ಷನಾಗಿರುವವ **ಸದ್ವ್ಯಾಪಾರಿ**=ನಿರ್ದೋಷವಾದ ಉತ್ತಮವಾದ ಕ್ರಿಯಾ ವಿಶೇಷಗಳುಳ್ಳವ **ಗತ ಸಂಸಾರಿ**=ಸೃಷ್ಟ್ಯಾದಿ ವ್ಯಾಪಾರ ರೂಪ ಸಂಸಾರದಿಂದ ಪ್ರಯೋ ರಹಿತನು. (ಕರ್ಮಬಂಧನ ರೂಪವಾದ ಸಂಸಾರ ಬಂಧನರಹಿತ **ಕಂಸಾರಿ**=ಕಂಸನನ್ನು ಸಂಹರಿಸಿದವನು. **ನಕುಲ**=ಸರ್ವಕುಲಾತ್ರ (ಇಂತಹ ಕುಲವೇ ಎಂದು ನಿರ್ದಿಷ್ಟವಿಲ್ಲದವನು). **ನಾನಾ ರೂಪ** ಅನಂತಾನಂತ ರೂಪ ವಿಶಿಷ್ಟನು **ನೀಯಾಮಕ**=ಕರ್ಮ ಬ್ರಹ್ಮಾದಿ ಸ ಜೀವರಿಗೆ ಆಜ್ಞಾ ಮಾಡುವವನು. (ಸರ್ವತಂತ್ರ ಸ್ವತಂತ್ರನೆಂದು ತಾತ್ಪರ್ಯ **ನಿಯಮ**=ತನ್ನಿಂದ ನಿಯಮಿತರಾದ ಸರ್ವ ಜೀವರ ಅಧಿಷ್ಠಾನ ಗತ **ನಿರಾಮಯ**=ರೋಗಾದ್ಯುಪದ್ರವಗಳಿಂದ ದೂರನಾದವನು, **ರವಿಪ್ರಕ ಸನ್ನಿಭ**=ಕೋಟಿ ಸೂರ್ಯರ ಸಮೂಹಗಳ ಕಾಂತಿಗಿಂತಲೂ ಮಿಗಿಲಾದವ **ಪ್ರಭು**=ಜಗತ್ಸ್ವಾಮಿಯು, **ಪರಮಾಪ್ತ**=ಜೀವರಿಗೆ ಬಿಂಬರೂಪದ ಎಡಬಿಡದೆ ಆಪ್ತನಾಗಿರುವನು **ಮಾಂ ಪಾಹಿ**=ನಿರಂತರವೂ ನನ್ನ (ನಮ್ಮೆಲ್ಲರನ್ನು) ಸಂರಕ್ಷಿಸು. ಎಂದು ಪ್ರಾರ್ಥನಾ ಮಾಡಿದ್ದಾರೆ. ||

## ವ್ಯಾಖ್ಯಾನಗಳು

### ೧ ಶ್ರೀ ಸಂಕರುರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನೇ ಸಂರಕ್ಷಣ ಮಾಡುವಂತ ಪ್ರಾರ್ಥನ ಮಾಡತಾರೆ **ಪೂರ್ವೋಕ್ತ** ಶ್ರೀ ಪರಮಾತ್ಮ ಎಂಥಾವನೆಂದರೆ, ಸಮಸ್ತವಾದ ಸ

ಚೀನವಾದ ಕಲ್ಯಾಣಗುಣಗಳಿಂದ ಪೂರ್ಣನಾದವ. ಅವನ ಗುಣಗಳಿಂದ ಅವನು ಅತ್ಯಂತ ಅಭೇದನಾದವ. ಶಕ್ತಿಯಲ್ಲಿ ರಜತ ಭ್ರಾಂತ್ಯಾದಿ ದೋಷ ಗಳಿಂದ ರಹಿತನಾದವ. ಉತ್ಪತ್ತಿ, ಸ್ಥಿತಿ, ಮರಣ ಈ-ಮೂರು ದೋಷ ತದನ್ಯವಾದ ಅಸ್ವಾತಂತ್ರ್ಯಾದಿ ಅನೇಕ ದೋಷಗಳಿಂದಲೂ ಅತ್ಯಂತ ದೂರ ನಾದವ. ಮುಕ್ತಿಯೋಗ್ಯರಾದ ಭಕ್ತರಿಗೆ ಅಪರೋಕ್ಷದಿಂದ ಕಾಣಿಸಿಕೋ ತಕ್ಕವ. ತಮೋಯೋಗ್ಯರಿಗೆ ಅಪ್ರತ್ಯಕ್ಷನಾದವ. ನಿರ್ದುಷ್ಟವಾದ ಪಾರವ್ಯಾ ಗಳುಳ್ಳವ. ಸೃಷ್ಟ್ಯಾದಿ ವ್ಯಾಪಾರ ರೂಪ ಸಂಸಾರದಲ್ಲಿ ತನಗೆ ಪ್ರಯೋಜನ ವೇನೂ ರಹಿತನಾದವ. ಕಂಸನಾಮಕ ದೈತ್ಯಗೆ ಶತೃವಾದವ. ಸರ್ವಕುಲಾ ತ್ಮಕನು, ಸರ್ವಕುಲಾತೀತನು, ಕುಲನಿರ್ಧಾರದಿಂದ ರಹಿತನಾದವನು ಎಂದರೆ ವಿಲಕ್ಷಣನು. ಬಹುರೂಪನಾದವನು. ಅನಂತಾವತಾರನು. ರಮಾ-ಬ್ರಹ್ಮಾದಿ ಸರ್ವಜೀವರಿಗೆ ಆಜ್ಞಾ ಮಾಡತಕ್ಕವನು. ರಮಾದೇವರು ಅಸ್ವತಂತ್ರ ಸಂಕೇತದಿಂದ ಪ್ರಕೃತ ಜೀವಲಕ್ಷಣವುಳ್ಳವರು, ಸರ್ವಜೀವಾ ಪೇಕ್ಷಯಾ ಸ್ವತಂತ್ರರಾದವರು–ಸರ್ವಾಧಿಷ್ಠಾನದಲ್ಲಿದ್ದು ಆಜ್ಞಾ ಧಾರಕನಾದವ. **ಪೂಜ್ಯ ಪೂಜಕ ರೂಪೇಣ ಕ್ರೀಡತೇ ಪುರುಷೋತ್ತಮಃ**–ಎಂಬ ನ್ಯಾಯವು ರೋಗಾದ್ಯುಪದ್ರವಗಳಿಂದ ದೂರನಾದವ. ಅನೇಕ ಸೂರ್ಯರ ಸಮೂಪಗಳ ಕಾಂತಿಯುಕ್ತನಾದವ. ಸರ್ವಸ್ವಾಮಿಯಾದವ. ತ್ರಿವಿಧ ಜೀವರೊಳಗೆ ಉತ್ತಮರಾದ ಮುಕ್ತಿಯೋಗ್ಯರಾದ ಜೀವರಿಗೆ ಆಪ್ತನಾದವ, ಅತ್ಯಂತ ಆಪ್ತನಾದವ. ಇಂಥಾ ಶ್ರೀ ಪರಮಾತ್ಮನೇ ನಿರಂತರ ನನ್ನ ಸಂರಕ್ಷಣ ಮಾಡು–ಎಂತ ಪ್ರಾರ್ಥನ ಮಾಡಿದ್ದಾರೆಂತ ತಾತ್ಪರ್ಯ. ॥೪॥

**೨. ಭಾವಪ್ರಕಾಶಿಕೆ :**

ಸಕಲಸದ್ಗುಣಗುಣ ಪೂರ್ಣನು ಹುಟ್ಟುವಿಕೆ ಮೊದಲಾದ ಸಕಲ ದೋಷಗಳ ಸಂಬಂಧವಿಲ್ಲದವನು. ಬ್ರಹ್ಮಾದಿಗಳಿಗೆ ವ್ಯಕ್ತನಾಗಿ ಗೋಚರಿಸ ದವನು. ಸಾಧಾರಣ ಮನುಷ್ಯಾದಿಗಳಿಗೆ ಅಗೋಚರನು. ಇದರಿಂದ, ವ್ಯಕ್ತಾ ವ್ಯಕ್ತ ಸ್ವರೂಪನೆಂದು ಹೇಳಿದಂತಾಯಿತು. ಉತ್ಕೃಷ್ಟವಾದ ಕರ್ಮಗಳುಳ್ಳ ವನು. ಕೆಲವರಿಗೆ ಪ್ರಕಟವಾಗಿಯೂ. ಮತ್ತೆ ಕೆಲವರಿಗೆ ಅಪ್ರಕಟವಾಗಿರುವ

ಉತ್ತಮವಾದ ವ್ಯಾಪಾರವುಳ್ಳವನು. ಅಂದರೆ, ಅವನ ಮಹಿಮೆ
ಭಕ್ತಿ ಹೀನರು ಮಾತ್ರ ಅವನನುಗ್ರಹದಿಂದ ತಿಳಿಯುವರು. ಮಿ
ತಿಳಿಯಲಾರನೆಂದು ಭಾವ. ಜಗತ್ಕುಲಟಬಿಯಾದರೂ ಸಂಸಾರ ಸಂಬಂ
ದುಃಖಲೇಶವಿಲ್ಲದವೆಂದರ್ಥ. ಕಂಸವನು ಕೊಂದವನು. ಕುಲರಹಿತನು.
ರೂಪಧಾರಕನು. ಸಕಲ ಪ್ರಾಣಿಗಳಿಗೂ ನಿಯಾಮಕನು. ಅಂದರೆ,
ಯನ್ನು ಮಾಡುವವನು. ನಿಯಮ್ಯರಾದ, ಜೀವರೆಲ್ಲರನ್ನೂ ತನ್ನ
ಯಂತೆ ನಡೆಯಿಸುವವನು. ಒಬ್ಬನಲ್ಲಿದ್ದು, ನಿಯಾಮಕನಾಗಿ,ಮತ್ತೊಬ್ಬ
ನಿಯಮ್ಯನಾದವನು. ಅಂದರೆ, ರಾಜನಲ್ಲಿದ್ದು ಅಧಿಕಾರ ಮಾಡುವನು
ನಲ್ಲಿದ್ದು, ಅವನಪ್ಪಣೆಯಂತ ನಡೆದುಕೊಳ್ಳುವನು. ಯಾವ ವಿಧ
ವ್ಯಾಧಿಯೂ ಇಲ್ಲದವನು (ನಿರಾಮಯಾನು). ಸೂರ್ಯ ಸಮೂಹಗಳ
ಯುಕ್ತನು. ಇಂತಹ ಎಲ್ಲೈ ಪ್ರಭು ! ಬಹು ಆಪ್ತನಾದವನೇ
ರಕ್ಷಿಸು. ||೪||

## ಶ್ರೀ ವ್ಯಾಸರಾಜ ಸಿದ್ಧಾಂತ ಕೌಮುದೀ :

"ಸಕಲ ಇತಿ" ||ಪ್ರಕಟೇತಿ|| ಅನುಗ್ರಹಾನನುಗ್ರಹಾಭ್ಯಾಂ
ಪಾರನಿರ್ದುಷ್ಟವ್ಯಾಪಾರಃ || "ಗತಃ" ಪರಲೋಕಂ ಸಂಸಾರೀ ಜೀವಃ
ಸಃ- "ನಕುಲ" ತೌಕಿಕವತ್ ಕುಲಾದಿ ವಿದೂರಃ || ನಿಯಮ್ಯ ತದ್ವ

### ಕನ್ನಡಾರ್ಥ

"ಸದ್ವ್ಯಾಪಾರಃ" - ಸಜ್ಜನರಿಗೆ ಸತ್ಕಾರ್ಯದಲ್ಲಿ ಪ್ರೇರಣಾಶಕ್ತಿ
ನೀಡುವದು ಅನುಗ್ರಹ. ಸದ್ವ್ಯಾಪಾರದಲ್ಲಿ ಮನಸ್ಸನ್ನು ನೀಡದಿ
ಅನುಗ್ರಹ. ಅದರಂತೆ, ಅಸಜ್ಜನರಿಗೆ ಅಸತ್ಕಾರ್ಯದಲ್ಲಿ ಮನಸ್ಸನ್ನು ನಿ
ವುದು. ಈ ವ್ಯಾಪಾರಗಳು. ನಿರ್ದುಷ್ಟಗಳಾದ ಈ ವ್ಯಾಪಾರಗಳ
ಸದ್ವ್ಯಾಪಾರಿ. "ಗತ ಸಂಸಾರಿ"-ಸಂಸಾರಿ ಜೀವವನ್ನು ಪರಲೋಕಕ್ಕೆ
ವನು. "ನಕುಲ"-ಸಾಮಾನ್ಯರಿಗೆ ಇರುವಂತೆ ಕುಲಜಾತ್ಯಾದಿಗಳಿಂದ
"ನಿಯಮ್ಯ"-ನಿಯಮ್ಯರಲ್ಲಿದ್ದು, ನಿಯಾಮ್ಯ ಶಬ್ದ ವಾಚ್ಯನು. ||೪

**೪. ಶ್ರೀಗುರುಹೃದಯ ಪ್ರಕಾಶಿಕೆ :**

ಧ್ಯಾನಗೋಚರರೂಪ ಸ್ತುತಿಸಂತ್ರಾರೆ— ಸಕಲ ಎಂದು.

ಜ್ಞಾನಾನಂದಾದಿ ಸಕಲಸದ್ಗುಣಪೂರ್ಣನೇ, ಜನ್ಮ—ಮೊದಲಾದ ಸರ್ವದೋಷರಹಿತನೆ, ಸಜ್ಜನರಿಗೆ ಪ್ರಕಾಶನಾಗಿದ್ದರೂ, ಅಸಜ್ಜನರಿಗೆ ಅಪ್ರಕಾಶನಾಗಿರುವವನೆ, ನಿರ್ದುಷ್ಟಚರಿತನೆ. ಭಕ್ತರಿಗೆ ಜನ್ಮಾದಿ ಸಂಸೃತಿ ಬಿಡಿಸುವುದರಿಂದ, ಗತಸಂಸಾರಿಯೆಂದು ಕರೆಸುವನೆ, ಕಂಸಶತ್ರುವಾದವನೆ, ಜನ್ಮರಹಿತನಾದುದರಿಂದ, ಬಾಹ್ಯಜಾತಿರಹಿತನಾಗಿ ನಕುಲನೆಂದು ಕರೆಸುವನೆ, ನಾನಾಕೂಪವೆಂಬ ಸ್ವರೂಪ ಬಾಹ್ಯಾಚಾರಗಳಿಗೆ ಸಹ ನಿಯಾಮಕನೆ, ಆವರೂ ಅಧೀನವಲ್ಲಿದ್ದು ತತ್ತ್ವವರ್ತಕನಾದ್ದರಿಂದ, ನಿಯಮ್ಯನೆಂಬ ಹೆಸರುಳ್ಳವನೆ, ಆದರೂ, ಪರಾಧೀನದೋಷವೆಂಬ ಆಮಯರಹಿತನೆ, ರವಿಪ್ರಕರವೆಂಬ ಅನೇಕ ಸೂರ್ಯಪ್ರಕಾಶನೇ, ಪ್ರಭುವೆಂಬ ಪರಮಸಮರ್ಥನೆ, ಪರಮಾತ್ಮನೆ–ಸದಾ ನನ್ನನ್ನು ರಕ್ಷಿಸು. ॥ ೪ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀಪರಮಾತ್ಮನು ಸಮಸ್ತವಾದ ಕಲ್ಯಾಣಗುಣಗಳಿಂದ ಪರಿಪೂರ್ಣನು. ಜ್ಞಾನ-ಆನಂದ-ಶಕ್ತಿ-ಸ್ವಾತಂತ್ರ್ಯ-ಸೌಂದರ್ಯ ಇತ್ಯಾದಿ ಅನಂತಸದ್ಗುಣಪೂರ್ಣನು. ಅವನ ಒಂದೊಂದು ಗುಣವೂ ಅಪಾರ ಮತ್ತು ಪರಿಪೂರ್ಣ. ಅವನ ಸ್ವರೂಪಕ್ಕೂ ಅವನ ಗುಣರಾಶಿಗಳಿಗೂ ಭೇದವಿಲ್ಲ. ಇದರಿಂದ ಸಕಲಸದ್ಗುಣಪೂರ್ಣನು.

ಸದ್ಗುಣ-ಅಪ್ರಾಕೃತವಾದ ಸುಸಮೀಚೀನವಾದ ಕಲ್ಯಾಣಗುಣಗಳೆಂದರ್ಥ.

೨. ಜೀವರಂತೆ, ಅವನಿಗೆ ಉತ್ಪತ್ತಿಯಾಗಲೀ, ಸ್ಥಿತಿಕಾಲವಾಗಲೀ, ಮರಣವಾಗಲೀ ಎಂದೆಂದಿಗೂ ಇಲ್ಲ. ಜನ್ಮಾದಿಗಳು ದೋಷಗಳು. ಅಂತಹ

ದೋಷಗಳ ಸಂಪರ್ಕವೇ ಇಲ್ಲದ ದೋಷವಿದೂರನು. ಅನಾದಿನಿತ್ಯನು ಚತುರ್ವಿಧನಾಶರಹಿತನು. ಸದಾ ಸರ್ವಕಾಲಗಳಲ್ಲೂ ಶಶ್ವದೇಕಪ್ರಕಾರನಾ ನಿತ್ಯಶಾಶ್ವತನಾಗಿ ಇರುವವನು. ಇದರಿಂದ, **ಜನ್ಮಾದಿ** ಅಖಿಳದೋ **ವಿದೂರನು**. ವಿದೂರ ಶಬ್ದದಿಂದ. ಸೃಷ್ಟ್ಯಾದಿಸ್ಥಿತಿಯುಕ್ತರಾದ ಜೀ ಜಡರುಗಳಿಂದ ಅತ್ಯಂತ ವಿಲಕ್ಷಣನೆಂದು ತಾತ್ಪರ್ಯ.

೩. ತನ್ನನ್ನೇ ನಂಬಿ ಭಜಿಸುತ್ತಿರುವ ಭಕ್ತರಿಗೆ ಪ್ರಕಟನಾಗಿ, ಪ್ರತ್ಯ ರೂಪದಿಂದ ಕಾಣಿಸುವನು. ಬ್ರಹ್ಮವಾಯ್ವಾದಿಗಳಿಗೆ ಅವನ ದರ್ಶನ ಸಹ ವಾದದ್ದು. ಇತರ ಭಕ್ತರು ಉಪಾಸನಾಮಾರ್ಗದಿಂದ ಪ್ರತ್ಯಕ್ಷೀಕ ಕೊಳ್ಳುವರು. ದುರ್ಜನರೂ ಮತ್ತು ತಮೋಯೋಗ್ಯರ ಪಾಲಿಗೆ ಸ ಅಗೋಚರನು. ಸಾಧಾರಣ, ಮಾನವರಿಗೂ ಪ್ರತ್ಯಕ್ಷಕ್ಕೆ ಸುಲಭವ ವಿಷಯನಲ್ಲ, ಇದರಿಂದ **ಪ್ರಕಟಾಪ್ರಕಟನು** (ಗೋಚರ-ಅಗೋಚರನ

೪. ಅವನ ಕ್ರಿಯಾವಿಲಾಸಗಳೆಲ್ಲವೂ ಸತ್ಕ್ರಿಯಗಳೇ ಆಗಿವೆ. ದು ಕ್ರಿಯೆ-ಎಂಬುದೇ ಅವನಲ್ಲಿಲ್ಲ. ಅಸುರರ ಮೋಹನಾರ್ಥವಾಗಿ ವಿಕಾರರ ಭಯಂಕರಾಕಾರಗಳನ್ನು ಪ್ರಕಟಿಸುವನು. ಇದರಿಂದ, ದೈತ್ಯರ ಕಂಪಿಸುವುದು. ಇದರಿಂದ, **ಸದ್ವ್ಯಾಪಾರಿಯು**.

೫. ಶ್ರೀಹರಿಯು ವಿಶ್ವಕುಟುಂಬಿ. ಆದರೆ, ಇತರ ಜೀವರುಗಳ ಸಂಸಾರಬಂಧನವಿಲ್ಲ. ಕರ್ಮಬಂಧನವೇ ಇಲ್ಲ. ಇದರಿಂದ, ಸಂಸಾರಜ ದುಃಖಕ್ಲೇಶಗಳಿಂದ ದೂರನು, ನಿರ್ದುಃಖಿ ಮತ್ತು ನಿರ್ಲಿಪ್ತನು.

೬. ತನ್ನ ಸೋದರಮಾವನಾದ ಕಂಸನನ್ನು ಕೊಂದು, ಸಜ್ಜ ಪೀಡೆಯನ್ನು ಪರಿಹರಿಸಿದ ಪರಮಕರುಣಾಳು **ಕಂಸಾರಿಯಾದ** ಶ್ರೀಕೃಷ್ಣ

೭. **ಅವನಿಗೆ** ಇಂತಹ ಕುಲ ಎಂಬುದೇ ಇಲ್ಲ. ಇದರಿಂದ, **ನಕುಲ** (ನ-ನಿಷೇದಾರ್ಥದಲ್ಲಿ) ಸ್ವೇಚ್ಛೆಯಿಂದ ಸೂರ್ಯವಂಶದಲ್ಲಿ ರಾಮಾ

ನಾಮಕನಾಗಿ ಅವತರಿಸಿದನು. ಚಂದ್ರಕುಲದಲ್ಲಿ ಯಾದವಕುಲಲಾಮನಾಗಿ ವಿರಾಜಿಸಿದನು. ಭೃಗುಗೋತ್ರದಲ್ಲಿ ಭಾರ್ಗವರಾಮನಾಗಿ ಅವತರಿಸಿದನು, ಪ್ರಾಸಂಗಿಕವಾಗಿ ಕುಲೋದ್ಭವನಾದವನೇ ಹೊರತು, **ಸಕುಲನು.**

೮. ಧರ್ಮಸಂಸ್ಥಾಪನೆಗಾಗಿ ನಾನಾರೂಪ ಅವತಾರಗಳನ್ನು ಧರಿಸಿದನು. ಇದರಿಂದ, **ನಾನಾರೂಪನು.**

೯. **ನಿಯಾಮಕ :**

ಚರಾಚರ ಜಗತ್ತು ಶ್ರೀಶನ ಅಧೀನದಲ್ಲಿದೆ. ಅವನ ಅಪ್ಪಣೆಯಂತೆ ಸಕಲವೂ ನಡೆಯುವುದು. ಸರ್ವತಂತ್ರ ಸ್ವತಂತನು-**ನಿಯಾಮಕನು.**

೧೦. ಅವನ ಅಪ್ಪಣೆಯನ್ನು ಪಾಲಿಸುವ ರಮಾ ಬ್ರಹ್ಮಾದಿಗಳಲ್ಲಿ ಅಂತರ್ಯಾಮಿಯಾಗಿದ್ದು, **ನಿಯಮ್ಯ**-ನೆಂದು ಕರೆಯಿಸುತ್ತಾನೆ.

ನಿಯಾಮಕರಲ್ಲಿದ್ದು, ನಿಯಾಮಕಶಬ್ದವಾಚ್ಯನಾಗಿದ್ದಾನೆ. ನಿಯಮ್ಯರಲ್ಲಿದ್ದು, ನಿಯಮ್ಯ ಶಬ್ದವಾಚಕನಾಗಿದ್ದಾನೆ. ರಾಜನು ನಿಯಾಮಕ. ಅವನ ಭೃತ್ಯರು ನಿಯಮ್ಯರು.

೧೧. ಜೀವರಿಗೆ ಪಂಚಭೂತಾತ್ಮವಾದ ಸ್ಥೂಲಶರೀರವಿರುವುದರಿಂದ, ಶರೀರಕ್ಕೆ ಸಂಬಂಧಿಸಿದ ರೋಗಾದ್ಯುಪದ್ರವಗಳು ಉಂಟಾಗುವುವು, ಮಾನಸಿಕವಾದ, ಭೌದ್ಧಿಕವಾದ ವ್ಯಾಧಿಗಳೂ ಸಹ ಉಂಟಾಗುವುವು. ಆದರೆ, ಶ್ರೀಪರಮಾತ್ಮನು ನಿತ್ಯ ಆನಂದಸ್ವರೂಪನು. ಶುದ್ಧಾನಂದಾದಿ ಅಪ್ರಾಕೃತ ಗುಣಮಯನು. ಇದರಿಂದ, ಅವನಿಗೆ ಯಾವ ತರಹವಾದ ರೋಗ ಉಪದ್ರವಗಳಾವುವೂ-ಎಂದೆಂದಿಗೂ ಇಲ್ಲವೇ ಇಲ್ಲ. ಆಮಯ-ಎಂದರೆ, ರೋಗಗಳು. ನಿರಾಮಯನೆಂದರೆ, ರೋಗಾದಿರಹಿತನೆಂದರ್ಥ. ಇದರಿಂದ, ಶ್ರೀಪರಮಾತ್ಮನು ಜಗದ್ವಿಲಕ್ಷಣನು ಮತ್ತು **ನಿರಾಮಯನು.**

೧೨. ತನ್ನಿಂದ ಸೃಷ್ಟವಾದ ಸಮಸ್ತಜಗತ್ತಿಗೇ ಸ್ವಾಮಿಯು. ಜಗದೀಶನಾದ ಜನಾರ್ದನನು **ಪ್ರಭುವು.**

೧೩. ಜೀವರಿಗೆ ಬಿಂಬರೂಪನು. ಬಿಂಬ-ಪ್ರತಿಬಿಂಬ ಧರ್ಮವು ಅನ್ಯೋನ್ಯಸಂಬಂಧವು. ಬಿಂಬನು ಪ್ರತಿಬಿಂಬಭೂತರಾದ ಜೀವರನ್ನು ಅರಕ್ಷಣವೂ ಬಿಟ್ಟು ಅಗಲುವುದಿಲ್ಲ. ಜೀವರಿಂದ ನಿತ್ಯಾವಿಯೋಗಿಸಿಯಾದ ಜೀವೇಶ್ವರನು **ಪರಮಾತ್ಮನು.**

ಅಂತಹ ಜಗತ್ಸ್ವಾಮಿಯಾದ ಪರಮಾಪ್ತನಾದ ಪರಮೇಶ್ವರನೇ ನನ್ನನ್ನು (ಸಜ್ಜನರನ್ನೆಲ್ಲಾ). ಸಂರಕ್ಷಿಸೆಂದು ದಾಸಾರ್ಯರು ಮೊರೆ ಯಿಟ್ಟಿದ್ದಾರೆ. ॥ ೪ ॥

## ಪದ್ಯ-೫

**ಮೂಲ :-**

**ಚೇತನಾಚೇತನ ಜಗತ್ತಿನೊ ।**
**ಳಾತನನು ತಾನಾಗಿ ಲಕುಮೀ ।**
**ನಾಥ ಸರ್ವರೊಳಿಪ್ಪ ತತ್ತದ್ರೂಪಗಳ ಧರಿಸಿ ॥**
**ಜಾತಿಕಾರನ ತೆರದಿ ಎಲ್ಲರ ।**
**ಮಾತಿನೊಳಗಿದ್ದಖಿಳಕರ್ಮವ ।**
**ತಾ ತಿಳಿಸಿಕೊಳ್ಳದಲೆ ಮಾಡಿಸಿ ನೋಡಿ ನಗುತಿಪ್ಪ ॥೫॥**

**ಅವತರಿಣಿಕೆ :**

ಸರ್ವತ್ರವ್ಯಾಪ್ತನಾಗಿ, ತತ್ತದಾಕಾರ, ತತ್ತದ್ರೂಪಗಳನ್ನು ಧರಿಸಿ, ಸರ್ವವ್ಯಾಪಾರಗಳನ್ನೂ ಸ್ವಯಂಸ್ವತಂತ್ರನಾಗಿ ನಿರ್ವಹಿಸುತ್ತಿರುವ ಶ್ರೀಪರಮಾತ್ಮನ ಮಹಾತ್ಮ್ಯೆಯನ್ನು ಹೇಳುತ್ತಾರೆ. ॥ ೫ ॥

**ಪ್ರತಿಪದಾರ್ಥ** :–

**ಲಕುಮಿಯರಸಾಥ**=ಶ್ರೀಲಕ್ಷ್ಮೀರಮಣನಾದ ಶ್ರೀಮನ್ನಾರಾಯಣನು **ಸ್ತ್ರಿಸೆ ೨ ಗು**=ಚತುರ್ದಶಭುವನದಲ್ಲಿ ವಿದ್ಯಮಾನರಾದ, **ಚೇತನ**= ಗಮ ಜೀವರು, **ಅಚೇತನ**=ಜಡಗಳು, **ಸರ್ವರೊಳು**=ಸಕಲತ್ರಿವಿಧ ದ ಜೀವರಲ್ಲಿ. **ತತ್ತದ್ರೂಪಗಳ ಧರಿಸಿ**=ಆಯಾಯು ಜೀವರ ನಾಮ ತ್ತು ರೂಪಗಳನ್ನು ಅನುಸರಿಸಿ. ಅನಾದಿಕಾಲದಿಂದ ಬಿಂಬನಾಗಿ, **ಅತನು** ನಾಗಿ=ಸ್ವಯಂ ಸರ್ವತ್ರವ್ಯಾಪ್ತನಾಗಿದ್ದು, **ಎಲ್ಲ ಮಾತಿನೊಳಗೆ**= ಪ್ಯಾದಿ ತೃಣಾಂತಜೀವರ ಭಿನ್ನ ಭಿನ್ನವಾದ ಮಾತಿನೊಳಗೆ (ವಾಗ್ರೂಪ ದ ವ್ಯಾಪಾರ) ವ್ಯಾಪ್ತನಾಗಿದ್ದು, **ಜಾತಿಕಾರನ ತೆರದಿ**=ವೇಷಧಾರಿ ಃಪಾವಿಯಲ್ಲಿ, **ಅಖಿಳಕರ್ಮವ**=ಸಮಸ್ತವಾದ ಶುಭ-ಮಿಶ್ರ-ಅಶುಭಾ ರ್ಮಗಳನ್ನು, **ತಿಳಿಸಿಕೊಳ್ಳದಲೆ**=ಜೀವರಿಗೆ ತಿಳಿಸಿಕೊಳ್ಳದೇ (ಅಪ್ರಕಟಿತ ). **ತಾ ಮಾಡಿಸಿ**=ಸ್ವಯಂ ಸ್ವತಂತ್ರನಾಗಿ ಬಿಂಬಕ್ರಿಯಾದ್ವಾರಾ ಡಿ, ಇಂದ್ರಿಯಭಿಮಾನಿ ದೇವ-ದೈತ್ಯರ ದ್ವಾರಾ ಮಾಡಿಸಿ, **ನೋಡಿ**= ತಂತ್ರರಾದ್ದಾಗ್ಯೂ ಜೀವರು ತಾವೇ ಸ್ವತಂತ್ರರಾಗಿ ಸಕಲಕರ್ಮಗಳನ್ನು ಡುತ್ತೇವೆ ಎಂದು ತಿಳಿದಿರುವ ಜೀವರ ಭ್ರಾಂತಿಜ್ಞಾನವನ್ನು ನೋಡಿ. **ನಗುತಿಪ್ಪ**=ನಗುತ್ತಿರುತ್ತಾನೆ. ॥ ೫ ॥

## ವ್ಯಾಖ್ಯಾನಗಳು

### ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪರಮಾತ್ಮನ ಮಹಾತ್ಮ್ಯವನ್ನು ಹೇಳುತಾರೆ.

ಲಕ್ಷ್ಮೀಪತಿಯಾದ ಶ್ರೀಪರಮಾತ್ಮ ಹದಿನಾಲ್ಕು ಲೋಕದೊಳು ದ್ಯಮಾನರಾದ ಜಂಗಮಜೀವರು, ಜಡಜೀವರು—ಏತಾದೃಶರಾದ ವಿಧರಾದ ಸರ್ವಜೀವರೊಳು. ಆಯಾ ಜೀವರ ನಾಮಗಳೇನು, ಆಯಾ

ಜೀವರ ರೂಪವನ್ನನುಸರಿಸಿ, ಅನಾದಿಕಾಲದಿಂದ ಬಿಂಬನಾಗಿ, ವ್ಯಾಪ್ತನು ತಾನಾಗಿ ಇರೋವನಾಗಿದ್ದಾನೆ, ತ್ರಿ ಸ್ವರೂಪಕ್ಕೆ ಅನುಸರಿಸಿದ ಬ್ರಹ್ಮಾದಿ ತೃಣಾಂತ ತ್ರಿವಿಧಜೀವರ ಭಿನ್ನಭಿನ್ನವಾದ ಮೂರ್ತಿಗಳೊಳು ವ್ಯಾಪ್ತನಾಗಿ ಅವಕ್ಕೆ ಬಿಂಬನಾಗಿದ್ದಾನೆಂತಲೂ ತಾತ್ಪರ್ಯವೇ. ಈ ಪ್ರಕಾರ ಇದ್ದವನಾಗಿ, ಅನಾದಿಜಡಕರ್ಮದಲ್ಲಿ ಸ್ವರೂಪಭೂತಕರ್ಮಗಳ ಮೇಳನಮಾಡಿ, ವಿಕಾರ ಐದಿಸಿ, ಸ್ಥೂಲದೇಹೇಂದ್ರಿಯಗಳ ದ್ವಾರಾ, ಜಡಕರ್ಮವ ಜೀವರಿಗೆ ತಾನು ತಿಳಿಸಿಕೊಳ್ಳದೇನೆ, ಇಂದ್ರಿಯಾಂತರ್ಗತನಾಗಿ ಛಾಯಾಪುರುಷ ದೃಷ್ಟಾಂತವನ್ನನುಸರಿಸಿ, ಬಿಂಬಕ್ರಿಯಾದ್ವಾರಾ ತಾನು ಮಾಡಿ, ತತ್ತ್ವೇಶರಿಂದ ಜೀವನ ದ್ವಾರಾ ದೇಹದಿಂದ ಮಾಡಿಸಿದವನಾಗಿ, ತದ್ವತ್ ನೋಡಿ ನೋಡಿಸಿ, ನಗಿಸುತ ನಗುತ್ತಾ ದೇಹದಲ್ಲಿ ಇರೋವನಾಗಿದ್ದಾನೆ. ವೇಷಧಾರಿಯೋಪಾದಿಯಲ್ಲಿ ವೇಷಧಾರಿಯಾದವ, ತಾನೊಬ್ಬನೇ ಅನೇಕ ವೇಷಗಳ ಧರಿಸಿ, ಆ ವೇಷಕ್ಕೆ ತಕ್ಕ ಭಾಷಾದಿಗಳು, ಅದನ್ನನುಸರಿಸಿ ನಟನಾದಿಗಳ ಆಚರಿಸಿದ ಕಾಲಕ್ಕೂ, ತನ್ನ ನೈಜಸ್ವಭಾವವನ್ನು ಕೆಡದೆ ಹ್ಯಾಂಗೆ ಇರುತ್ತಾನೋ. ತದ್ವತ್, ವೇಷ ಸಾಮಗ್ರಿಗಳ ಸದೃಶ ಚರಾಚರ ಅಧಿಷ್ಠಾನಗಳು ವೇಷಧರಿಸೋಣವೆಂಬುದಕ್ಕೆ, ತದಂತರ್ಗತನಾಗಿ ಇರೋಣ, ಆಯಾ ಅಧಿಷ್ಠಾನಗಳನ್ನು ಅನುಸರಿಸಿ ವ್ಯಾಪಾರಗಳ ಮಾಡೋಣ, ಮಾಡಿದ ಕಾಲಕ್ಕೂ, ತನ್ನ ನೈಜಕ್ಕೆ ಲೋಪ ವಿಲ್ಲದೆ ಪರಮಾತ್ಮ ನಿಸ್ಸೀಮನಾಗಿ ಇದ್ದಾನೆಂತ ತಾತ್ಪರ್ಯ. ॥ ೫ ॥

**೨. ಭಾವಪ್ರಕಾಶಿಕೆ :–**

ಜಡಚೇತನಾತ್ಮಕನಾದ ಈ ಪ್ರಪಂಚದಲ್ಲಿ ಸರ್ವತ್ರ ವ್ಯಾಪಕನಾಗಿರುವ ಆಯಾ ಪ್ರಾಣಿಗಳ ರೂಪಗಳಿಂದ ಅವರವರಲ್ಲಿದ್ದು. ನಾಟಕದಲ್ಲಿ ರಾಮಾದಿಗಳಂತೆ ವೇಷಗಳನ್ನು ಧರಿಸಿ, ತನ್ನ ಸ್ವರೂಪಗಳನ್ನು ತೋರಿಸಿ ಕೊಳ್ಳದೆ, ವೇಷಕ್ಕೆ ತಕ್ಕಂತೆ ಹೇಗೆ, ತಾನೇ ರಾಮಕೃಷ್ಣನೆಂದು ನಟಿಸುತ್ತಿರುವನೋ, ಹಾಗೆ ಪರಮಾತ್ಮನು ಆಯಾ ಪ್ರಾಣಿಗಳಂತೇ ತಾನವರಲ್ಲಿದ್ದು, ಕಾರ್ಯಗಳನ್ನು ಮಾಡಿಸಿ, ತಾನು ಮಾಡಿಸಿರುದುದಾಗಿ ತಿಳಿಸಿಕೊಳ್ಳದೇ,

ಅವರವರ ಯೋಗ್ಯತೆಗನುಸಾರ ಕರ್ಮ ಮಾಡಿಸಿ, ಅವರವರೇ ಕರ್ಮಗಳನ್ನು ಮಾಡಿದಂತೆ, ತೋರ್ಪಡಿಸಿ, ತಾನು ನಿರ್ಲಿಪ್ತವಾಗಿ ನೋಡುತ್ತ ನಗುತ್ತಿರುವನು. ॥ ೫ ॥

## ೪. ಶ್ರೀವ್ಯಾಸಸಿದ್ಧಾಂತ ಕೌಮುದೀ :-

" ಚೇತನ "— ಇತಿ । ಅತತ-ವ್ಯಾಪ್ತ, ಇದ್ದು-ಸಾಕ್ಷಿತ್ವೇನ ॥ ೫ ॥

**ಕನ್ನಡಾರ್ಥ :**

" ಅತತ "-ನಿರಂತರ ವ್ಯಾಪ್ತನಾಗಿ, " ಎಲ್ಲರ ಮಾತಿನೊಳಗಿದ್ದು "- ಇಲ್ಲಿ ಮಾತು-ಈ ಶಬ್ದದಿಂದ ಸಕಲ ಜ್ಞಾನ ಕರ್ಮೇಂದ್ರಿಯಗಳನ್ನು ಮನೋ ಬುದ್ಧಿಗಳನ್ನು ಸಂಗ್ರಹಿಸಬೇಕು. ಈ ಎಲ್ಲ ಇಂದ್ರಿಯಾದಿಗಳಲ್ಲಿ ಸಾಕ್ಷಿರೂಪ ದಿಂದ ಇದ್ದು — ಎಂದು ಈ ಪದದ ಅರ್ಥ. ॥ ೫ ॥

## ೫. ಶ್ರೀಗುರುಹೃದಯ ಪ್ರಕಾಶಿಕೆ :

ತತ್ತದಾಕಾರ ಸರ್ವಚೇಷ್ಟಕ ರೂಪ ತಿಳಿಸುತ್ತಾರೆ— ಚೇತನವೆಂದು.

ಚೇತನಾಚೇತನವೆಂಬ ಚರಾಚರಾತ್ಮಕ ಪ್ರಪಂಚದಲ್ಲಿ, ಲಕ್ಷ್ಮೀನಾಥ ನೆಂಬ ದೇವರು ತತ್ತದಾಕಾರಗಳನ್ನು ಧರಿಸಿ, ಆತತನೆಂಬ ಸರ್ವವ್ಯಾಪ್ತನೂ ಆಗಿ, ಜಾತಿಕಾರನೆಂಬ ವೇಷಧಾರಿಯಂತೆ, ಎಲ್ಲರ ಮಾತು ಮೊದಲಾದ ಸರ್ವ ಕ್ರಿಯೆಗಳಲ್ಲಿದ್ದು, ಕ್ರಿಯಾವ್ಯಕ್ತಿಮಾಡಿ ಮಾಡಿಸಿ, ತಾನು ಇದ್ದಾನೆಂದು ಇತರರಿಗೆ ತಿಳಿಸಿಕೊಳ್ಳದೇ, ನೋಡಿ ಸಂತೋಷಿಸುತ್ತಿರುವನು.

**ಪ್ರಮಾಣ** :-ಸಂಕರ್ಷಣ ಒಡೆಯರ ವ್ಯಾಖ್ಯಾದಲ್ಲಿ ಕೊಟ್ಟಿದೆ. ಅಲ್ಲಿ ನೋಡುವುದು. ॥ ೫ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಈ ಜಗತ್ತು ಚೇತನವರ್ಗದವರಾದ ಜಂಗಮ ಸ್ಥಾವರ ಜೀವರುಗಳಿಂದಲೂ, ಅಚೇತನವಾದ ಶುದ್ಧ ಜಡವಸ್ತುಗಳಿಂದಲೂ ಕೂಡಿದ, ಚತುರ್ದಶಭುವನಾತ್ಮಕವಾದದ್ದು — ಈ ಪ್ರಪಂಚ.

೨. ಚೇತನಾಚೇತನಾತ್ಮಕವಾದ ಜಗತ್ತಿನಲ್ಲಿ ಸರ್ವತ್ರಪರಿಪೂರ್ಣನಾಗಿ ತುಂಬಿ ಹರಡಿಕೊಂಡು ವ್ಯಾಪ್ತವಾಗಿದ್ದಾನೆ— ಶ್ರೀವಾಸುದೇವನಾದ ಶ್ರೀಪರಮಾತ್ಮನು. ಇದನ್ನೇ, **ಅತತನು ತಾನಾಗಿ**— ಎಂದಿದ್ದಾರೆ.

೩. ಜಗತ್ತಿನ ಸೃಷ್ಟಿಗೆ ಉಪಾದಾನಕಾರಣರಾಗಿ ಚಿತ್ಪ್ರಕೃತಿಸ್ವರೂಪರಾದ ಶ್ರೀಲಕ್ಷ್ಮೀದೇವರ ರಮಣನೇ — **ಲಕುಮೀನಾಥನಾದ** ಶ್ರೀಮನ್ನಾರಾಯಣನು.

೪. ಸರ್ವತ್ರವ್ಯಾಪ್ತನಾದ ಲಕುಮೀನಾಥನು ತ್ರಿವಿಧಜೀವರಾದ ಸರ್ವಜೀವರಲ್ಲಿ ಬಿಂಬರೂಪದಿಂದ ಅಂತರ್ಯಾಮಿಯಾಗಿದ್ದಾನೆ,

೫. ಸರ್ವಜೀವಾಂತರ್ಯಾಮಿಯಾದ ಜಗದೀಶನು ಆಯಾ ಜೀವರ ರೂಪಗಳಂತೆ ತತ್ತದ್ರೂಪಧಾರಕನಾಗಿ, ತತ್ತನ್ನಾಮಕನಾಗಿ ಇದ್ದಾನೆ. **(ತತ್ತದ್ರೂಪಗಳ ಧರಿಸಿ).**

೬. **ಜಾತಿಕಾರನ ತೆರದಿ** :

ನಾಟಕದಲ್ಲಿ ಪಾತ್ರಧಾರಿಯಾದ ಕಲಾವಿದನು ಬೇರೆ ಬೇರೆ ಪಾತ್ರಗಳನ್ನು ಧರಿಸಿ, ರಂಗಸ್ಥಳದ ಮೇಲೆ ಆಯಾಯಾ ಮಾತಿನಲ್ಲಿ ವೈಖರಿಯಲ್ಲಿ ಪಾತ್ರಕ್ಕೆ ತಕ್ಕಂತೆ, ವೇಷ ಭೂಷಣಗಳಿಂದ ಜನರನ್ನು ರಂಜಿಸುವನು. ಇದೇರೀತಿಯಲ್ಲಿ, ಮೂಲರೂಪೀ ಶ್ರೀಪರಮಾತ್ಮನು ರಾಮಕೃಷ್ಣಾದಿ ಅವತಾರಗಳನ್ನು ಧರಿಸಿ, ಜಾತಿಕಾರನಂತೆ (ವೇಷಧಾರಿಯಾದ ನಟನಂತೆ) ತನ್ನ ಮೂಲ ಸ್ವರೂಪವನ್ನು ಜನರಿಗೆ ಪ್ರಕಟಪಡಿಸದೆ, ತತ್ತದ್ರೂಪಗಳಿಂದ ವ್ಯಾಪಾರ ಮಾಡುತ್ತಿರುವನು.

೭. ಸಮಸ್ತಜೀವರ (ಬ್ರಹ್ಮಾದಿ ತೃಣಾಂತಜೀವರ ಪರ್ಯಂತ) ವಚನಗಳಲ್ಲಿ ತಾನು ಅಧಿಷ್ಠಿತನಾಗಿದ್ದು, ಭಿನ್ನಭಿನ್ನವಾದ ವ್ಯಾಗ್ರೂಪವಾದ ವ್ಯಾಪಾರಗಳನ್ನು ನಿರ್ವಹಿಸುತ್ತಿರುವ ಸರ್ವಕರ್ಮಕರ್ತನು.

೮. ಜೀವರಂತೆಯೇ ಇದ್ದು, ತನ್ನ ಬಿಂಬಕ್ರಿಯಾರೂಪವಾದ ವ್ಯಾಪಾರವಿಶೇಷಗಳನ್ನು ಪ್ರಕಟಿಸದೇ, ತಾನೇ ಬಿಂಬಕ್ರಿಯಾದ್ವಾರಾ ಶುಭ-ಮಿಶ್ರ-ಅಶುಭರೂಪವಾದ ಸಕಲಕರ್ಮಗಳನ್ನು ಮಾಡಿ, ಇಂದ್ರಿಯಾಭಿಮಾನಿ ದೇವತೆಗಳು-ಅಸುರರ ದ್ವಾರಾ ಮಾಡಿಸಿ, ದೇಹಗತಸಕಲ ಇಂದ್ರಿಯಗಳಲ್ಲಿ ಪ್ರಕಾಶತೋವ್ಯಾಪ್ತರಾದ ಜೀವರ ದ್ವಾರಾ ಮಾಡಿ ತೋರಿಸುತ್ತಿರವನು. ಈ ಮರ್ಮವನ್ನು ಜೀವರಿಗೆ ತಿಳಿಸದೇ, ತಾನೇ ಸಕಲಕರ್ಮಗಳಿಗೆ ಕರ್ತ ನೆಂಬ ಭಾವನೆಯನ್ನು ಹುಟ್ಟಿಸಿ, ಅಹಂಕರ್ತೃತ್ವಭಾವವನ್ನು ಹುಟ್ಟಿಸಿ ಜೀವರನ್ನು ನೋಡಿ ನಗುವನೆಂದು ತಾತ್ಪರ್ಯ. ॥ ೫ ॥

## ಪದ್ಯ-೬

**ಮೂಲ :-**

**ವೀತಭಯ ವಿಜ್ಞಾನದಾಯಕ ।**
**ಭೂತಭವ್ಯಭವತ್ಪ್ರಭು ಖಳಾ ।**
**ರಾತಿ ಖಗವರವಹನ ಕಮಲಾಕಾಂತ ನಿಶ್ಚಿಂತ ॥**
**ಮಾತರಿಶ್ವಪ್ರಿಯ ಪುರಾತನ ।**
**ಪೂತನಾಪ್ರಾಣಾಪಹಾರಿ ವಿ ।**
**ಧಾತೃಜನಕ ವಿಪಶ್ಚಿತರ ಪ್ರಿಯ ಸಲಹು ಸಲಹೆಮ್ಮ ॥ ೬ ॥**

**ಅವತರಿಣಿಕೆ :-**

ಅಪಾರಮಹಿಮಾಸಂಪನ್ನನೂ, ಅನಂತ ಕಲ್ಯಾಣಗುಣಗಣಧಾಮನೂ ಆದ ಶ್ರೀಪರಮಾತ್ಮನನ್ನು ಪ್ರಾರ್ಥನಾ ಮಾಡುತ್ತಾರೆ. ॥ ೬ ॥

**ಪ್ರತಿಪದಾರ್ಥ :-**

**ವೀತಭಯ**= ಹೋಗಲ್ಪಟ್ಟ ಭಯವುಳ್ಳ, ಅಂದರೆ, ಭಯವಿದೂರ ನಾದ, **ವಿಜ್ಞಾನದಾಯಕ**= ವಿಶೇಷವಾದ ಜ್ಞಾನಪ್ರದನು. **ಭೂತ** = ಹಿಂದೆ ಆಗಿಹೋದದ್ದು-**ಭವ್ಯ** = ಮುಂದೆ ಬರತಕ್ಕದ್ದು. **ಭವತ್** = ವರ್ತಮಾನಕಾಲದಲ್ಲಿ ಇರತಕ್ಕದ್ದು-ಈ ತ್ರಿವಿಧಕಾಲದಲ್ಲಿ ಅನಾದ್ಯನಂತಕಾಲ ದಿಂದಲೂ ಇರತಕ್ಕವನು. (ನಿತ್ಯನೂ ಅನಾದಿಯೂ ಆದ) **ಪ್ರಭು** = ಚರಾ ಚರಾತ್ಮಕಜಗತ್ತಿಗೇ ಸ್ವಾಮಿಯಾದವನು. **ಖಳಾರಾತಿ**= ದ್ವೇಷಿಗಳಾದ ದೈತ್ಯರನ್ನು ದುಃಖಪಡಿಸತಕ್ಕನು. **ಖಗವರವಹನ**= ಪಕ್ಷಿಶ್ರೇಷ್ಠರಾದ ಗರುಡನನ್ನೇ ವಾಹನವನ್ನಾಗಿ ಉಳ್ಳವನು. **ಕಮಲಾಕಾಂತ**= ಶ್ರೀಲಕ್ಷ್ಮೀ ರಮಣನು. **ನಿಶ್ಚಿಂತ**= ಚಿಂತಾಸಂತಾಪವಿದೂರನು. **ಮಾತರಿಶ್ವಪ್ರಿಯ**= ಶ್ರೀವಾಯುದೇವರಿಗೆ ಅತ್ಯಂತ ಪ್ರೀತಿಯ ವಿಷಯನು. **ಪುರಾತನ** = ಆದಿಯಿಂದ ಇರತಕ್ಕವನು. **ಪೂತನಾಪ್ರಾಣಾಪಹಾರಿ** = ಪೂತನಿಯ ಪ್ರಾಣವನ್ನು ಅಪಹಾರ ಮಾಡಿದವನು. **ವಿಧಾತೃಜನಕ** = ಶ್ರೀಬ್ರಹ್ಮದೇವರಿಗೆ ತಂದೆಯಾದವನು. **ವಿಪಶ್ಚಿತರ ಪ್ರಿಯ** ಬ್ರಹ್ಮಜ್ಞಾನಿಗಳಿಗೆ ಪ್ರೀತಿವಿಷಯ ನಾದವನು. **ಎಮ್ಮ** =ನಮ್ಮಗಳನ್ನು. (ಅಂದರೆ, ಸಕಲ ಸಜ್ಜನರನ್ನು-ಎಂದು ಗ್ರಾಹ್ಯ). **ಸಲಹು ಸಲಹು** ಸಂರಕ್ಷಣೆಮಾಡು. (ಪ್ರಾರ್ಥನಾರೂಪದಲ್ಲಿ ದ್ವಿರುಕ್ತಿಪ್ರಯೋಗ). ॥ ೬ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀಪರಮಾತ್ಮನ್ನ ಪ್ರಾರ್ಥನಾ ಮಾಡುತ್ತಾರೆ.

**ಹೋಗಲ್ಪಟ್ಟ** ಭಯವುಳ್ಳವ ಮತ್ತು ಭಕ್ತರಿಗೆ ಅಹಂ ಮಮತಾದಿ ಗಳಿಂದ ಪ್ರಾಪ್ತವಾಗತಕ್ಕ ಭಯಗಳ ಹೋಗಲ್ಪಟ್ಟದ್ದಾಗಿ ಮಾಡತಕ್ಕವ.

ವಿಶೇಷಾಕಾರವಾಗಿ ಜ್ಞಾನವನ್ನು ಕೊಡತಕ್ಕವ. ಗತವಾದದ್ದು, ಮುಂದೆ ಬರತಕ್ಕದ್ದು. ವರ್ತಮಾನಕಾಲದಲ್ಲಿ ಇರತಕ್ಕದ್ದು—ಈ ತ್ರಿವಿಧಕಾಲದಲ್ಲಿ ಅನಾದ್ಯನಂತಕಾಲದಿಂದ ವ್ಯಾಪ್ತನಾಗಿ ಇರತಕ್ಕವ ಮತ್ತು ಗತರಾದ, ಲಿಂಗ ಭಂಗರಾದ ಅನಂತಕಲ್ಪದ ಮುಕ್ತರಿಗೆ, ಅಸೃಜ್ಯರಾಶಿಗೆ ಎಂದರೆ, ಇವರು ಉತ್ತರೋತ್ತರ ಸೃಷ್ಟಿಗೆ ಬರತಕ್ಕವರು—ಇವರಿಗೆ, ವರ್ತಮಾನಕಾಲದಲ್ಲಿ ಸೃಷ್ಟಿ ಒಳಗೆ ಇರತಕ್ಕವರಿಗೆ, ಏತಾದೃಶ ತ್ರಿವಿಧಜೀವರಿಗೆ ಯಜಮಾನ ನಾದವನು. ದ್ವೇಷಿಗಳಾದ ದೈತ್ಯರನ್ನ ದುಃಖಪಡಿಸತಕ್ಕವನು. ಪಕ್ಷಿಗಳಿಗೆ ಶ್ರೇಷ್ಠನಾದ ಗರುಡನೇ ವಾಹನನಾದವನು. ಲಕ್ಷ್ಮೀದೇವಿಯರಿಗೆ ಪತಿಯಾದ ವನು. ಆಲೋಚನೆಯೇನು, ಚಿಂತೆಯೇನು-ಇಲ್ಲದವನು. ಶ್ರೀವಾಯುದೇವ ರಿಗೆ ಪ್ರೀತಿವಿಷಯನಾದವನು. ಅನಾದಿಯಿಂದ ಇರತಕ್ಕವನು. ಪೂತನಿಯ ಪ್ರಾಣವನ್ನು ಅಪಹಾರ ಮಾಡಿದವ. ಬ್ರಹ್ಮಜ್ಞಾನಿಗಳಿಗೆ ಪ್ರೀತಿವಿಷಯ ನಾದವನು, ಇಂಥಾ ಸರ್ವೋತ್ತಮನಾದ ಶ್ರೀಪರಮಾತ್ಮನೇ ನಮ್ಮಗಳನ್ನು ಸಂರಕ್ಷಣಮಾಡು—ಸಂರಕ್ಷಣಮಾಡು—ಎಂತ ತಾತ್ಪರ್ಯ. ॥ ೬ ॥

**೨. ಭಾವಪ್ರಕಾಶಿಕೆ :**

ಯಾವಕಾಲಕ್ಕೂ ಯಾವ ವಿಧವಾದ ಭಯವೂ ಇಲ್ಲದವನು. ವಿಶೇಷ ವಾದ ಜ್ಞಾನವನ್ನು ಕೊಡುವವನು. ಅಯೋಗ್ಯರಾದ ದುಷ್ಟರಿಗೆ ಶತ್ರು ಯೆನಿಸುವನು. ಪಕ್ಷಿಶ್ರೇಷ್ಠರಾದ ಗರುಡದೇವರ ವಾಹನನು. ಶ್ರೀಲಕ್ಷ್ಮೀ ಪತಿಯು, ಚಿಂತೆ ಇಲ್ಲದವನು. ಮುಖ್ಯಪ್ರಾಣದೇವರಿಗೆ ಪ್ರೀತಿಪಾತ್ರನು. ಅನಾದಿಕಾಲೀನನು. ಪೂತನಿಯ ಪ್ರಾಣವನ್ನು ಹೀರಿದವನು. ಶ್ರೀಬ್ರಹ್ಮ ದೇವರ ತಂದೆಯು. ಜ್ಞಾನಿಗಳ ಪ್ರಿಯನು. ಇಂತಹ ನೀನು ನಮ್ಮನ್ನು ಸಂರಕ್ಷಿಸು. ॥ ೬ ॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :**

"ವೀತ"-ಇತಿ । ವಿವರಣ ಭೇದಾತ್ ತದಿಕಾಸ ಖಗರ್ಥ ವಿಪ

ಭೂತಭವ್ಯದಾಖ್ಯಾಃ ಪ್ರಜಾಃ, ತಾಸಾಂ ಭೂತಿಃಸುಖಂ ಪ್ರಕರ್ಷೇಣ ಯಸ್ಮಾತ್ ಸಃ ತಥೋಕ್ತಃ ॥ ೬ ॥

**ಕನ್ನಡಾರ್ಥ :**

"ಭೂತಭವ್ಯಭವತ್ಪ್ರಭುಃ" ॥—ಭೂತ—ಹಿಂದಿನಕಾಲದ, ಭವ್ಯ-ಮುಂದಿನಕಾಲದ, ಭವತ್-ವರ್ತಮಾನಕಾಲದ ಪ್ರಜೆಗಳು-ಇವರುಗಳಿಗೆ ಅತಿಶಯವಾದ ಸುಖವನ್ನುಂಟುಮಾಡುವವನು. ಈ ನಾಮಗಳಿಗೆ ತದಿದಾಸ-ಮುಂತಾದ ಬೃಹತೀಯುಕ್ಕಗಳು ವಿವರಣರೂಪವಾಗಿ ಹೊರಟಿರುತ್ತವೆ. ಅವುಗಳನ್ನು ಅನುಮಾರ್ಥಗಳ ನಿರೂಪಣೆಗಳಲ್ಲಿ ನೋಡತಕ್ಕದ್ದು. ॥ ೬ ॥

**೫. ಶ್ರೀಗುರುಹೃದಯ ಪ್ರಕಾಶಿಕೆ :**

ಭಕ್ತಿಪಾರವಶ್ಯದಿಂದ ಮಾತ್ರಾ ಸ್ತುತಿಸುತ್ತಾರೆ—ನಾಲ್ಕು ಪದ್ಯದಿಂದ-ವೀತ-ಎಂದು ಮೊದಲು ಮಾಡಿ.

ಭಯಾದಿ ದೋಷರಹಿತನೇ, ವಿಜ್ಞಾನವೆಂಬ ಅಪರೋಕ್ಷಜ್ಞಾನ ಕೊಡುವವನೇ ಭೂತಭವ್ಯಭವತ್- ಎಂಬ ಕಾಲತ್ರಯಪ್ರಭುವೇ, ಹಿಳನೆಂಬ ಇಂದ್ರಿಯಲೋಲ ದುಷ್ಟನಿಗ್ರಹ ಕರ್ತೃವೇ, ಖಗವರವಾಹನನೆಂಬ ಗರುಡಾರೂಢನೆ, ಕಮಲೆಯೆಂಬ ಲಕ್ಷ್ಮೀಪತಿಯೇ, ಚಿಂತಾದೋಷರಹಿತನೆ, ಮಾತರಿಶ್ವನೆಂಬ ಪ್ರಾಣಪ್ರಿಯನೇ, ಪುರಾತನನೆಂಬ ಅನಾದಿಸಿದ್ಧನೇ, ಪೂತನಿಯ ಪ್ರಾಣ ಅಪಹರಿಸಿದವನೇ, ಬ್ರಹ್ಮಜನಕನೇ, ವಿಪಶ್ಚಿತರೆಂಬ ಜ್ಞಾನಿಪ್ರಿಯನೇ, ಕವಿಗಳೆಂಬ ಬೋಧಕರಿಂದ ವರ್ಣಿತನೆ. ॥ ೬ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಶ್ರೀಪರಮಾತ್ಮನು ಮಹಾಪರಾಕ್ರಮಿಶಾಲಿಯು, ಅಸದೃಶ ಶಕ್ತಿವಂತನು, ಅವನಿಗೆ ಯಾರಿಂದಲೂ, ಯಾವ ಕಾಲದಲ್ಲೂ ಭಯವೆಂಬುದೇ

ಇಲ್ಲ. ಇದರಿಂದ, ಆ ವಿಶ್ವೇಶ್ವರನು **ವೀತಭಯನು**. (ವೀತ-ಹೋಗಲಾಡಿಸಲ್ಪಟ್ಟ, ಭಯ-ಭಯವುಳ್ಳವನು. ಅಂದರೆ, ನಿರ್ಭೀತನು).

೨. ಮೋಕ್ಷಪ್ರಾಪ್ತಿಗೆ ಸತ್ಸಾಧನಾಪಥವು ಅತ್ಯಗತ್ಯ. ಅಂತಹ ಸತ್ಸಾಧನೆಗೆ ಮುಖ್ಯ ಕಾರಣವಾದ ವಿಶೇಷವಾದ ಜ್ಞಾನವನ್ನು ತನ್ನ ಭಕ್ತರಿಗೆ ಕೊಡತಕ್ಕವನು. ಇದರಿಂದ, ಆ ವಿಶ್ವಂಭರನು **ವಿಜ್ಞಾನದಾಯಕನು**. (ವಿಜ್ಞಾನ-ವಿಶೇಷವಾದ, ಜ್ಞಾನ-ಮುಕ್ತಿಗೆ ಸಾಧನವಾದುದು. ದಾಯಕ-ಪ್ರದನು).

೩. ಹಿಂದೆ ಆಗಿಹೋಗಿರುವ, ಭೂತಕಾಲ-ಈಗ ನಡೆಯುತ್ತಿರುವ ವರ್ತಮಾನಕಾಲ-ಮುಂದೆ ಬರಲಿರುವ ಭವಿಷತ್ಕಾಲ-ಈ ಕಾಲತ್ರಯಗಳಲ್ಲಿ ಅನಾದ್ಯನಂತಕಾಲದಿಂದಲೂ ನಿತ್ಯನಾಗಿ, ಶಾಶ್ವತನಾಗಿ, ಶಶ್ವದೇಕಪ್ರಕಾರನಾಗಿ ಇರುವವನು. ಕಾಲಾತೀತನಾದ ಕಮಲದಳಾಯತಾಕ್ಷನು ಕಾಲಾಂತರ್ಗತನಾಗಿ, ಕಾಲನಿಯಾಮಕನಾಗಿದ್ದಾನೆ.

**ಭೂತ**-ಗತಿಸಿದ ಕಾಲ. **ಭವ್ಯ**-ವರ್ತಮಾನಕಾಲ, **ಭವತ್**-ಭವಿಷತ್ಕಾಲ. ಹೀಗೆ, ಕಾಲತ್ರಯಗಳಿಂದ ಯುಕ್ತವಾದ ಪ್ರವಾಹತೋನಿತ್ಯವಾದ ಕಾಲ ಪ್ರವಾಹ.

೪. ತನ್ನಿಂದ ಸೃಷ್ಟವಾದ ಚರಾಚರಾತ್ಮಕ ಜಗತ್ತಿಗೆ ಸ್ವಾಮಿಯೂ. ಜಗದೀಶ್ವರನಾದ ಜಗನ್ನಾಥನು-**ಪ್ರಭುವು** (**ನಿಯಾಮಕನು**).

೫. ತಪೋಯೋಗ್ಯರಾದ ದೈತ್ಯರು ವಿಷ್ಣುದ್ವೇಷಿಗಳು. ಹಾಗೂ ಭಗವದ್ಭಕ್ತರ ದ್ವೇಷಿಗಳು. ಅಂತಹ ದೈತ್ಯರ ಸಮೂಹಕ್ಕೆ ಶತ್ರುವಾಗಿದ್ದಾನೆ. ಇದರಿಂದ, **ಖಳಾರಾತಿಯು** (ಖಳ-ದುಷ್ಟರಾದ ದೈತ್ಯರು ಅರಾತಿ ಶತ್ರು-ಸಂಹಾರಕ) ದಾನವವಲ್ಲಣನು.

೬. ಗಗನಸಂಚಾರಿಗಳಾದ ಪಕ್ಷಿಗಳಿಗೆ-**ಖಗ**-ಎಂದು ಹೆಸರು. ಅಂತಹ ಪಕ್ಷಿಗಳಲ್ಲಿ ಶ್ರೇಷ್ಠವಾದವನು ಗರುಡ (ಖಗವರ). ಖಗವರನಾದ ಗರುಡನನ್ನೇ ತನ್ನ ವಾಹವನ್ನಾಗಿಉಳ್ಳ ಶ್ರೀಪರಮಾತ್ಮನು-**ಖಗವರ ವಾಹನು**. ಅಂದರೆ, ಗರುಡವಾಹನನೆಂಬರ್ಥ.

೭. ಕಮಲಸಂಭವೆಯಾದ ಶ್ರೀಲಕ್ಷ್ಮೀದೇವಿಗೆ **ಕಮಲಾ**-ಎಂಠ ನಾಮ. ಅಂತಹ ಕಮಲಾನಾಮಕಳಾದ ಶ್ರೀಲಕ್ಷ್ಮೀದೇವಿಗೆ ಪತಿಯೂ ನಿಯಾಮಕನೂ, ಉತ್ತಮೋತ್ತಮನೂ ಆದ ಶ್ರೀಹರಿಯು **ಕಮಲಾಕಾಂತನು** (ಕಮಲಾ-ಶ್ರೀಲಕ್ಷ್ಮೀದೇವಿಕಾಂತ-ಪತಿ ಮತ್ತು ನಿಯಾಮಕ) ಅಪ್ರಾಕೃತ ಪುರುಷ ಜಗದ್ವಿಲಕ್ಷಣಮೂರ್ತಿಯೂ ಆದ ಆ ಅಪ್ರಮೇಯನಿಗೆ ಚಿಂತೆಯಾಗಲೀ, ಯಾವ ವಿಧವಾದ ಸಂತಾಪ-ಕ್ಲೇಶಗಳಾಗಲೀ ಯಾವ ಕಾಲದಲ್ಲೂ ಇಲ್ಲವೇ ಇಲ್ಲ. ಇದರಿಂದ, **ನಿಶ್ಚಿಂತನು.**

೮. ಸಪ್ತಾಸ್ತ್ರಗಳಲ್ಲಿ ಸಂಚರಿಸುವ, ಭಳಿತ್ಥಾದಿ ಸೂಕ್ತಗಳಿಂದ ವೇದ ಪ್ರತಿಪಾದ್ಯರಾದ ಶ್ರೀವಾಯುದೇವರಿಗೆ-**ಮಾತರಿಶ್ವ** ಎಂದು ಹೆಸರು. ಮಾತರಿಶ್ವನಾಮಕರಾದ ಶ್ರೀಮುಖ್ಯಪ್ರಾಣದೇವರಿಗೆ ಅತ್ಯಂತ ಪ್ರೀತಿಯ ವಿಷಯನಾದ್ದರಿಂದ, **ಮಾತರಿಶ್ವಪ್ರಿಯನು.**

೧೦. ಆ ಮಾತರಿಶ್ವಪ್ರಿಯನು ಅನಾದಿಯಾಗಿದ್ದಾನೆ. ಮಹಾ ಪ್ರಳಯಕಾಲದಲ್ಲೂ ಏಕಮೇವಅದ್ವಿತೀಯನಾಗಿರುವ, ಸಮಾಭ್ಯಧಿಕಶೂನ್ಯನು. ಸಕಲಜೀವರೂ ಅವನ ಉದರ ಪ್ರವೇಶ ಮಾಡಿರುವ ಸಮಯದಲ್ಲಿ, ಒಬ್ಬನೇ ಏಕಾತ್ಮನಾಗಿ ವಿರಾಜಮಾನ ನಾಗಿರುವ ವಟಪತ್ರಶಾಯಿಯು. ಇದರಿಂದ, **ಪುರಾತನನು.**

೧೧. ಅಂತಹ ಪುರಾತನಪುರುಷನಾದ ಶ್ರೀಪರಮಾತ್ಮನು ಕೃಷ್ಣಾವತಾರವನ್ನು ತಾಳಿದಾಗ, ಶಿಶುವಾಗಿದ್ದಾಗಲೇ ತನ್ನನ್ನು ಕೊಲ್ಲಬೇಕೆಂ

ಉದ್ದೇಶದಿಂದ ಗೋಕುಲಕ್ಕೆ ಕಂಸನಿಂದ ಪ್ರೇರಿತಳಾಗಿ ಬಂದಿದ್ದ **ಪೂತನಿ** ಎಂಬ ರಕ್ಕಸಿಯನ್ನು, ಸ್ತನ್ಯಪಾನವನ್ನು ಮಾಡುವ ನೆವದಲ್ಲಿ ಅವಳ ಪ್ರಾಣ ರಸವನ್ನೇ ಹೀರಿಬಿಟ್ಟನು. ಪೂತನಿಯು ಕೃಷ್ಣನಿಂದ ಸಂಹೃತಳಾದ ಪ್ರಪ್ರಥಮ ರಾಕ್ಷಸಿಯು. ಇದರಿಂದ, ಶ್ರೀಕೃಷ್ಣನು **ಪೂತನಾಪ್ರಾಣಾಪಹಾರಿಯು**.

೧೨. ಅಂತಹ ಪೂತನೀಸಂಹಾರಕನು ಶ್ರೀಬ್ರಹ್ಮದೇವರ ಪಿತನು. **ಸೂಕ್ಷ್ಮಸೃಷ್ಟಿಯಲ್ಲಿ** ಶ್ರೀವಾಸುದೇವನಿಂದ ಮಾಯಾದೇವಿಯಲ್ಲಿ ಪುರುಷ ನಾಮಕ ವಿರಿಂಚಿ- ಎಂಬ ನಾಮದಿಂದ ಶ್ರೀಬ್ರಹ್ಮದೇವರು ಜನಿಸಿದರು. ಪದ್ಮಕಲ್ಪದಲ್ಲಿ ಶ್ರೀಹರಿಯ ನಾಭೀಕಮಲಸಂಜಾತರು ಶ್ರೀಬ್ರಹ್ಮದೇವರು. ಇದರಿಂದ **ವಿಧಾತೃಜನಕನು** (ವಿಧಾತೃ-ಶ್ರೀಬ್ರಹ್ಮದೇವರು).

೧೨. ಬ್ರಹ್ಮಜ್ಞಾನಿಗಳು ವಿಪಶ್ಚಿತರು. ಅವರಿಗೆ ಅತ್ಯಂತ ಪ್ರಿಯನು. ಇದರಿಂದ, **ವಿಪಶ್ಚಿತಪ್ರಿಯನು**.

೧೩. ಇಂತಹ ಅನಂತಮಹಿಮಾಸಂಪನ್ನನಾದ ಶ್ರೀಹರಿ, ನಮ್ಮೆಲ್ಲರನ್ನು ಸಂರಕ್ಷಿಸಲೆಂದು ಪ್ರಾರ್ಥಿಸುತ್ತಾರೆ. ॥ ೬ ॥

## ಪದ್ಯ-೭

**ಮೂಲ :-**

ದುಷ್ಟಸಂಹಾರಿ ಸರ್ವೋ |
ತ್ಕೃಷ್ಟಮಹಿಮ ಸಮೀರನುತ ಸಕ |
ಲೇಷ್ಟದಾಯಕ ಸ್ವರತ ಸುಖಮಯ ಮಮ ಕುಲಸ್ವಾಮಿ ||
ಹೃಷ್ಟ ಪುಷ್ಟ ಕನಿಷ್ಠ ಸೃಷ್ಟ್ಯಾ |
ದ್ಯಷ್ಟಕರ್ತ ಕರೀಂದ್ರವರದ ಯ |
ಥೇಷ್ಟದನು ಉನ್ನತ ಸುಕವರ್ಗ ನಮಿಪೆನನವರತ ||೭||

**ಅವತರಿಣಿಕೆ :-**

ಸರ್ವೋತ್ಕೃಷ್ಟಮಹಿಮನಾದ ಸರ್ವೇಶ್ವರನಿಗೆ ಸದಾ ನಮಸ್ಕರಿಸುವೆನೆಂದು ಹೇಳುತ್ತಾರೆ. ॥ ೭ ॥

**ಪ್ರತಿಪದಾರ್ಥ :-**

**ದುಷ್ಟಜನಸಂಹಾರಿ**= ತನ್ನ ಭಕ್ತರನ್ನು ಪೀಡಿಸತಕ್ಕ ದೈತ್ಯರನ್ನ ಸಂಹಾರ ಮಾಡಿದವನೇ, **ಸರ್ವೋತ್ಕೃಷ್ಟಮಹಿಮ** = ಅಸದೃಶವಾದ ಶ್ರೇಷ್ಠತಮನಾದ ಮಹಾಮಹಿಮನೇ, **ಸಮೀರನುತ** = ಶ್ರೀವಾಯುದೇವರಿಂದ ವಂದಿತನೇ, **ಸಕಲೇಷ್ಟದಾಯಕ**= ತನ್ನಭಕ್ತರಿಗೆ ಸಮಸ್ತವಾದ ಮನೋಭೀಷ್ಟಗಳನ್ನು ಕೊಡುವವನೇ, **ಸ್ವರತ**= ಸ್ವರಮಣನಾದವನೇ, **ಸುಖಮಯ**= ಆನಂದಸ್ವರೂಪಿಯೇ, **ಮಮಕುಲಸ್ವಾಮಿ**= ನನ್ನ ಕುಲಸ್ವಾಮಿಯಾದ ಗರುಡವಾಹನ ಶ್ರೀಲಕ್ಷ್ಮೀನಾರಸಿಂಹನೇ, **ಹೃಷ್ಟ** = ನಿತ್ಯತೃಪ್ತನೇ, **ಪುಷ್ಟ** = ಪರಮಬಲಿಷ್ಠನೇ, **ಕನಿಷ್ಠ** = ಪ್ರಳಯಕಾಲದಲ್ಲಿ ಸಮಾನರಹಿತನಾಗಿ ಒಬ್ಬನೇ ಇರತಕ್ಕವನೇ, **ಸೃಷ್ಟ್ಯಾದಿ ಅಷ್ಟಕರ್ತ** =

ಸೃಷ್ಟಿ–ಸ್ಥಿತಿ–ಲಯ-ನಿಯಮನ–ಅಜ್ಞಾನ–ಜ್ಞಾನ–ಬಂಧ ಮತ್ತು ಮೋಕ್ಷಗಳೆಂಬ ಅಷ್ಟಕರ್ತೃತ್ವ ಶಕ್ತಿಉಳ್ಳವನೇ, **ಕರೀಂದ್ರವರದ**= ಗಜರಾಜನನ್ನು ಸಂರಕ್ಷಿಸಿದವನೇ, **ಯಥೇಷ್ಟದನು**= ಅವರವರ ಯೋಗ್ಯತಾನುಸಾರ ಅಭೀಷ್ಟಗಳನ್ನು ಪೂರ್ತಿಯಾಗಿ ಕೊಡತಕ್ಕವನೇ, **ಉನ್ನತ ಸುಕರ್ಮ**– ಸಮೀಚೀನವಾದ ಭಕ್ತಿಯಿಂದ ಭಗವದರ್ಪಣಪೂರ್ವಕವಾಗಿ ಸುಕರ್ಮಗಳನ್ನು ಮಾಡಿದವರಿಗೆ ಉನ್ನತ–ಅಂದರೆ, ಶ್ರೇಷ್ಠವಾದ ವೈಕುಂಠಾದಿ ಮೋಕ್ಷಲೋಕಗಳನ್ನು ಐದಿಸುವವನೇ, **ಅನವರತ ನಮಿಪೆ**= ನಿನಗೆ ಸದಾ ಸರ್ವಕಾಲಗಳಲ್ಲಿಯೂ ವಂದಿಸುತ್ತೇನೆ, ॥ ೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀಪರಮಾತ್ಮನೇ—ನಮಸ್ಕಾರ ಮಾಡುತ್ತೇನೆಂತ ಹೇಳುತ್ತಾರೆ.

ತನ್ನ ಭಕ್ತರನ್ನ ಪೀಡಿಸತಕ್ಕ ದೈತ್ಯರನ್ನ ಸಂಹಾರಮಾಡಿದವನೇ, ಅಸದೃಶವಾದ ಶ್ರೇಷ್ಠವಾದ ಮಹಿಮೋಪೇತನೇ, ಶ್ರೀವಾಯುದೇವರಿಂದ ವಂದಿತನಾದವನೇ. ಭಕ್ತರಿಗೆ ಸಮಸ್ತವಾದ ಮನೋಭೀಷ್ಟಗಳ ಕೊಡತಕ್ಕವ ಎಂದರೆ, ಯೋಗ್ಯತಾನುಸಾರ ಇಷ್ಟಗಳ ಕೊಡತಕ್ಕವನೇ, ಸ್ವರಮಣನಾದವನೇ, ಸುಖಮೇ ಪ್ರಾಚುರ್ಯವಾದವನೇ, ನಿತ್ಯತೃಪ್ತನಾದವನೇ, ಬಲಿಷ್ಠನಾದವನೇ, ಕೊನೆಯಾದ ಪ್ರಳಯಕಾಲದಲ್ಲಿ ರಮಾಸಹಿತನಾಗಿ ಒಬ್ಬನಾಗಿ ಇರತಕ್ಕವನೇ, ಇನ್ನೂ ತನ್ನ ಭಕ್ತರಿಗೆ ಕೊನಿಗೆ ಮೋಕ್ಷಪ್ರದನಾಗತನಾದ, ಕಡಿಯಿಂದ ಕನಿಷ್ಠನಂತ ನಾಮಪಡೆದವನೇ, ಎಂಟು ಕರ್ತವ್ಯವುಳ್ಳವ. ಅವು ದಾವದೆಂದರೆ, ೧. ಸೃಷ್ಟಿ. ೨. ಸ್ಥಿತಿ, ೩. ಸಂಹಾರ, ೪. ನಿಯಮನ, ೫, ಜ್ಞಾನ, ೬. ಅಜ್ಞಾನ. ೭. ಬಂಧ, ೮. ಮೋಕ್ಷ. ಏತಾದೃಶಅಷ್ಟಕರ್ತವ್ಯವುಳ್ಳವ, ಅಪರಿಮಿತಕರ್ತೃತ್ವ— ಈ ಎಂಟರಲ್ಲೇ ಅಂತರ್ಭೂತವು.

ಅಷ್ಟಕರ್ತೃತ್ವವುಳ್ಳವನೇ, ಗಜರಾಜನಿಗೆ ಪ್ರತ್ಯಕ್ಷನಾದವನೇ. ನಿಷ್ಕಾಮಕಸ್ತೋತ್ರದಿಂದ ಪ್ರತ್ಯಕ್ಷನಾದವನೇ. ದಾರದಾರಿಗೆ ದಾವದಾವದು ಅಭೀಷ್ಟವೋ ಅದರನ್ನ ಕೊಡತಕ್ಕವನೇ, ಸಮೀಚೀನವಾದ ಭಕ್ತಿಯಿಂದ ಅಧಿಕಾರಿಗಳು ಭಗವಂತನ ಗುಣಗಳೇನು, ಸೃಷ್ಟ್ಯಾದಿ ಕರ್ಮಗಳೇನು-ಇವುಗಳನ್ನು ಕೊಂಡಾಡಿದವರಿಗೆ ಉನ್ನತವಾದ ವೈಕುಂಠಾದಿ ಲೋಕವನ್ನು ಐದಿಸತಕ್ಕವನೇ. ಇಂಥ ಅಸದೃಶನಾದ ನಿನಗೆ, ನಿನ್ನ ಭಕ್ತರ ಕುಲಕ್ಕೇನು ಸ್ವಾಮಿಯಾದ ನಿನಗೆ ನಿರಂತರ ವಂದನ ಮಾಡುವೆ. ಜ್ಞಾನ ಭಕ್ತ್ಯಾದಿಗಳ ಅತಿಶಯವನ್ನಿ ರಕ್ಷಿಸೆಂದು ಪ್ರಾರ್ಥನೆ ಮಾಡೋಣವರಾಗಿದ್ದಾರೆಂದು ತಾತ್ಪರ್ಯ. ॥ ೮ ॥

**೨. ಭಾವಪ್ರಕಾಶಿಕೆ :**

ದುಷ್ಟದೈತ್ಯರ ಸಂಹಾರಿ. ಸರ್ವೋತ್ಕೃಷ್ಟಮಹಿಮ, ಶ್ರೀವಾಯು ದೇವರಿಂದ ಸ್ತುತ್ಯನು, ಭಕ್ತರ ಸರ್ವಾಭೀಷ್ಟಗಳನ್ನು ಪೂರೈಸುವವನು, ಸ್ವರಮಣನು, ಆನಂದಸ್ವರೂಪನು, ನನ್ನ ಕುಲದೈವನು, ಸಂತುಷ್ಟನು. ಸ್ಥೂಲಶರೀರದಲ್ಲಿದ್ದು, ಪುಷ್ಟನೆನಿಸುವನು. ಕೃಶರಾದ ಪ್ರಾಣಿಗಳಲ್ಲಿದ್ದು ಕೃಶನೆನಿಸುವವನು.

"ಅಣುಬೃಹತ್ ಕೃಶಸ್ಥೂಲಃ" — ಎಂಬ ಶ್ರೀವಿಷ್ಣುಸಹಸ್ರ ನಾಮದಲ್ಲಿ ಹೇಳಿದ ಅಭಿಪ್ರಾಯವನ್ನೇ ಇಲ್ಲೂ ತಿಳಿಯಬೇಕು. ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ ಎಂಟು ವಿಧ ಕರ್ತೃತ್ವ ಉಳ್ಳವನು. ಗಜೇಂದ್ರನಿಗೆ ವರವಿತ್ತವನು ಯಾರು ಯಾರಿಗೆ ಯಾವುದು ಇಷ್ಟವೋ, ಅದನ್ನು ಅವರವರಿಗೆ ಕೊಡುವವನು. ಮತ್ತೊಬ್ಬರಿಂದ ಮಾಡಲಶಕ್ಯವಾದ ಅತ್ಯುತ್ತಮ ಮತ್ತು ಬಹಳ ಕಷ್ಟಸಾಧ್ಯವಾದ ಕಾರ್ಯವನ್ನು ಮಾಡುವವನು. ಇಂತಹ ನಿನಗೆ ಸರ್ವಕಾಲದಲ್ಲೂ ನಮಸ್ಕಾರ ಮಾಡುವೆನು-ಎಂದು ತಾತ್ಪರ್ಯ. ॥ ೮ ॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :

"ದುಷ್ಟ" ಇತಿ॥ ಕನಿಷ್ಠ–ಗತತ್ವಾತ್॥ ಯಥೇಷ್ಟತನು ಉನ್ನತ ಕರ್ಮ॥ ಇತ್ಯುಕ್ತಮೇವಸಂಜಗ್ರಾಹ। ಯಥೇಚ್ಛೇಸ್ವರೂಪಂಧೀರಯನ್ ಉತ್ಕೃಷ್ಟ ಕರ್ಮಾ. ॥ ೭ ॥

### ಕನ್ನಡಾರ್ಥ :

ಈ ಪದ್ಯದಲ್ಲಿರುವ ಕನಿಷ್ಠಶಬ್ದಕ್ಕೆ ಕನಿಷ್ಠನಲ್ಲಿದ್ದು, ಕನಿಷ್ಠರನ್ನಾಗಿ ಮಾಡುವ ಕನಿಷ್ಠನಾಮಕ ಭಗದ್ರೂಪವೆಂದು ಅರ್ಥ. ಯಥೇಷ್ಟತನು ಮುನ್ನತ ಕರ್ಮಾ ಎಂಬುವರ ಅರ್ಥವನ್ನೇ—"ಯಥೇಷ್ಟತನು"—ಈ ಶಬ್ದದಿಂದ ಸಂಗ್ರಹಿಸಿರುತ್ತಾರೆ. ಯಥೇಷ್ಟವಾದ ಸ್ವರೂಪವನ್ನು ಸ್ವರೂಪ ಧರಿಸುವವ. ಹಾಗೂ ಉತ್ಕೃಷ್ಟವಾದ ಕರ್ಮಗಳನ್ನು ವ್ಯಾಪಾರಗಳನ್ನು ಮಾಡುವವನು. ಹೀಗೆ ಅರ್ಥ. ॥ ೭ ॥

## ೫. ಶ್ರೀಗುರು ಹೃದಯ ಪ್ರಕಾಶಿಕೆ :

ದುಷ್ಟಜನ ಸಂಹರ್ತೃವೇ, ಸರ್ವೋತ್ಕೃಷ್ಟ ಮಹಿಮನೇ. ಸಮೀರನೆಂಬ ಪ್ರಾಣಸಂಸ್ತುತನೇ. ಸಕಲೇಷ್ಟಪ್ರದಾಯಕನೇ. ಸ್ವರತನೆಂದರೆ—ಸ್ವಾನಂದ ಪೂರ್ಣನೇ. ಆನಂದಮಯಕೋಶದಲ್ಲಿದ್ದು, ಪ್ರಚುರಾನಂದರೂಪನೇ, ನಮ್ಮ ಕುಲಸ್ವಾಮಿಯೇ, ಹರ್ಷವೆಂಬ ಸ್ವಾನಂದದಿಂದ ಪುಷ್ಟನೆಂಬ ಪೂರ್ಣ ಶರೀರನೇ, ನಿಕೃಷ್ಟರಾದ ಜೀವರಲ್ಲಿದ್ದು, ನಿಕೃಷ್ಟತೆ ಕೊಡುವುದರಿಂದ ಕನಿಷ್ಟ ಶಬ್ದವಾಚ್ಯನೆ. ಜಗತ್ತಿಗೆ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನಾಜ್ಞಾನಬಂಧ ಮೋಕ್ಷವೆಂಬ ಎಂಟು ಅವಸ್ಥೆಗಳನ್ನು ಉಂಟುಮಾಡುವವನೇ, ಗಜೇಂದ್ರ ವರದನೇ, ಯಥೇಷ್ಟತನುವೆಂಬ ಸ್ವೇಚ್ಛಾರೂಪನೆ. ಉನ್ನತ ಸುಕರ್ಮವೆಂಬ ಉತ್ಕೃಷ್ಟವ್ಯಾಪಾರವುಳ್ಳವನೇ, ಸದಾ ನಿನ್ನನ್ನು ಕುರಿತು ನಮಿಸುವೆನು. ॥ ೭ ॥

# ಸರ್ವವ್ಯಾಖ್ಯಾನಸಾರ ಸಂಗ್ರಹ

೧. ದೈತ್ಯರು ತಮೋಯೋಗ್ಯಸ್ವಭಾವವುಳ್ಳವರು. ಭಗವದ್ವೇಷ ಮತ್ತು ಭಗವದ್ಭಕ್ತರ ದ್ವೇಷವೇ ಅವರ ಸ್ವರೂಪಗತಗುಣವು. ಸಜ್ಜನರಿಗೆ ಪೀಡಿತರಾದ ದೈತ್ಯರ ಪಾಲಿಗೆ ಶ್ರೀಹರಿಯು ಮೃತ್ಯುಸ್ವರೂಪನು ದಾನವದಲ್ಲಣನಾದ ಶ್ರೀಪರಮಾತ್ಮನು ದುಷ್ಟ**ಸಂಹಾರಿಯು.**

೨. ಅವನ ಪ್ರತಿಯೊಂದು ಮಹಿಮೆಯೂ ಅಪಾರ ಮತ್ತು ಅನಂತ. ಸರ್ವಶ್ರೇಷ್ಠವಾದ ಅಪಾರಮಹಿಮಾಸಂಪನ್ನನಾದ ಅನಂತನು **ಸರ್ವೋತ್ಕೃಷ್ಟಮಹಿಮನು.**

೩. ಸರ್ವೋತ್ಕೃಷ್ಟಮಹಿಮನಾದ ಸರ್ವೇಶ್ವರನು ಶ್ರೀಮುಖ್ಯಪ್ರಾಣರಿಂದ ಸದಾ ವಂದ್ಯನು ಮತ್ತು ಸಂಸ್ತುತ್ಯಮಾನನು. ಅತಿರೋಹಿತವಿಮಲ ವಿಜ್ಞಾನಿಗಳಾದ ಸಮೀರನಾಮಕರಾದ ಶ್ರೀವಾಯುದೇವರು ಶ್ರೀಹರಿಯ ಪ್ರಥಮಾಂಗಭೂತರು. ಅವನ ಮುಖ್ಯಪ್ರತೀಕರು. ಸಮೀರ ದೇವರು ಸದಾ ಸರ್ವಕಾಲದಲ್ಲಿ ಶ್ರೀಹರಿಗೆ ಅಭಿಮುಖರಾಗಿ ಅಂಜಲೀಬದ್ಧರಾಗಿ ನಿಂತು, ಅವನ ಅಪಾರ ಗುಣಗಣಾವಳಿಗಳನ್ನು ಸ್ತುತಿಸುತ್ತಿರುವರು.

೪. ಸಮೀರನುತನಾದ ಆ ಸರ್ವೋತ್ತಮನು ತನ್ನ ಭಕ್ತರ ಸಕಲ ಮನೋಭೀಷ್ಟಗಳನ್ನು ಪೂರೈಸುವ ಕಾಮಧೇನು. ಅವರವರ ಯೋಗ್ಯತಾನುಸಾರ ಫಲಪ್ರದನು, ಇದರಿಂದ, **ಸಕಲೇಷ್ಟದಾಯಕನು.**

೫. ಸಕಲೇಷ್ಟದಾಯಕನಾದ ಸಮೀರವಂದಿತನು ಸ್ವರಮಣನು. ತನ್ನ ಭಗವದ್ರೂಪಗಳಲ್ಲಿಯೇ ನಿರಂತರ ರಮಣಮಾಡುವ ರಮಾರಮಣನು. ಇತರ್ಯಾರಿಂದಲೂ ಅವನಿಗೆ ಆನಂದ ಬೇಕಿಲ್ಲ. ಸದಾ ಸ್ವಾನಂದಪೂರ್ಣನು. ಇದರಿಂದ **ಸ್ವರಮಣನು.**

೬. ಸ್ವರವನಾದ ಆಪ್ತಕಾಮನು ಆನಂದಪರಿಪೂರ್ಣನು. ನಿತ್ಯ ಸುಖಮಯನು. ಸ್ವಯಂ ಆನಂದ ಸ್ವರೂಪಿಯಾದ ಅವನಿಗೆ ಇತರರಿಂದಲೂ ಆನಂದ ಬೇಕಿಲ್ಲ. ಸರ್ವಸಚ್ಚೇತನರ ಆನಂದ ಭೋಗಕ್ಕೆ ಅವನೆ ಕಾರಣನು. ಇದರಿಂದ **ಸುಖಮಯನು.**

೭. ಸುಖಮಯನಾದ ಸರ್ವೋತ್ಕೃಷ್ಟಮಹಿಮನು ನನ್ನ ಕುಲಸ್ವಾಮಿ-ಎನ್ನುತ್ತಾರೆ. ದಾಸರಾಯರ ಕುಲ ಹಾಗೂ ಇಷ್ಟದೇವತಾ-ಗರುಡವಾಹನ ಶ್ರೀಲಕ್ಷ್ಮೀನರಸಿಂಹನು.

೮. ಅಸ್ಮದ್ಕುಲಸ್ವಾಮಿಯು ಸದಾ ಸಂತುಷ್ಟನು. ನಿತ್ಯತೃಪ್ತನು. ಆಪ್ತಕಾಮನು. ಇದರಿಂದ, **ಹೃಷ್ಟನು.**

೯. ಹೃಷ್ಟನಾದ ಶ್ರೀಹರಿಯು ಸರ್ವಜೀವರ ಸ್ಥೂಲದೇಹಗತನಾಗಿದ್ದು, ಜೀವರು ಭುಂಜಿಸಿದ ಆಹಾರವನ್ನು ರಸವಿಭಾಗಗೈದು, ಸ್ಥೂಲ ದೇಹಕ್ಕೆ ಉಪಚಯರೂಪದಲ್ಲಿ ಹಂಚುವನು. ಇದರಿಂದ ಜೀವರ ಸ್ಥೂಲ ದೇಹದ ಉಪಚಯ ಉಂಟಾಗಿ, ಪುಷ್ಟಿಯಾಗುವುದು. ಸ್ವಯಂ ಪರಿಪುಷ್ಟನು. ಇದರಿಂದ-**ಪುಷ್ಟನಾಮಕನು.**

೧೦. ಕನಿಷ್ಠರಾದ ಜೀವರಲ್ಲಿ ಅಂತರ್ಯಾಮಿಯಾಗಿದ್ದು, ಕನಿಷ್ಠ ವಾಚ್ಯನೆನಿಸುವನು. ಕನಿಷ್ಠ-ನೆಂದರೆ, ಅತ್ಯಂತಕೊನೆ-ಅಂದರೆ, ಮಹಾ, ಪ್ರಳಯಕಾಲ. ಆಗ ತಾನು ಲಕ್ಷ್ಮೀಸಹಿತನಾಗಿ, ಏಕಮೇವಾದ್ವಿತೀಯನಾಗಿ, ವಟಪತ್ರಶಾಯಿಯಾಗಿ ಪ್ರಳಯೋದಕದಲ್ಲಿ ವಿರಾಜಮಾನನಾಗಿರುವುದರಿಂದಲೂ **ಕನಿಷ್ಠನಾಮಕನು.** ನಿಕೃಷ್ಟರಾದ ಜೀವರಲ್ಲಿದ್ದು, ಅವರಿಗೆ ನಿಕೃಷ್ಟತೆಯನ್ನು ಕೊಡುವವನಾದ್ದರಿಂದ, ಕನಿಷ್ಠನಾಮಕನು.

**ಪ್ರಮಾಣ :**

"ಅಣು ಬೃಹತ್ ಕೃಶಸ್ಥೂಲಃ" – **ಶ್ರೀವಿಷ್ಣುಸಹಸ್ರನಾಮ.** ಅಣುಗಳಲ್ಲಿ ಅತ್ಯಂತ ಅಣುರೂಪದಿಂದಲೂ, ಬೃಹತ್ತಿನಲ್ಲಿ ಬೃಹದಾಕಾರನಾಗಿ ಆವರಣರೂಪದಲ್ಲಿಯೂ, ಕೃಶವಾದ ದೇಹದಲ್ಲಿ ಕೃಶನಾಮಕನಾಗಿಯೂ, ಸ್ಥೂಲಪದಾರ್ಥಗಳಲ್ಲಿ ಸ್ಥೂಲನೆಂದೆನಿಸಿ ಇರುವನು.

೧೧. ಇಂತಹ ಹೃಷ್ಟಪುಷ್ಟ ಕನಿಷ್ಠನಾಮಕನು ತನ್ನಿಂದ ಸೃಷ್ಟವಾದ ಸಕಲ ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ-ನಿಯಮನ-ಜ್ಞಾನ-ಅಜ್ಞಾನ-ಬಂಧ-ಮೋಕ್ಷಗಳೆಂಬ ಎಂಟು ವಿಧವಾದ ಕರ್ತೃತ್ವಶಕ್ತಿ ಉಳ್ಳವನು. ಜಗತ್ತಿನ ಉತ್ಪತ್ತಿ, (ಸೃಷ್ಟಿ). ಅದರ ಸಂರಕ್ಷಣೆ (ಸ್ಥಿತಿ). ನಾಶ (ಲಯ), ಸರ್ವರಿಗೂ ನಿಯಮನಮಾಡುವುದು. (ನಿಯಮನ). ಸಜ್ಜೀವರಿಗೆ ಭಗವತ್ಸಂಬಂಧವಾದ ಜ್ಞಾನಪ್ರದತ್ವ (ಜ್ಞಾನ). ಅಸುರರಿಗೆ ನಿತ್ಯಸಂಸಾರಿಗಳಿಗೆ ಅಜ್ಞಾನರೂಪವಾದ ಮಾಯೆ (ಅಜ್ಞಾನ). ಜೀವರಿಗೆ ಲಿಂಗೋಪಾದಾನದಿಂದ ಕರ್ಮಬಂಧನ (ಬಂಧನ) ಮತ್ತು ಕೊನೆಯಲ್ಲಿ ಲಿಂಗಭಂಗಾನಂತರ ನಿತ್ಯಾನಂದರೂಪವಾದ ಮೋಕ್ಷಪ್ರದತ್ವ (ಮೋಕ್ಷ)–ಈ **ಅಷ್ಟಕರ್ತೃತ್ವವುಳ್ಳ ಸ್ವಾಮಿಯು.**

೧೨. ಸ್ವಪ್ನಾದ್ಯಷ್ಟಕರ್ತೃವಾದ ಗರುಡವಾಹನನು ಗಜೇಂದ್ರವರದನು. ಗಜರಾಜನು ಮೊಸಳೆಯ ಬಾಯಿಗೆ ಸಿಕ್ಕಿ, ಭಕ್ತಿಭಾವದಿಂದ "ಆದಿಮೂಲ"—ಎಂದು ಕರೆದಾಗ, ಅವನ ಆಪತ್ತಿಗೆ ಒದಗಿ, ನಕ್ರನನ್ನು ಚಕ್ರದಿಂದ ಸೀಳಿ, ಕರೀಂದ್ರನನ್ನು ಸಂರಕ್ಷಿಸಿದ ಪ್ರಸಂಗ, ಇದರಿಂದ **ಕರೀಂದ್ರವರದನು.**

೧೩. ಕರೀಂದ್ರವರದನು ತನ್ನ ಭಕ್ತರಿಗೆ ಅವರವರ ಯೋಗ್ಯತೆಗೆ ಅನುವಾಗಿ ಇಷ್ಟಪ್ರದನಾಗಿದ್ದಾನೆ. ಇದರಿಂದ- **ಯಥೇಷ್ಟಪ್ರದನು.**

(ಯಥಾ + ಇಷ್ಟ + ದ = ಯಥಾ-ಎಂದರೆ, ಯೋಗ್ಯತೆಗನುಗುಣವಾಗಿ, ಅದನ್ನು ಮೀರದೆ, ಇಷ್ಟ-ಅಭಿಲಾಷೆಗಳು ದ-ಪ್ರದನು).

೧೪. ಯಥೇಷ್ಟಪ್ರದನು ಸಮೀಚೀನನಾದ, ತನಗೆ ಪ್ರೀತ್ಯರ್ಥವಾದ ಕರ್ಮಗಳನ್ನು ಮಾಡಿದ ಭಕ್ತರಿಗೆ, ಅತ್ಯುನ್ನತವಾದ ವೈಕುಂಠಾದಿ ಪರಮ ಪುರುಷಾರ್ಥವನ್ನು ಕೊಡುವನು. ಇದರಿಂದ **ಉನ್ನತ ಸುಕರ್ಮ**-ಎಂದಿದ್ದಾರೆ. ಸುಕರ್ಮ-ವಿಷ್ಣುಪ್ರೇರಣೆಯು ಕೇವಲ ವಿಷ್ಣುಪ್ರೀತ್ಯರ್ಥವಾಗಿ ಮಾಡುವ ಕರ್ಮಗಳು. ಉನ್ನತ-ಶ್ರೇಷ್ಠ ಸ್ಥಾನ-ಮೋಕ್ಷ ಪದವಿ. ಅಂತಹ ಶ್ರೀಪರಮಾತ್ಮನಿಗೆ ಸದಾ ಸರ್ವಕಾಲಗಳಲ್ಲೂ ಸಾಷ್ಟಾಂಗಪೂರ್ವಕ ನಮಸ್ಕಾರ ಮಾಡುತ್ತೇನೆ. ॥ ೭ ॥

## ಪದ್ಯ-೮

**ಮೂಲ :-**

**ಪಾಕಶಾಸನ ಪೂಜ್ಯಚರಣ ಪಿ ।**
**ನಾಕಿಸನ್ನುತಮಹಿಮ ಸೀತಾ ।**
**ಶೋಕನಾಶನ ಸುಲಭ ಸುಮುಖ ಸುವರ್ಣವರ್ಣನಿಭ ॥**
**ಮಾಕಳತ್ರ ಮನೀಷಿ ಮಧುರಿಪು ।**
**ಏಕಮೇವಾದ್ವಿತೀಯರೂಪ ಪ್ರ ।**
**ತೀಕ ದೇವಗಣಾಂತರಾತ್ಮಕ ಪಾಲಿಸುವುದೆಮ್ಮ ॥ ೮ ॥**

**ಅವತರಣಿಕೆ :**

ಅಪಾರಮಹಿಮಾಸಂಪನ್ನನೂ, ಏಕಮೇವಾದ್ವಿತೀಯನೂ ಆದ ಶ್ರೀಪರಮಾತ್ಮನನ್ನು ಸಂರಕ್ಷಣಮಾಡಲು ಪ್ರಾರ್ಥಿಸುತ್ತಾರೆ. ॥ ೮ ॥

**ಪ್ರತಿಪದಾರ್ಥ :**

**ಪಾಕಶಾಸನ ಪೂಜ್ಯಚರಣ**=ಶ್ರೀಇಂದ್ರದೇವರಿಂದ ಪೂಜಿತವಾದ ಪವಿತ್ರಪಾದಕಮಲವುಳ್ಳವನು. **ಪಿನಾಕಿಸನ್ನುತ**=ಶ್ರೀಮಹಾರುದ್ರದೇವರಿಂದ ಚೆನ್ನಾಗಿ ಸಂಸ್ತೂಯಮಾನನಾದವನು. **ಸೀತಾಶೋಕನಾಶನ**=ಸೀತಾದೇವಿಯರ ದುಃಖವಿದೂರಕರಾದ ಸೀತಾದೇವಿಯ ವ್ಯತಿರಿಕ್ತರಾದ ಸೀತಾ-ಸೀತಾಪ್ರತೀಕರೂಪರಲ್ಲಿದ್ದ ವೇದವತಿಯ ವ್ಯಾಜದಿಂದ, ರಾವಣಕುಲವನ್ನು ನಾಶಪಡಿಸಿದ ಶ್ರೀರಾಮಚಂದ್ರನು. **ಸುಲಭ**=ತನ್ನ ಭಕ್ತರಪಾಲಿಗೆ ಅತ್ಯಂತ ಸುಲಭನು. **ಸುಮುಖ**=ಭಕ್ತರಿಗೆ ಅನುಗ್ರಹಪ್ರದನಾಗಿರುವ. **ಸುವರ್ಣವರ್ಣನಿಭ**=ಬಂಗಾರವರ್ಣದೋಪಾದಿಯಲ್ಲಿ ದೇಹಕಾಂತಿಯುಳ್ಳವನು. (ಸಂಕರ್ಷಣರೂಪ) **ಮಾಕಳತ್ರ**= ಲಕ್ಷ್ಮೀದೇವಿಯರನ್ನೇ ಪತ್ನಿಯನ್ನಾಗಿ ಉಳ್ಳವ. (ಶ್ರೀಲಕ್ಷ್ಮೀರಮಣನು) **ಮನೀಷಿ** = ಪ್ರಾಜ್ಞಶಾಲಿಯಾದವನು. **ಮಧುರಿಪು** = ಮಧುನಾಮಕ ದೈತ್ಯನನ್ನು ಸಂಹರಿಸಿದವನು. **ಏಕಮೇವ ಅದ್ವಿತೀಯ ರೂಪ**= ಒಬ್ಬನೇ ಒಬ್ಬನು. ಇನ್ನೊಬ್ಬರಿಲ್ಲದ ಸಮಾಭ್ಯಧಿಕಶೂನ್ಯನು. (ಅವನಿಗೆ ಸಮರಾರೂ ಇಲ್ಲ. ಅಧಿಕರಂತೂ ಇಲ್ಲವೇ ಇಲ್ಲ). **ಪ್ರತೀಕದೇವಗಣಾಂತರಾತ್ಮಕ**=ದೇವತೆಗಳು ಶ್ರೀಹರಿಗೆ ಪ್ರತಿಮಾಸದೃಶರು. ಅವರಲ್ಲಿ ಅಂತರ್ಗತನಾಗಿರತಕ್ಕವನು, **ಎಮ್ಮನು ಪಾಲಿಸುವುದು**=ಇಂತಹ ಗುಣಸಂಪನ್ನನಾದ ಶ್ರೀಹರೇ। ನಮ್ಮನ್ನೆಲ್ಲರನ್ನೂ ಸಂರಕ್ಷಿಸೆಂದ, ಪ್ರಾರ್ಥಿಸುತ್ತಿದ್ದಾರೆ. ॥ ೮ ॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ್ನ ಸಂರಕ್ಷಣೆ ಮಾಡೆಂದು ಪ್ರಾರ್ಥಿಸುತ್ತಾರೆ.

ತನ್ನ ಅಸದೃಶ ಮಹಿಮಾ ತೋರಿಸಿ, ಇಂದ್ರದೇವರಿಂದ ಪೂಜಿತವಾದ ಪಾದಗಳುಳ್ಳವ. ತಾನು ಸ್ತ್ರೀರೂಪಧರಿಸಿ, ರುದ್ರದೇವರನ್ನು ಮೋಹಪಡಿಸಿ

ಸೃಷ್ಟಿ–ಸ್ಥಿತಿ–ಲಯ-ನಿಯಮನ–ಅಜ್ಞಾನ-ಜ್ಞಾನ–ಬಂಧ ಮತ್ತು ಮೋಕ್ಷಗಳೆಂಬ ಅಷ್ಟಕರ್ತೃತ್ವ ಶಕ್ತಿಉಳ್ಳವನೇ. **ಕರೀಂದ್ರವರದ**=ಗಜರಾಜನನ್ನು ಸಂರಕ್ಷಿಸಿದವನೇ. **ಯಥೇಷ್ಟದನು**=ಅವರವರ ಯೋಗ್ಯತಾನುಸಾರ ಅಭೀಷ್ಟಗಳನ್ನು ಪೂರ್ತಿಯಾಗಿ ಕೊಡತಕ್ಕವನೇ. **ಉನ್ನತ ಸುಕರ್ಮ**–ಸಮೀಚೀನವಾದ ಭಕ್ತಿಯಿಂದ ಭಗವದರ್ಪಣಪೂರ್ವಕವಾಗಿ ಸುಕರ್ಮಗಳನ್ನು ಮಾಡಿದವರಿಗೆ ಉನ್ನತ–ಅಂದರೆ, ಶ್ರೇಷ್ಠವಾದ ವೈಕುಂಠಾದಿ ಮೋಕ್ಷಲೋಕಗಳನ್ನು ಐದಿಸುವವನೇ. **ಅನವರತ ನಮಿಪೆ**=ನಿನಗೆ ಸದಾ ಸರ್ವಕಾಲಗಳಲ್ಲಿಯೂ ವಂದಿಸುತ್ತೇನೆ. ॥ ೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀಪರಮಾತ್ಮನೇ—ನಮಸ್ಕಾರ ಮಾಡುತ್ತೇನಂತ ಹೇಳುತ್ತಾರೆ.

ತನ್ನ ಭಕ್ತರನ್ನ ಪೀಡಿಸತಕ್ಕ ದೈತ್ಯರನ್ನ ಸಂಹಾರಮಾಡಿದವನೇ, ಅಸದೃಶವಾದ ಶ್ರೇಷ್ಠವಾದ ಮಹಿಮೋಪೇತನೇ, ಶ್ರೀವಾಯುದೇವರಿಂದ ವಂದಿತನಾದವನೇ. ಭಕ್ತರಿಗೆ ಸಮಸ್ತವಾದ ಮನೋಭೀಷ್ಟಗಳ ಕೊಡತಕ್ಕವ ಎಂದರೆ, ಯೋಗ್ಯತಾನುಸಾರ ಇಷ್ಟಗಳ ಕೊಡತಕ್ಕವನೇ, ಸ್ವರಮಣನಾಗವನೇ, ಸುಖಮೇ ಪ್ರಾಚುರ್ಯವಾದವನೇ, ನಿತ್ಯತೃಪ್ತನಾದವನೇ. ಬಲಿಷ್ಠನಾದವನೇ, ಕೊನೀವಾದ ಪ್ರಳಯಕಾಲದಲ್ಲಿ ರಮಾಸಹಿತನಾಗಿ ಒಬ್ಬನಾಗಿ ಇರತಕ್ಕವನೇ, ಇನ್ನೂ ತನ್ನ ಭಕ್ತರಿಗೆ ಕೊನಿಗೆ ಮೋಕ್ಷಪ್ರದನಾಗತನಾದ, ಕಡಿಯಿಂದ ಕನಿಷ್ಠನಂತ ನಾಮಪಡೆದವನೇ, ಎಂಟು ಕರ್ತವ್ಯವುಳ್ಳವ. ಅವು ದಾವದೆಂದರೆ, ೧. ಸೃಷ್ಟಿ. ೨. ಸ್ಥಿತಿ, ೩. ಸಂಹಾರ, ೪. ನಿಯಮನ, ೫, ಜ್ಞಾನ, ೬. ಅಜ್ಞಾನ. ೭. ಬಂಧ, ೮. ಮೋಕ್ಷ. ಏತಾದೃಶಅಷ್ಟಕರ್ತವ್ಯವುಳ್ಳವ, ಅಪರಿಮಿತಕರ್ತೃತ್ವ— ಈ ಎಂಟರಲ್ಲೇ ಅಂತರ್ಭೂತವು.

**ಪ್ರತಿಪದಾರ್ಥ :**

**ಪಾಕಶಾಸನ ಪೂಜ್ಯಚರಣ**=ಶ್ರೀಇಂದ್ರದೇವರಿಂದ ಪೂಜಿತವಾದ ಪವಿತ್ರಪಾದಕಮಲವುಳ್ಳವನು. **ಪಿನಾಕಿಸನ್ನುತ**=ಶ್ರೀಮಹಾರುದ್ರದೇವರಿಂದ ಚೆನ್ನಾಗಿ ಸಂತುತ್ಯಮಾನನಾದವನು. **ಸೀತಾಶೋಕನಾಶನ**=ಸೀತಾದೇವಿಯರ ದುಃಖವಿದೂರಕರಾದ ಸೀತಾದೇವಿಯ ವ್ಯತಿರಿಕ್ತರಾದ ಸೀತಾ-ಸೀತಾಪ್ರತೀಕರೂಪರಲ್ಲಿದ್ದ ವೇದವತಿಯ ವ್ಯಾಜದಿಂದ, ರಾವಣಕುಲವನ್ನು ನಾಶಪಡಿಸಿದ ಶ್ರೀರಾಮಚಂದ್ರನು. **ಸುಲಭ**=ತನ್ನ ಭಕ್ತರಪಾಲಿಗೆ ಅತ್ಯಂತ ಸುಲಭನು. **ಸುಮುಖ**=ಭಕ್ತರಿಗೆ ಅನುಗ್ರಹಪ್ರದನಾಗಿರುವ. **ಸುವರ್ಣವರ್ಣನಿಭ**=ಭಂಗಾರವರ್ಣದೋಪಾದಿಯಲ್ಲಿ ದೇಹಕಾಂತಿಯುಳ್ಳವನು, (ಸಂಕರ್ಷಣರೂಪ) **ಮಾಕಳತ್ರ**= ಲಕ್ಷ್ಮೀದೇವಿಯರನ್ನೇ ಪತ್ನಿಯನ್ನಾಗಿ ಉಳ್ಳವ. (ಶ್ರೀಲಕ್ಷ್ಮೀರಮಣಃ) **ಮನೀಷಿ** = ಪ್ರಾಜ್ಞಶಾಲಿಯಾದವನು. **ಮಧುರಿಪು** = ಮಧುನಾಮಕ ದೈತ್ಯನನ್ನು ಸಂಹರಿಸಿದವನು. **ಏಕಮೇವ ಅದ್ವಿತೀಯ ರೂಪ**= ಒಬ್ಬನೇ ಒಬ್ಬನು. ಇನ್ನೊಬ್ಬರಿಲ್ಲದ ಸಮಾಭ್ಯಧಿಕಶೂನ್ಯನು. (ಅವನಿಗೆ ಸಮರಾರೂ ಇಲ್ಲ. ಅಧಿಕರಂತೂ ಇಲ್ಲವೇ ಇಲ್ಲ). **ಪ್ರತೀಕದೇವಗಣಾಂಶರಾತ್ಮಕ**=ದೇವತೆಗಳು ಶ್ರೀಹರಿಗೆ ಪ್ರತಿಮಾಸದೃಶರು. ಅವರಲ್ಲಿ ಅಂತರ್ಗತನಾಗಿರತಕ್ಕವನು. **ಎಮ್ಮನು ಪಾಲಿಸುವುದು**=ಇಂತಹ ಗುಣಸಂಪನ್ನನಾದ ಶ್ರೀಹರೇ। ನಮ್ಮನ್ನೆಲ್ಲರನ್ನೂ ಸಂರಕ್ಷಿಸೆಂದು ಪ್ರಾರ್ಥಿಸುತ್ತಿದ್ದಾರೆ. ॥ ೮ ॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ್ನ ಸಂರಕ್ಷಣೆ ಮಾಡೆಂದು ಪ್ರಾರ್ಥಿಸುತ್ತಾರೆ.

ತನ್ನ ಅಸದೃಶ ಮಹಿಮಾ ತೋರಿಸಿ, ಇಂದ್ರದೇವರಿಂದ ಪೂಜಿತವಾದ ಪಾದಗಳುಳ್ಳವ. ತಾನು ಸ್ತ್ರೀರೂಪಧರಿಸಿ, ರುದ್ರದೇವರನ್ನು ಮೋಹಪಡಿಸಿ

ಸೃಷ್ಟಿ-ಸ್ಥಿತಿ-ಲಯ-ನಿಯಮನ-ಅಜ್ಞಾನ-ಜ್ಞಾನ-ಬಂಧ ಮತ್ತು ಮೋಕ್ಷ ಗಳೆಂಬ ಅಷ್ಟಕರ್ತೃತ್ವ ಶಕ್ತಿಉಳ್ಳವನೇ, **ಕರೀಂದ್ರವರದ**= ಗಜರಾಜನನ್ನು ಸಂರಕ್ಷಿಸಿದವನೇ, **ಯಥೇಷ್ಟದನು**= ಅವರವರ ಯೋಗ್ಯತಾನುಸಾರ ಅಭೀಷ್ಟಗಳನ್ನು ಪೂರ್ತಿಯಾಗಿ ಕೊಡತಕ್ಕವನೇ, **ಉನ್ನತ ಸುಕರ್ಮ**- ಸಮೀಚೀನವಾದ ಭಕ್ತಿಯಿಂದ ಭಗವದರ್ಪಣಪೂರ್ವಕವಾಗಿ ಸುಕರ್ಮಗಳನ್ನು ಮಾಡಿದವರಿಗೆ ಉನ್ನತ-ಅಂದರೆ, ಶ್ರೇಷ್ಠವಾದ ವೈಕುಂಠಾದಿ ಮೋಕ್ಷಲೋಕಗಳನ್ನು ಐದಿಸುವವನೇ, **ಅನವರತ ನಮಿಪೆ**= ನಿನಗೆ ಸದಾ ಸರ್ವಕಾಲಗಳಲ್ಲಿಯೂ ವಂದಿಸುತ್ತೇನೆ. ॥ ೭ ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

**ಶ್ರೀಪರಮಾತ್ಮನೇ—ನಮಸ್ಕಾರ ಮಾಡುತ್ತೇನಂತ ಹೇಳುತ್ತಾರೆ.**

ತನ್ನ ಭಕ್ತರನ್ನ ಪೀಡಿಸತಕ್ಕ ದೈತ್ಯರನ್ನ ಸಂಹಾರಮಾಡಿದವನೇ, ಅಸದೃಶವಾದ ಶ್ರೇಷ್ಠವಾದ ಮಹಿಮೋಪೇತನೇ, ಶ್ರೀವಾಯುದೇವರಿಂದ ವಂದಿತನಾದವನೇ. ಭಕ್ತರಿಗೆ ಸಮಸ್ತವಾದ ಮನೋಭೀಷ್ಟಗಳ ಕೊಡತಕ್ಕವ ಎಂದರೆ, ಯೋಗ್ಯತಾನುಸಾರ ಇಷ್ಟಗಳ ಕೊಡತಕ್ಕವನೇ, ಸ್ವರಮಣನಾದವನೇ, ಸುಖವೇ ಪ್ರಾಚುರ್ಯವಾದವನೇ, ನಿತ್ಯತೃಪ್ತನಾದವನೇ. ಬಲಿಷ್ಠನಾದವನೇ, ಕೊನೆಯಾದ ಪ್ರಳಯಕಾಲದಲ್ಲಿ ರಮಾಸಹಿತನಾಗಿ ಒಬ್ಬನಾಗಿ ಇರತಕ್ಕವನೇ, ಇನ್ನೂ ತನ್ನ ಭಕ್ತರಿಗೆ ಕೊನಿಗೆ ಮೋಕ್ಷಪ್ರದನಾಗತನಾದ, ಕಡಿಯಿಂದ ಕನಿಷ್ಠನಂತ ನಾಮಪಡೆದವನೇ, ಎಂಟು ಕರ್ತವ್ಯವುಳ್ಳವ. ಅವು ದಾವದೆಂದರೆ, ೧. ಸೃಷ್ಟಿ. ೨. ಸ್ಥಿತಿ, ೩. ಸಂಹಾರ, ೪. ನಿಯಮನ, ೫. ಜ್ಞಾನ, ೬. ಅಜ್ಞಾನ. ೭. ಬಂಧ, ೮. ಮೋಕ್ಷ. ಏತಾದೃಶಅಷ್ಟ ಕರ್ತವ್ಯವುಳ್ಳವ, ಅಪರಿಮಿತಕರ್ತೃತ್ವ— ಈ ಎಂಟರಲ್ಲೇ ಅಂತರ್ಭೂತವು.

ಅಷ್ಟಕರ್ತೃತ್ವವುಳ್ಳವನೇ, ಗಜರಾಜನಿಗೆ ಪ್ರತ್ಯಕ್ಷನಾದವನೇ. ನಿಷ್ಕಾಮಕಸ್ತೋತ್ರ
ದಿಂದ ಪ್ರತ್ಯಕ್ಷನಾದವನೇ, ದಾರದಾರಿಗೆ ದಾವದಾವದು ಅಭೀಷ್ಟವೋ
ಅದರನ್ನ ಕೊಡತಕ್ಕವನೇ, ಸಮೀಚೀನವಾದ ಭಕ್ತಿಯಿಂದ ಅಧಿಕಾರಿಗಳ
ಭಗವಂತನ ಗುಣಗಳೇನು, ಸೃಷ್ಟ್ಯಾದಿ ಕರ್ಮಗಳೇನು-ಇವುಗಳನ್ನು ತಿಳಿದಾ
ದವರಿಗೆ ಉನ್ನತವಾದ ವೈಕುಂಠಾದಿ ಲೋಕವನ್ನು ಐದಿಸತಕ್ಕವನೇ. ಇಂ
ಅಸದೃಶನಾದ ನಿನಗೆ, ನಿನ್ನ ಭಕ್ತರ ಕುಲಕ್ಕೇನು ಸ್ವಾಮಿಯಾದ ನಿನ
ನಿರಂತರ ವಂದನ ಮಾಡುವೆ. ಜ್ಞಾನ ಭಕ್ತ್ಯಾದಿಗಳ ಅತಿಶಯವಾ
ರಕ್ಷಿಸೆಂದು ಪ್ರಾರ್ಥನೆ ಮಾಡೋವರಾಗಿದ್ದಾರೆಂದು ತಾತ್ಪರ್ಯ. ॥ ೭ ॥

### ೨. ಭಾವಪ್ರಕಾಶಿಕೆ :

ದುಷ್ಟದೈತ್ಯರ ಸಂಹಾರಿ, ಸರ್ವೋತ್ಕೃಷ್ಟಮಹಿಮ, ಶ್ರೀದೇ
ದೇವರಿಂದ ಸ್ವತಂತ್ರನು, ಭಕ್ತರ ಸರ್ವಾಭೀಷ್ಟಗಳನ್ನು ಪೂರೈಸುವವನು
ಸ್ವರಮಣನು, ಆನಂದಸ್ವರೂಪನು, ನನ್ನ ಕುಲದೈವನು, ಸಂತುಷ್ಟನು
ಸ್ಥೂಲಶರೀರದಲ್ಲಿದ್ದು, ಪುಷ್ಟನೆನಿಸುವನು. ಕೃಶರಾದ ಪ್ರಾಣಿಗಳಲ್ಲಿದ್ದು
ಕೃಶನೆನಿಸುವವನು.

"ಅಣುರ್ಬೃಹತ್ ಕೃಶಸ್ಥೂಲಃ" — ಎಂಬ ಶ್ರೀವಿಷ್ಣುಸಹಸ್ರ
ನಾಮದಲ್ಲಿ ಹೇಳಿದ ಅಭಿಪ್ರಾಯವನ್ನೇ ಇಲ್ಲೂ ತಿಳಿಯಬೇಕು. ಸೃಷ್ಟಿ,
ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ
ಎಂಟು ವಿಧ ಕರ್ತೃತ್ವ ಉಳ್ಳವನು. ಗಜೇಂದ್ರನಿಗೆ ವರವನಿತ್ತವನು
ಯಾರು ಯಾರಿಗೆ ಯಾವುದು ಇಷ್ಟವೋ, ಅದನ್ನು ಅವರವರಿಗೆ
ಕೊಡುವವನು. ಮತ್ತೊಬ್ಬರಿಂದ ಮಾಡಲಶಕ್ಯವಾದ ಅತ್ಯುತ್ತಮ ಮತ್ತು
ಬಹಳ ಕಷ್ಟಸಾಧ್ಯವಾದ ಕಾರ್ಯವನ್ನು ಮಾಡುವವನು. ಇಂತಹ ನಿನ
ಸರ್ವಕಾಲದಲ್ಲೂ ನಮಸ್ಕಾರ ಮಾಡುವೆನು-ಎಂದು ತಾತ್ಪರ್ಯ. ॥ ೭ ॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :

"ದುಃಷ್ಟ" ಇತಿ॥ ಕನಿಷ್ಠ–ಗತತ್ವಾತ್॥ ಯಥೇಷ್ಟತನು ಉನ್ನತ ಕರ್ಮ॥ ಇತ್ಯುಕ್ತಮೇವಸಂಜಗ್ರಾಹ । ಯಥೇಚ್ಛಸ್ವರೂಪಸಂಧೀರಯನ್ ಉತ್ಕೃಷ್ಟ ಕರ್ಮಾ. ॥ ೭ ॥

### ಕನ್ನಡಾರ್ಥ :

ಈ ಪದ್ಯದಲ್ಲಿರುವ ಕನಿಷ್ಠಶಬ್ದಕ್ಕೆ ಕನಿಷ್ಠನಲ್ಲಿದ್ದು, ಕನಿಷ್ಠರನ್ನಾಗಿ ಮಾಡುವ ಕನಿಷ್ಠನಾಮಕ ಭಗದ್ರೂಪವೆಂದು ಅರ್ಥ. ಯಥೇಷ್ಟತನು ಮುನ್ನತ ಕರ್ಮಾ ಎಂಬುದರ ಅರ್ಥವನ್ನೇ—"ಯಥೇಷ್ಟತನು"—ಈ ಶಬ್ದದಿಂದ ಸಂಗ್ರಹಿಸಿರುತ್ತಾರೆ. ಯಥೇಚ್ಛವಾದ ಸ್ವರೂಪವನ್ನು ಸ್ವರೂಪ ಧರಿಸುವವ, ಹಾಗೂ ಉತ್ಕೃಷ್ಟವಾದ ಕರ್ಮಗಳನ್ನು ವ್ಯಾಪಾರಗಳನ್ನು ಮಾಡುವವನು. ಹೀಗೆ ಅರ್ಥ. ॥ ೭ ॥

## ೫. ಶ್ರೀಗುರು ಹೃದಯ ಪ್ರಕಾಶಿಕೆ :

ದುಷ್ಟಜನ ಸಂಹರ್ತೃವೇ, ಸರ್ವೋತ್ಕೃಷ್ಟ ಮಹಿಮನೇ. ಸಮೀರನೆಂಬ ಪ್ರಾಣಸಂಸ್ತುತನೇ. ಸಕಲೇಷ್ಟಪ್ರದಾಯಕನೇ. ಸ್ವರತನೆಂದರೆ—ಸ್ವಾನಂದ ಪೂರ್ಣನೇ. ಆನಂದಮಯಕೋಶದಲ್ಲಿದ್ದು, ಪ್ರಚುರಾನಂದರೂಪನೇ, ನಮ್ಮ ಕುಲಸ್ವಾಮಿಯೇ, ಹರ್ಷವೆಂಬ ಸ್ವಾನಂದದಿಂದ ಪುಷ್ಟನೆಂಬ ಪೂರ್ಣ ಶರೀರನೇ. ನಿಕೃಷ್ಟರಾದ ಜೀವರಲ್ಲಿದ್ದು, ನಿಕೃಷ್ಟತೆ ಕೊಡುವುದರಿಂದ ಕನಿಷ್ಠ ಶಬ್ದವಾಚ್ಯನೆ. ಜಗತ್ತಿಗೆ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನಾಜ್ಞಾನಬಂಧ ಮೋಕ್ಷವೆಂಬ ಎಂಟು ಅವಸ್ಥೆಗಳನ್ನು ಉಂಟುಮಾಡುವವನೇ, ಗಜೇಂದ್ರ ವರದನೇ, ಯಥೇಷ್ಟತನುವೆಂಬ ಸ್ವೇಚ್ಛಾರೂಪನೆ. ಉನ್ನತ ಸುಕರ್ಮವೆಂಬ ಉತ್ಕೃಷ್ಟವ್ಯಾಪಾರವುಳ್ಳವನೇ, ಸದಾ ನಿನ್ನನ್ನು ಕುರಿತು ನಮಿಸುವೆನು. ॥ ೭ ॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ದೈತ್ಯರು ತಮೋಯೋಗ್ಯಸ್ವಭಾವವುಳ್ಳವರು. ಭಗವದ್ದ್ವೇಷ ಮತ್ತು ಭಗವದ್ಭಕ್ತರ ದ್ವೇಷವೇ ಅವರ ಸ್ವರೂಪಗತಗುಣವು. ಸಜ್ಜನರಿಗೆ ಪೀಡಿತರಾದ ದೈತ್ಯರ ಪಾಲಿಗೆ ಶ್ರೀಹರಿಯು ಮೃತ್ಯುಸ್ವರೂಪನು ದಾನವದಲ್ಲಣನಾದ ಶ್ರೀಪರಮಾತ್ಮನು ದುಷ್ಟಸಂಹಾರಿಯು.

೨. ಅವನ ಪ್ರತಿಯೊಂದು ಮಹಿಮೆಯೂ ಅಪಾರ ಮತ್ತು ಅನಂತ. ಸರ್ವಶ್ರೇಷ್ಠವಾದ ಅಪಾರಮಹಿಮಾಸಂಪನ್ನನಾದ ಅನಂತನು ಸರ್ವೋತ್ಕೃಷ್ಟಮಹಿಮನು.

೩. ಸರ್ವೋತ್ಕೃಷ್ಟಮಹಿಮನಾದ ಸರ್ವೇಶ್ವರನು ಶ್ರೀಮುಖ್ಯಪ್ರಾಣರಿಂದ ಸದಾ ವಂದ್ಯನು ಮತ್ತು ಸಂಸ್ತುತ್ಯಮಾನನು. ಅತಿರೋಹಿತವಿಮಲವಿಜ್ಞಾನಿಗಳಾದ ಸಮೀರನಾಮಕರಾದ ಶ್ರೀವಾಯುದೇವರು ಶ್ರೀಹರಿಯ ಪ್ರಥಮಾಂಗಭೂತರು. ಅವನ ಮುಖ್ಯಪ್ರತೀಕರು. ಸಮೀರ ದೇವರು ಸದಾ ಸರ್ವಕಾಲದಲ್ಲಿ ಶ್ರೀಹರಿಗೆ ಅಭಿಮುಖರಾಗಿ ಅಂಜಲೀಬದ್ಧರಾಗಿ ನಿಂತು, ಅವನ ಅಪಾರ ಗುಣಗಣಾವಳಿಗಳನ್ನು ಸ್ತುತಿಸುತ್ತಿರುವರು.

೪. ಸಮೀರನುತನಾದ ಆ ಸರ್ವೋತ್ತಮನು ತನ್ನ ಭಕ್ತರ ಸಕಲ ಮನೋಭೀಷ್ಟಗಳನ್ನು ಪೂರೈಸುವ ಕಾಮಧೇನು. ಅವರವರ ಯೋಗ್ಯತಾನುಸಾರ ಫಲಪ್ರದನು. ಇದರಿಂದ, ಸಕಲೇಷ್ಟದಾಯಕನು.

೫. ಸಕಲೇಷ್ಟದಾಯಕನಾದ ಸಮೀರವಂದಿತನು ಸ್ವರಮಣನು. ತನ್ನ ಭಗವದ್ರೂಪಗಳಲ್ಲಿಯೇ ನಿರಂತರ ರಮಣಮಾಡುವ ರಮಾರಮಣನು. ಇತರ್ಯಾರಿಂದಲೂ ಅವನಿಗೆ ಆನಂದ ಬೇಕಿಲ್ಲ. ಸದಾ ಸ್ವಾನಂದಪೂರ್ಣನು. ಇದರಿಂದ ಸ್ವರಮಣನು.

೬. ಸ್ಮರವನಾದ ಆಪ್ತಕಾಮನು ಆನಂದಪರಿಪೂರ್ಣನು. ನಿತ್ಯ ಸುಖಮಯನು. ಸ್ವಯಂ ಆನಂದ ಸ್ವರೂಪಿಯಾದ ಅವನಿಗೆ ಇತರಾರಿಂದಲೂ ಆನಂದ ಬೇಕಿಲ್ಲ. ಸರ್ವೇಸಚ್ಚೇತನರ ಆನಂದ ಭೋಗಕ್ಕೆ ಅವನೆ ಕಾರಣನು. ಇದರಿಂದ **ಸುಖಮಯನು.**

೭. **ಸುಖಮಯನಾದ** ಸರ್ವೋತ್ಕೃಷ್ಟಮಹಿಮನು ನನ್ನ ಕುಲಸ್ವಾಮಿ-ಎನ್ನುತ್ತಾರೆ. ದಾಸರಾಯರ ಕುಲ ಹಾಗೂ ಇಷ್ಟದೇವತಾ-ಗರುಡವಾಹನ ಶ್ರೀಲಕ್ಷ್ಮೀನರಸಿಂಹನು.

೮. ಅಸ್ಮದ್ಕುಲಸ್ವಾಮಿಯು ಸದಾ ಸಂತುಷ್ಟನು. ನಿತ್ಯತೃಪ್ತನು. ಆಪ್ತಕಾಮನು. ಇದರಿಂದ, **ಹೃಷ್ಟನು.**

೯. ಹೃಷ್ಟನಾದ ಶ್ರೀಹರಿಯು ಸರ್ವಜೀವರ ಸ್ಥೂಲದೇಹಗತನಾಗಿದ್ದು, ಜೀವರು ಭುಂಜಿಸಿದ ಆಹಾರವನ್ನು ರಸವಿಭಾಗಗೈದು, ಸ್ಥೂಲ ದೇಹಕ್ಕೆ ಉಪಚಯರೂಪದಲ್ಲಿ ಹಂಚುವನು. ಇದರಿಂದ ಜೀವರ ಸ್ಥೂಲ ದೇಹದ ಉಪಚಯ ಉಂಟಾಗಿ, ಪುಷ್ಟಿಯಾಗುವುದು. ಸ್ವಯಂ ಪರಿಪುಷ್ಟನು. ಇದರಿಂದ-**ಪುಷ್ಟನಾಮಕನು.**

೧೦. ಕನಿಷ್ಠರಾದ ಜೀವರಲ್ಲಿ ಅಂತರ್ಯಾಮಿಯಾಗಿದ್ದು, ಕನಿಷ್ಠವಾಚ್ಯನೆನಿಸುವನು. ಕನಿಷ್ಠ-ನೆಂದರೆ, ಅತ್ಯಂತಕೊನೆ-ಅಂದರೆ, ಮಹಾಪ್ರಳಯಕಾಲ. ಆಗ ತಾನು ಲಕ್ಷ್ಮೀಸಹಿತವಾಗಿ, ಏಕಮೇವಾದ್ವಿತೀಯನಾಗಿ, ವಟಪತ್ರಶಾಯಿಯಾಗಿ ಪ್ರಳಯೋದಕದಲ್ಲಿ ವಿರಾಜಮಾನನಾಗಿರುವುದರಿಂದಲೂ **ಕನಿಷ್ಠನಾಮಕನು.** ನಿಕೃಷ್ಟರಾದ ಜೀವರಲ್ಲಿದ್ದು, ಅವರಿಗೆ ನಿಕೃಷ್ಟತೆಯನ್ನು ಕೊಡುವವನಾದ್ದರಿಂದ, ಕನಿಷ್ಠನಾಮಕನು.

**ಪ್ರಮಾಣ :**

"ಅಣು ಬೃಹತ್ ಕೃಶಸ್ಥೂಲಃ" – **ಶ್ರೀವಿಷ್ಣುಸಹಸ್ರನಾಮ.** ಅಣುಗಳಲ್ಲಿ ಅತ್ಯಂತ ಅಣುರೂಪದಿಂದಲೂ, ಬೃಹತ್ತಿನಲ್ಲಿ ಬೃಹದಾಕಾರನಾಗಿ ಆವರಣರೂಪದಲ್ಲಿಯೂ, ಕೃಶವಾದ ದೇಹದಲ್ಲಿ ಕೃಶನಾಮಕನಾಗಿಯೂ, ಸ್ಥೂಲಪದಾರ್ಥಗಳಲ್ಲಿ ಸ್ಥೂಲನೆಂದೆನಿಸಿ ಇರುವನು.

೧೧. ಇಂತಹ ಹೃಷ್ಟಪುಷ್ಟ ಕನಿಷ್ಠನಾಮಕನು ತನ್ನಿಂದ ಸೃಷ್ಟವಾದ ಸಕಲ ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ-ನಿಯಮನ-ಜ್ಞಾನ-ಅಜ್ಞಾನ-ಬಂಧ-ಮೋಕ್ಷಗಳೆಂಬ ಎಂಟು ವಿಧವಾದ ಕರ್ತೃತ್ವಶಕ್ತಿಉಳ್ಳವನು. ಜಗತ್ತಿನ ಉತ್ಪತ್ತಿ. (ಸೃಷ್ಟಿ). ಅದರ ಸಂರಕ್ಷಣೆ (ಸ್ಥಿತಿ). ನಾಶ (ಲಯ). ಸರ್ವರಿಗೂ ನಿಯಮನವಮಾಡುವುದು. (ನಿಯಮನ). ಸಜ್ಜೀತನರಿಗೆ ಭಗವತ್ಸಂಬಂಧವಾದ ಜ್ಞಾನಪ್ರದತ್ವ (ಜ್ಞಾನ). ಅಸುರರಿಗೆ ನಿತ್ಯಸಂಸಾರಿಗಳಿಗೆ ಅಜ್ಞಾನರೂಪವಾದ ಮಾಯಿ (ಅಜ್ಞಾನ). ಜೀವರಿಗೆ ಲಿಂಗೋಪಾದಾನದಿಂದ ಕರ್ಮಬಂಧನ (ಬಂಧನ) ಮತ್ತು ಕೊನೆಯಲ್ಲಿ ಲಿಂಗಭಂಗಾನಂತರ ನಿತ್ಯಾನಂದರೂಪವಾದ ಮೋಕ್ಷಪ್ರದತ್ವ (ಮೋಕ್ಷ)- ಈ **ಅಷ್ಟಕರ್ತೃತ್ವವುಳ್ಳ ಸ್ವಾಮಿಯು.**

೧೨. ಸ್ವಪ್ರಾಪ್ಯದಷ್ಟಕರ್ತೃವಾದ ಗರುಡವಾಹನನು ಗಜೇಂದ್ರವರದನು. ಗಜರಾಜನು ಮೊಸಳೆಯ ಬಾಯಿಗೆ ಸಿಕ್ಕಿ. ಭಕ್ತಿಭಾವದಿಂದ "ಆದಿಮೂಲ"—ಎಂದು ಕರೆದಾಗ, ಅವನ ಆಪತ್ತಿಗೆ ಒದಗಿ. ನಕ್ರನನ್ನು ಚಕ್ರದಿಂದ ಸೀಳಿ, ಕರೀಂದ್ರನನ್ನು ಸಂರಕ್ಷಿಸಿದ ಪ್ರಸಂಗ, ಇದರಿಂದ. **ಕರೀಂದ್ರವರದನು.**

೧೩. ಕರೀಂದ್ರವರದನು ತನ್ನ ಭಕ್ತರಿಗೆ ಅವರವರ ಯೋಗ್ಯತೆಗೆ ಅನುವಾಗಿ ಇಷ್ಟಪ್ರದನಾಗಿದ್ದಾನೆ. ಇದರಿಂದ- **ಯಥೇಷ್ಟಪ್ರದನು.**

(ಯಥಾ + ಇಷ್ಟ + ದ = ಯಥಾ-ಎಂದರೆ, ಯೋಗ್ಯತೆಗನುಗುಣವಾಗಿ, ಅದನ್ನು ಮೀರದೆ, ಇಷ್ಟ-ಅಭಿಲಾಷೆಗಳು ದ-ಪ್ರದನು).

೧೪. ಯಥೇಷ್ಟಪ್ರದನು ಸಮೀಚೀನನಾದ, ತನಗೆ ಪ್ರೀತ್ಯರ್ಥವಾದ ಕರ್ಮಗಳನ್ನು ಮಾಡಿದ ಭಕ್ತರಿಗೆ, ಅತ್ಯುನ್ನತವಾದ ವೈಕುಂಠಾದಿ ಪರಮ ಪುರುಷಾರ್ಥವನ್ನು ಕೊಡುವನು. ಇದರಿಂದ **ಉನ್ನತ ಸುಕರ್ಮ**-ಎಂದಿದ್ದಾರೆ. ಸುಕರ್ಮ-ವಿಷ್ಣುಪ್ರೇರಣೆಯ ಕೇವಲ ವಿಷ್ಣುಪ್ರೀತ್ಯರ್ಥವಾಗಿ ಮಾಡುವ ಕರ್ಮಗಳು. ಉನ್ನತ-ಶ್ರೇಷ್ಠ ಸ್ಥಾನ-ಮೋಕ್ಷ ಪದವಿ. ಅಂತಹ ಶ್ರೀಪರಮಾತ್ಮನಿಗೆ ಸದಾ ಸರ್ವಕಾಲಗಳಲ್ಲೂ ಸಾಷ್ಟಾಂಗಪೂರ್ವಕ ನಮಸ್ಕಾರ ಮಾಡುತ್ತೇನೆ. ॥ ೭ ॥

## ಪದ್ಯ-೮

**ಮೂಲ :-**

**ಪಾಕಶಾಸನ ಪೂಜ್ಯಚರಣ ಪಿ ।**
**ನಾಕಿಸನ್ನುತಮಹಿಮ ಸೀತಾ ।**
**ಶೋಕನಾಶನ ಸುಲಭ ಸುಮುಖ ಸುವರ್ಣವರ್ಣನಿಭ ॥**
**ಮಾಕಳತ್ರ ಮನೀಷಿ ಮಧುರಿಪು ।**
**ಏಕಮೇವಾದ್ವಿತೀಯರೂಪ ಪ್ರ ।**
**ತೀಕ ದೇವಗಣಾಂಶರಾತ್ಮಕ ಪಾಲಿಸುವುದೆಮ್ಮ ॥ ೮ ॥**

**ಅವತರಣಿಕೆ :**

ಅಪಾರಮಹಿಮಾಸಂಪನ್ನನೂ, ಏಕಮೇವಾದ್ವಿತೀಯನೂ ಆದ ಶ್ರೀಪರಮಾತ್ಮನನ್ನು ಸಂರಕ್ಷಣಮಾಡಲು ಪ್ರಾರ್ಥಿಸುತ್ತಾರೆ. ॥ ೮ ॥

**ಪ್ರತಿಪದಾರ್ಥ :**

**ಪಾಕಶಾಸನ ಪೂಜ್ಯಚರಣ** = ಶ್ರೀಇಂದ್ರದೇವರಿಂದ ಪೂಜಿತವಾದ ಪವಿತ್ರಪಾದಕಮಲವುಳ್ಳವನು. **ಪಿನಾಕಿಸನ್ನುತ** = ಶ್ರೀಮದುದ್ರದೇವರಿಂದ ಚೆನ್ನಾಗಿ ಸಂಸ್ತುತ್ಯಮಾನನಾದವನು. **ಸೀತಾಶೋಕನಾಶನ** = ಸೀತಾದೇವಿಯರ ದುಃಖವಿದೂರಕರಾದ ಸೀತಾದೇವಿಯ ವ್ಯತಿರಿಕ್ತರಾದ ಸೀತಾ-ಸೀತಾಪ್ರತೀಕರೂಪರಲ್ಲಿದ್ದ ವೇದವತಿಯ ವ್ಯಾಜದಿಂದ, ರಾವಣಕುಲವನ್ನು ನಾಶಪಡಿಸಿದ ಶ್ರೀರಾಮಚಂದ್ರನು. **ಸುಲಭ** = ತನ್ನ ಭಕ್ತರಪಾಲಿಗೆ ಅತ್ಯಂತ ಸುಲಭನು. **ಸುಮುಖ** = ಭಕ್ತರಿಗೆ ಅನುಗ್ರಹಪ್ರದನಾಗಿರುವ. **ಸುವರ್ಣವರ್ಣನಿಭ** = ಬಂಗಾರವರ್ಣದೋಪಾದಿಯಲ್ಲಿ ದೇಹಕಾಂತಿಯುಳ್ಳವನು. (ಸಂಕರ್ಷಣರೂಪ) **ಮಾಕಳತ್ರ** = ಲಕ್ಷ್ಮೀದೇವಿಯರನ್ನೇ ಪತ್ನಿಯನ್ನಾಗಿ ಉಳ್ಳವ. (ಶ್ರೀಲಕ್ಷ್ಮೀರಮಣನು) **ಮನೀಷಿ** = ಪ್ರಾಜ್ಞಶಾಲಿಯಾದವನು. **ಮಧುರಿಪು** = ಮಧುನಾಮಕ ದೈತ್ಯನನ್ನು ಸಂಹರಿಸಿದವನು. **ಏಕಮೇವ ಅದ್ವಿತೀಯ ರೂಪ** = ಒಬ್ಬನೇ ಒಬ್ಬನು. ಇನ್ನೊಬ್ಬರಿಲ್ಲದ ಸಮಾಭ್ಯಧಿಕಶೂನ್ಯನು. (ಅವನಿಗೆ ಸಮರಾರೂ ಇಲ್ಲ. ಅಧಿಕರಂತೂ ಇಲ್ಲವೇ ಇಲ್ಲ). **ಪ್ರತೀಕದೇವಗಣಾಂಶರಾತ್ಮಕ** = ದೇವತೆಗಳು ಶ್ರೀಹರಿಗೆ ಪ್ರತಿಮಾಸದೃಶರು. ಆವರಲ್ಲಿ ಅಂತರ್ಗತನಾಗಿರತಕ್ಕವನು. **ಎಮ್ಮನು ಪಾಲಿಸುವುದು** = ಇಂತಹ ಗುಣಸಂಪನ್ನನಾದ ಶ್ರೀಹರೇ। ನಮ್ಮನ್ನೆಲ್ಲರನ್ನೂ ಸಂರಕ್ಷಿಸೆಂದು ಪ್ರಾರ್ಥಿಸುತ್ತಿದ್ದಾರೆ. ॥ ೮ ॥

## ವ್ಯಾಖ್ಯಾನಗಳು

### ೧ ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ್ನ ಸಂರಕ್ಷಣೆ ಮಾಡೆಂದು ಪ್ರಾರ್ಥಿಸುತ್ತಾರೆ.

ತನ್ನ ಅಸದೃಶ ಮಹಿಮಾ ತೋರಿಸಿ, ಇಂದ್ರದೇವರಿಂದ ಪೂಜಿತವಾದ ಪಾದಗಳುಳ್ಳವ. ತಾನು ಸ್ತ್ರೀರೂಪಧರಿಸಿ, ರುದ್ರದೇವರನ್ನು ಮೋಹಪಡಿಸಿ

ಅವರಿಂದ ಸ್ತೋತ್ರ ಮಾಡಿಸಿಕೊಂಡವ. ದುಃಖಶೂನ್ಯರಾದ ನಿಜಸೀತಾದೇವಿ ವ್ಯತಿರಿಕ್ತರಾದ ಮಾಯಾಸೀತಾದೇವೇರ ವ್ಯಾಜದಿಂದ ರಾವಣನ ಕುಲವನ್ನ ನಾಶನ ಮಾಡಿದವ. ಅಹಂಮಮತಾದಿಗಳ ತ್ಯಜಿಸಿ ಭಕ್ತಿ ಮಾಡತಕ್ಕವರಿಗೆ 'ತಸ್ಯಾಹಂ ಸುಲಭಃ ಪಾರ್ಥ' ಎಂತ ಗೀತಾವಾಕ್ಯ ಇರುವದ್ದರಿಂದ ಸುಲಭನಾಗಿ ಸಮೀಚೀನವಾದ ಅಪರೋಕ್ಷ ಕೊಡತಕ್ಕವ. ಬಂಗಾರವರ್ಣದೋಪಾದಿಯಲ್ಲಿ ದೇಹಕಾಂತಿಯುಕ್ತನಾದವ. ಸಂಕರ್ಷಣರೂಪ ಎಂತ ತಾತ್ಪರ್ಯ. ಲಕ್ಷ್ಮೀದೇವೇರೆ, ಪತ್ನಿಯಾಗುಳ್ಳವ. ಪ್ರಾಜ್ಞಶಾಲಿಯಾದವ. ಮಧುನಾಮಕ ದೈತ್ಯಗೆ ಶತ್ರುವಾದವ. ಒಬ್ಬನೇ ಇನ್ನೊಬ್ಬ ಇಲ್ಲದೆ ಸಮಾನರಹಿತನಾದವ. ಪ್ರತಿ ಮಾಸದ್ಯಶರಾದ ದೇವತೆಗಳ ಸಮೂಹದ ಅಂರ್ಗತದಲ್ಲಿ ತದಾಕಾರನಾಗಿ ಪ್ರಚುರನಾಗಿ ಇರತಕ್ಕವ. ಇಂಥಾ ಶ್ರೀಪರಮಾತ್ಮನೇ ನಮ್ಮಗಳನ್ನ ಸಂರಕ್ಷಣ ಮಾಡೆಂದು ಪ್ರಾರ್ಥನ ಮಾಡೋವರಾಗಿದ್ದಾರೇದು ತಾತ್ಪರ್ಯ. ॥8॥

## 2. ಭಾವಪ್ರಕಾಶಿಕೆ :–

ದೇವೇಂದ್ರನಿಂದ ಪೂಜ್ಯವಾದ ಪಾದಕಮಲವುಳ್ಳವನು. ಶ್ರೀರುದ್ರ ದೇವರಿಂದ ಸ್ತುತ್ಯವಾದ ಮಹಿಮೆಯುಳ್ಳವನು. ಸೀತಾದೇವಿಯ ಶೋಕವನ್ನು ರಾಮಾವತಾರದಲ್ಲಿ ನಾಶಗೊಳಿಸಿದವನು. ಭಕ್ತಜನರಿಗೆ ಸುಲಭಸಾಧ್ಯನು. ಅವರಿಗೆ ಯಾವಾಗಲೂ ಸುಮುಖವಾಗಿರುವವನು. ಬಂಗಾರಕ್ಕೆ ಸಮವಾದ ಕಾಂತಿಯಿಂದ ಶೋಭಿಸುವವನು. ರಮಾದೇವಿಯರೆಂಬ ಪತ್ನಿಯರಿಗೆ ಬುದ್ಧಿ ಸ್ಥಾನೀಯನು (ಮನೀಷಿ). ಆಕೆಯ ಚಿತ್ತವು ಯಾವಾಗಲೂ ಪರಮಾತ್ಮನಲ್ಲೇ ಇರುವುದೆಂಬ, ಭಾವ ಮಧು ಎಂಬ ದೈತ್ಯನನ್ನು ಸಂಹರಿಸಿದವನು. ಅಸದೃಶ ರೂಪವುಳ್ಳ ಪ್ರತಿಮೆ ಎನಿಸುವನು. ದೇವಗಣಾಂತರಾತ್ಮಕನು. ಇಂತಹ ನೀನು ನಮ್ಮನ್ನು ಪಾಲಿಸುವುದು. ॥8॥

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :–

"ಪಾಕ" ಇತಿ॥ ಪಿನಾಕೀ–ರುದ್ರಃ॥ ಪ್ರತೀಕಾಃ ಗೃಹಸ್ಥಾನೀಯಾಃ। ಅಂತ ರಾತ್ಮಕ–ಅಂತರ್ಯಾಮೀ. ॥8॥

**ಕಣ್ಣಡಾಥ**

'ಪಿನಾಕಿಸನ್ನುತ'–ಪಿನಾಕವೆಂಬ ಧನುವುಳ್ಳ–ರುದ್ರನಿಂದ ನಮಸ್ಕರಿಸ
ಟ್ಟವನು. "ಅಂತರಾತ್ಮಕ"–ಅಂತರ್ಯಾಮೀ. ಪ್ರತೀಕವೆಂಬ ಪದವನ್ನ
ದೇವಗಣಗಳಲ್ಲಿಗೆ ಅನ್ವಯಿಸತಕ್ಕದ್ದು. ಮನೆಯಂತೆ ಅಧಿಷ್ಠಾನ–ನಿವಾಸಸ್ಥಾ
ರಾದ ಎಂದು ಅರ್ಥವಾಗುತ್ತದೆ. ||8||

## 5. ಶ್ರೀಗುರುಹೃದಯಪ್ರಕಾಶಿಕೆ:

ಪಾಕಶಾಸನನೆಂಬ ಇಂದ್ರನಿಂದ ಪೂಜಿತ ಚರಣನೇ, ಪಿನಾಕಿ ಎಂಬ ರು
ಸಂಸ್ತುತ ಮಹಿಮನೇ, ಸೀತಾಪ್ರತಿಕೃತಿಯ ಶೋಕಹರಿಸಿದವನೇ, ಭ
ಸುಲಭನೇ, ಸುಖಸ್ವರೂಪನೇ, ಸುವರ್ಣದಂತೆ ಅಪ್ರಾಕೃತವರ್ಣನೇ, ಮಾ
ತ್ರನೆಂಬ ರಮಾಪತಿಯೇ, ಮನೀಷಿ ಎಂಬ ಜ್ಞಾನರೂಪನೇ, ಮಧುನಾಮ
ದೈತ್ಯಶತ್ರುವೇ, ಏಕಮೇವಾದ್ವಿತೀಯನೇ ಸಮಾನವರ್ಜಿತ ಏಕರೂಪನೇ
ಪ್ರತಿಮೆಯಂತೆ ಅಧಿಷ್ಠಾನವಾಗಿರುವ ದೇವತಾಗಣದಲ್ಲಿ ಅಂತರ್ಯಾಮಿಯೆ
ನಮ್ಮನ್ನು ಪೋಷಿಸು. ||8||

# ಸರ್ವವ್ಯಾಖ್ಯಾನಸಾರಸಂಗ್ರಹ

1. **ಪಾಕ** ಎಂಬ ದಾನವನನ್ನು ಶ್ರೀಇಂದ್ರದೇವರಂ ವಜ್ರಾಯುಧ
ದಿಂದ ಸಂಹರಿಸಿದರು. ಆದರಿಂದ ಇಂದ್ರದೇವರಿಗೆ–**ಪಾಕಶಾಸನ** ಎಂ
ಹೆಸರು ಬಂದಿತು.

ಅಂತಹ ಪಾಕಶಾಸನನಾಮಕರಾದ ಶ್ರೀಇಂದ್ರದೇವರಿಂದ ಪೂಜಿಸಲ್ಪಟ್ಟ
ಪಾದಪದ್ಮಗಳುಳ್ಳವನು ಶ್ರೀಪರಮಾತ್ಮ. ಇದರಿಂದ **ಪಾಕಶಾಸನಪೂಜ್ಯ
ಚರಣನು.**

2. ಪಾಕಶಾಸನ **ಪೂಜ್ಯ** ಚಾರುಚರಣನಾದ ಪರಾತ್ಪರನು.

ಇಂದ್ರದೇವರಿಗೆ ಸ್ತೋತ್ರಮರಾದ ಶ್ರೀಮಹರುದ್ರದೇವರಿಂದ ಸಂಸ್ತುತ್ಯ ಮಾನನು. ಪಿನಾಕವೆಂಬ ಧನುಸ್ಸನ್ನು ಧರಿಸಿರುವ ಶ್ರೀಮಹರುದ್ರದೇವರಿಗೆ **ಪಿನಾಕಿ** ಎಂದು ನಾಮ. ಪಿನಾಕಿಯು ಸದಾ ಶ್ರೀರಾಮನಾಮವನ್ನು ಜಪಿ ಸುತ್ತಾ ತನ್ನ ಪತ್ನಿಯರಾದ ಶ್ರೀಪಾರ್ವತಾದೇವಿಗೆ ಉಪದೇಶಿಸುತ್ತಿರುವನು. ರುದ್ರದೇವರ ಉಪಾಸನಾಮೂರ್ತಿ ಸಂಕರ್ಷಣಾಭಿನ್ನ ಶ್ರೀಲಕ್ಷ್ಮೀನಾರಸಿಂಹನು. ರುದ್ರದೇವರಿಂದ ಅನವರತ ಗೇಗೇಯಮಾನನಾಗಿದ್ದಾನೆ ಶ್ರೀಹರಿ.

3. ಅಶೋಕವನದಲ್ಲಿದ್ದ ಸೀತಾದೇವಿಯ (ಸೀತಾಕೃತಿ) ದುಃಖವನ್ನು ಪರಿಹರಿಸಿದ ಶ್ರೀರಾಮಚಂದ್ರಮೂರ್ತಿ, ರಾವಣನ ಅಶೋಕವನದಲ್ಲಿದ್ದವಳು ನಿಜವಾದ ಸೀತೆಯಲ್ಲ. ಸೀತಾಕೃತಿಮಾತ್ರ. ಸೀತೆಯು ಮಹಾಲಕ್ಷ್ಮಿಯ ಅವತಾರಳು. ಅವಳಿಗೆ ದುಃಖವೆಂಬುದೇ ಇಲ್ಲ. ನಿತ್ಯಮುಕ್ತಳು ಮತ್ತು ನಿರ್ವಿಕಾರಳು. ಇದೊಂದು ವಿಡಂಬನೆಯ ಪ್ರಸಂಗ. ರಾವಣನ ಸಂಪೂರ್ಣ ನಾಶಕ್ಕಾಗಿ ಸೀತಾಕೃತಿಯೂ ಕೂಡ ದುಃಖಿಪಟ್ಟವಳಂತೆ ನಟಿಸಿದಳು. ಇದರಿಂದ **ಸೀತಾಶೋಕನಾಶನನು** ಅಂದರೆ. ಅಶೋಕ, ಶೋಕರಹಿತರಾದ ಸೀತಾ- ದೇವಿಯ ನೆವದಿಂದ, ನಾಶನ-ರಾವಣನನ್ನು ನಾಶಗೈದ ಮಂಗಳಮೂರ್ತಿ ದಶರಥನಂದನ.

4. ತನ್ನ ಭಕ್ತರಿಗೆ ಸುಲಭದಿಂದ ಪ್ರಾಪ್ಯನು. ಭಕ್ತರಿಗೆಲಭ್ಯನಾದ ಭಗವಂತನು **ಸುಲಭನು.**

5. ಸುಲಭ ಸುಗುಣಗುಣನಿಧಿಯೂ ಭಕ್ತರಿಗೆ ಅನುಗ್ರಹಪ್ರದನು, ಭಕ್ತರ ಪಾಲಿಗೆ **ಸುಮುಖನು.**

6. ಸುಲಭನೂ, ಸುಮುಖನೂ ಆದ ಸರ್ವೋತ್ಕೃಷ್ಟನು ಪುಟಕ್ಕೆ ಹಾಕಿದ ಬಂಗಾರದ ವರ್ಣದಂತೆ ಕಾಂತಿಯುಕ್ತ ದೇಹವುಳ್ಳವನು. (ಸಂಕರ್ಷಣ ಮೂರ್ತಿಯ ಶರೀರವರ್ಣ ಬಂಗಾರದ ಪ್ರಕಾಶ) ಇದರಿಂದ **ಸುವರ್ಣವರ್ಣ ನಿಭನು.** ಅಂದರೆ, ಸುವರ್ಣ-ಚಿನ್ನ, ವರ್ಣ-ಬಣ್ಣದಂತೆ, ನಿಭನು-ಕಾಂತಿ ಯುಕ್ತನು.

7. ಶ್ರೀಲಕ್ಷ್ಮೀದೇವಿಯನ್ನು ಪತ್ನಿಯಾಗಿ ಉಳ್ಳವನು. ಅಂದರೆ ಶ್ರೀಲಕ್ಷ್ಮೀರಮಣನು, ಮಾ-ರಮಾದೇವಿ, ಕಳತ್ರ-ಪತ್ನಿ.

8. **ಮನೀಷಿ**, ಎಂದರೆ ಸರ್ವಜ್ಞನು. ಅಸದೃಶ ಪ್ರಜ್ಞಾವಂತನು, ಇನ್ನೊಂದರ್ಥದಲ್ಲಿ ಶ್ರೀರಮಾದೇವಿಯರ ಬುದ್ಧಿಸ್ಥಾನೀಯನು.

9. ಮಧು ಎಂಬ ದೈತ್ಯನನ್ನು ಸಂಹರಿಸಿದ ಕ್ಷೀರಸಮುದ್ರಶಾಯಿ ಶ್ರೀಮನ್ನಾರಾಯಣನು ಮಧುರಿಪುವು ಅಂದರೆ, ಮಧು-ಮಧುನಾಮಕ ದೈತ್ಯ ರಿಪು-ಶತ್ರು (ಸಂಹಾರಕ).

10. ಮಹಾಪ್ರಳಯಕಾಲದಲ್ಲಿ ಯಾರೂ ಇರಲಿಲ್ಲ. ಶ್ರೀಮನ್ನಾರಾಯಣನು ಶಿಶುರೂಪದಲ್ಲಿ ವಟಪತ್ರಶಾಯಿಯಾಗಿ ಪ್ರಳಯೋದಕದಲ್ಲಿ ಶಯನಿಸುವನು. ಶ್ರೀರಮಾದೇವಿಯರು ಶ್ರೀರೂಪದಿಂದ ಪ್ರಳಯೋದಕವಾಗಿಯೂ, ಭೂರೂಪದಿಂದ ವಟಪತ್ರವಾಗಿಯೂ, ದುರ್ಗಾರೂಪದಿಂದ ಸುತ್ತಲೂ ಆವರಿಸಿರುವ ಅಂಧಕಾರರೂಪದಲ್ಲಿದ್ದಾಳೆ. "ನ ಚ ಬ್ರಹ್ಮ ನಚಶಂಕರಃ" ಎಂಬ ಶ್ರುತಿವಚನಾನುಸಾರ ಏಕಮೇವ ಅದ್ವಿತೀಯನು. ಒಬ್ಬನೇ, ಎರಡನೆಯವರಾರೂ ಇಲ್ಲ. ಸಮಾಭ್ಯಧಿಕ ನೂಶ್ಯನು- (ಏಕಮೇವ-ಒಬ್ಬನೇ ಮಾತ್ರ ಅದ್ವಿತೀಯ ಅವನಿಗೆ ಎರಡನೆಯವರು ಯಾರೂ ಇಲ್ಲ). ಸಮಸ್ತ ದೇವತೆಗಳೂ ಶ್ರೀಪರಮಾತ್ಮನ ಪ್ರತೀಕರೂಪರು. ಅಂದರೆ ಪ್ರತಿಬಿಂಬ ಭೂತರು. ಪ್ರತಿಬಿಂಬರಾದ ದೇವಗಣದಲ್ಲಿ ಅವರ ಅಂತರ್ಗತನಾಗಿ ಬಿಂಬರೂಪದಿಂದ ಇರುವುದರಿಂದ **ಪ್ರತೀಕ ದೇವಗಣಾಂತರಾತ್ಮಕನು**. ಅಂದರೆ ಪ್ರತೀಕ-ಪ್ರತಿಮಾಸದೃಶರು. ಪ್ರತಿಬಿಂಬ ಭೂತರು. ಅಂತರಾತ್ಮಕ-ಅಂತರ್ಯಾಮಿರೂಪ ಬಿಂಬರೂಪನು.

11. ಇಂತಹ ಅಪಾರ ಮಹಿಮಾಸಂಪನ್ನನಾದ, ಸಕಲ ಕಲ್ಯಾಣ ಗುಣಾರ್ಣವನಾದ ಶ್ರೀಹರಿಯೇ ನಮ್ಮಗಳನ್ನು ಸಂರಕ್ಷಿಸೆಂದು ಪ್ರಾರ್ಥಿಸುತ್ತಾರೆ ದಾಸವರ್ಯರು. ॥8॥

—★—

## ಪದ್ಯ ೯

**ಮೂಲ :**

ಅಪ್ರಮೇಯೋನ್ನತ ಸ್ವರೂಪ ಸ ।
ದಾ ಪ್ರಸನ್ನಮುಖಾಬ್ಜ ಮುಕ್ತಿಸು ।
ಖ ಪ್ರದಾಯಕ ಸುಮನಸಾರಾಧಿತಪದಾಂಭೋಜ ॥
ಸ್ವಪ್ರಕಾಶ ಸ್ವತಂತ್ರ ಸರ್ವಗ ।
ಕ್ಷಿಪ್ರಫಲದಾಯಕ ಕ್ಷಿತೀಶ ಯ ।
ದು ಪ್ರವೀರ ವಿತರ್ಕ್ಯ ವಿಶ್ವ ಸುತೈಜಸ ಪ್ರಾಜ್ಞ ॥ ॥೯॥

**ಅವತರಣಿಕೆ :**

ಅಪ್ರಮೇಯನೂ. ಸರ್ವೋತ್ಕೃಷ್ಟಮಹಿಮನೂ, ಕ್ಷಿಪ್ರ ಫಲದಾಯಕನೂ ಆದ ಶ್ರೀಪರಮಾತ್ಮನ ಸ್ತೋತ್ರವನ್ನು ಇನ್ನೂ ಮಾಡುತ್ತಾರೆ. ॥೨॥

**ಪ್ರತಿಪದಾರ್ಥ :**

**ಅಪ್ರಮೇಯ** = ಸಾಕಲ್ಯೇನ ಯಾರಿಂದಲೂ ತಿಳಿಯಲಸಾಧ್ಯವಾದ ಶ್ರೀಪರಮಾತ್ಮನು (ಮೇಯ–ತಿಳಿಯಲ್ಪಡುವ ವಸ್ತು. ಪ್ರಮೇಯ ಚೆನ್ನಾಗಿ ಅಂದರೆ ಪೂರ್ಣವಾಗಿ ಮೇಯನು. ಅಪ್ರಮೇಯನಿಷಿದ್ಧಾರ್ಥದಲ್ಲಿ ಸಾಕಲ್ಯೇನ ಅಂದರೆ ಪರಿಪೂರ್ಣವಾಗಿ ತಿಳಿಯಲಶಕ್ಯನು), **ಉನ್ನತ ಸ್ವರೂಪ** = ಅತ್ಯಂತ ಉತ್ಕೃಷ್ಟವಾದ ಸ್ವರೂಪವುಳ್ಳ (ಮಹತ್ತಿಗಿಂತಲೂ ಮಹತ್ತಾದವ), **ಸದಾ ಪ್ರಸನ್ನಮುಖಾಬ್ಜ** = ಯಾವಾಗಲೂ ತನ್ನ ಭಕ್ತರ ವಿಷಯದಲ್ಲಿ ಸೌಮ್ಯವಾದ ಮುಖಕಮಲವುಳ್ಳವನು (ಅನುಗ್ರಹಪೂರ್ವಕವಾದ ಮಂದಹಾಸಯುಕ್ತನು), **ಮುಕ್ತಿಸುಖ ಪ್ರದಾಯಕ** = ತನ್ನನ್ನು ಸರ್ವೋತ್ತಮನೆಂದು ಸದಾ ಉಪಾಸಿಸುವ ಭಕ್ತರಿಗೆ ಸ್ವಸ್ವರೂಪಗತ ಆನಂದಾವಿರ್ಭಾವರೂಪ

ವಾದ ಮೋಕ್ಷಸುಖವನ್ನು ಕರುಣಿಸುವವನು, **ಸುಮನಸ** = ದೇವತೆಗಳಿಂದ **ಆರಾಧಿತ** = ಪೂಜಿಸಲ್ಪಡುವ, **ಪದಾಂಭೋಜ** = ಚರಣಾರವಿಂದಗಳುಳ್ಳವನು, **ಸ್ವಪ್ರಕಾಶ** = ತನ್ನಿಂದ ತಾನೇ ಪ್ರಕಾಶನಾದವನು (ಸ್ವಯಂ ಜ್ಯೋತಿಯು), **ಸ್ವತಂತ್ರ** = ಪರಾಧೀನವಲ್ಲದ ಸ್ವಾತಂತ್ರ್ಯವುಳ್ಳವನು (ಸರ್ವತಂತ್ರಸ್ವತಂತ್ರನು). **ಸರ್ವಗ** = ಸರ್ವತ್ರ ವ್ಯಾಪ್ತನಾದವನು, **ಕ್ಷಿಪ್ರಫಲದಾಯಕ**– ಭಕ್ತರ ನಿಷ್ಕಾಮನಭಕ್ತಿಗನುಗುಣವಾಗಿ ಅವರ ಮನೋಭೀಷ್ಟಗಳನ್ನು ಅಷ್ಟಷ್ಟು ಜಾಗ್ರತೆಯಾಗಿ ಕೊಡುವವನು, **ಕ್ಷಿತೀಶ** = ಭೂದೇವಿಯರ ರಮಣನಾದ, **ಯದುಪ್ರವೀರ** = ಯದುವಂಶದಲ್ಲಿ ಪರಾಕ್ರಮಿಯಾದ ಶ್ರೀಕೃಷ್ಣದೇವರು, **ವಿತರ್ಕ್ಯ** = ತರ್ಕದಿಂದ ತಿಳಿದುಕೊಳ್ಳಲು ಅಶಕ್ಯನಾದವನು (ತರ್ಕವಾದ ವಿವಾದಗಳಿಗೂ ಅತೀತನಾದವ). **ವಿಶ್ವ** = ಜಾಗ್ರದಾವಸ್ಥಪ್ರೇರಕನಾದ ವಿಶ್ವರೂಪೀ ಶ್ರೀಪರಮಾತ್ಮ, **ಸುತೈಜ** = ಸಮೀಚೀನವಾದ ಸ್ವಪ್ನಾವಸ್ಥಪ್ರೇರಕ ತೈಜಸನಾಮಕನು, **ಪ್ರಾಜ್ಞ** = ಸುಷುಪ್ತಾವಸ್ಥಪ್ರೇರಕ ಪ್ರಾಜ್ಞರೂಪನು. ॥೪॥

## ವ್ಯಾಖ್ಯಾನಗಳು

### ೦. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಶ್ರೀಪರಮಾತ್ಮನ್ನ ಸ್ತೋತ್ರ ಮಾಡತಾರೆ.

ಶ್ರೀದೇವರು ಎಂಥಾವನೆಂದರೆ, ಸಾಕಲ್ಯೇನ ದಾರಿಂದಲೂ ತಿಳಿಸಿಕೋತಕ್ಕನಲ್ಲದವ. ದೊಡ್ಡದಾದ ಆಕಾರವುಳ್ಳವ. ನಿರಂತರದಲ್ಲೂ ಭಕ್ತರ ವಿಷಯದಲ್ಲಿ ಸೌಮ್ಯವಾದ ಮುಖಕಮಲವುಳ್ಳವ. ತನ್ನ ಭಕ್ತರು ಸರ್ವೋತ್ತಮನೆಂದು ಧ್ಯಾನೋಪಾಸನಾದಿಗಳ ಮಾಡತಕ್ಕವರಿಗೆ ಸುಖರೂಪವಾದ ಮೋಕ್ಷವನ್ನು ಕೊಡತಕ್ಕವ. ದೇವತೆಗಳಿಂದ ಚಂದಾಗಿ ಪೂಜಾದಿಗಳ ಮಾಡಿಸಿಕೊಳ್ಳಲ್ಪಟ್ಟ ಪಾದಕಮಲಗಳುಳ್ಳವ. ತನ್ನಿಂದ ತಾನೇ ಪ್ರಕಾಶನಾದವ. ಪರಾಧೀನನಲ್ಲದೆ ಸ್ವತಂತ್ರನಾಗಿರತಕ್ಕವ. ಸರ್ವತ್ರ ವ್ಯಾಪ್ತನಾದವ. ಅಧಿಕಾರಿಗಳು ಎಷ್ಟೆಷ್ಟು

ಜಾಗರೂಕತೆಯಿಂದ ನಿಷ್ಕಾಮರಾಗಿ ತನ್ನಲ್ಲಿ ಭಕ್ತಿಮಾಡತಕ್ಕರೋ ಅಷ್ಟಷ್ಟು ಕ್ಷಿಪ್ರದಿಂದ ಅವರುಗಳ ಮನೋಭೀಷ್ಟರೂಪವಾದ ಫಲವನ್ನು ಕೊಡತಕ್ಕವ. ಭೂದೇವರಿಗೆ ಸ್ವಾಮಿಯಾದವ. ಯದುವಂಶದಲ್ಲಿ ವಿಶೇಷ ಪರಾಕ್ರಮಿ ಯಾದವ. ತರ್ಕಮಾಡಿ ಸಾಕಲ್ಯೇನ ತಿಳಕೊಂಬೋದಕ್ಕೆ ಅಶಕ್ಯನಾದವ. ವಿಶ್ವ ಎಂಬ ರೂಪದಿಂದ ಜಾಗ್ರತಿ, ತೈಜಸ ಎಂಬ ರೂಪದಿಂದ ಸ್ವಪ್ನ, ಪ್ರಾಜ್ಞ ಎಂಬ ರೂಪದಿಂದ ನಿದ್ರಾ, ಈ ಪ್ರಕಾರ ಐದಿಸತಕ್ಕವ. ಇನ್ನೂ ಅಕಾರ, ಉಕಾರ, ಮಕಾರ ಈ ಮೂರೂ ವರ್ಣಗಳಿಂದ ಯುಕ್ತವಾದ ಓಂಕಾರಪ್ರತಿ ಪಾದ್ಯನಾದವ. ಸರ್ವೋಚ್ಚನಾದ ಶ್ರೀಪರಮಾತ್ಮನೆಂದು ತಾತ್ಪರ್ಯ. ॥9॥

## 2. ಭಾವಪ್ರಕಾಶಿಕೆ :–

ಗುಣ, ಕರ್ಮ, ಜನ್ಮಾದಿಗಳಿಂದ ಇವನು ಇಂತಹವನೆಂದು ಅನುಮೇಯಿ ಸಲು ಸಾಧ್ಯವಿಲ್ಲದಹನು. ಯಾವಾಗಲೂ ಪ್ರಸನ್ನವಾದ ಮುಖಕಮಲವುಳ್ಳ ವನು, ಮುಕ್ತಿಯಲ್ಲಿ ಸ್ವರೂಪಾನಂದವನ್ನು ಕೊಡುವವನು, ದೇವತೆಗಳಿಂದ ಪೂಜ್ಯವಾದ ಪಾದಕಮಲವುಳ್ಳವನು. ಸ್ವಯಂಪ್ರಕಾಶನು ಸ್ವತಂತ್ರನು, ಸರ್ವತ್ರ ಇರುವವನು ಅತಿಶೀಘ್ರದಲ್ಲಿ ಫಲವನ್ನು ಜೀವರಿಗೆ ಕೊಡುವವನು. ಭೂದೇವಿಯ ಪತಿಯು. ಯದುಕುಲಶ್ರೇಷ್ಠನೆಂದು ಶ್ರೀಕೃಷ್ಣಾವತಾರದಲ್ಲಿ ಪ್ರಸಿದ್ಧಿ ಹೊಂದಿದವನು. ತರ್ಕಿಸಲು ಸಾಧ್ಯವಿಲ್ಲದವನು. ವಿಶ್ವ, ತೈಜಸ, ಪ್ರಾಜ್ಞ ಎಂಬ ರೂಪತ್ರಯವುಳ್ಳವನು. ॥9॥

## 4. ಶ್ರೀವ್ಯಾಸಸಿದ್ಧಾಂತಕೌಮುದಿ :–

"ಅಪ್ರಮೇಯಃ" ಇತಿ॥ ಸಾಕಲ್ಯೇನ ಅಜ್ಞೇಯಃ। ಅವಿತರ್ಕ್ಯ ವಿಚಿತ್ರತ್ವಾತ್ । ಕುತರ್ಕಾಗೋಚರತ್ವಾತ್ ವಾ. ॥9॥

### ಕನ್ನಡಾರ್ಥ

"ಅಪ್ರಮೇಯ"–ಸಮಗ್ರವಾಗಿ ತಿಳಿಯಲ್ಪಡಲಾರದವನು, "ಅವಿತರ್ಕ್ಯ" ಅತ್ಯಂತ ವಿಚಿತ್ರಮಯ ಚರಿತ್ರವುಳ್ಳವನಾದುದರಿಂದ, ಹೀಗೆಯೇ ಇದ್ದವನೆಂದು

ತರ್ಕಮಾಡಲ್ಪಡಲಾರದವನು. ಅಥವಾ ಕುತರ್ಕಗಳಿಗೆ ಗೋಚರನಾಗದಿದ್ದುದರಿಂದ "ಅವಿತರ್ಕ್ಯ"ನೆನಿಸುತ್ತಾನೆ. ॥9॥

5. ಶ್ರೀಗುರುಹೃದಯಪ್ರಕಾಶಿಕೆ :—

ತಿಳಿಯುವುದಕ್ಕೆ ಶಕ್ಯನಲ್ಲದ್ದರಿಂದ ಅಪ್ರಮೇಯನೇ, ಸದಾಭಕ್ತರಿಗೆ ಪ್ರಸಾದ ಸುಮುಖಕಮಲನೇ, ಮುಕ್ತಿಸುಖಪ್ರದನೇ, ಸುಮನಸರೆಂಬ ದೇವತೆಗಳಿಂದ ಪೂಜ್ಯಪಾದನೇ, ಸ್ವಯಮೇವ ಪ್ರಕಾಶನೇ, ಸ್ವತಂತ್ರನೆಂಬ ಪರಾಪೇಕ್ಷೆಇಲ್ಲದವನೇ. ಸರ್ವವ್ಯಾಪಕನೇ. ಕ್ಷಿಪ್ರವೆಂಬ ತ್ವರೆಯಾಗಿ ಐಹಿಕ-ಆಮುಷ್ಮಿಕ ಫಲಕೊಡುವವನೇ. ಕ್ಷಿತಿಯೆಂಬ ಭೂದೇವಿಗೆ ಅರಸನೇ, ಯದುಕುಲದಲ್ಲಿ ಅವತರಿಸಿದ ವೀರನೇ, ವಿತರ್ಕನೆಂಬ ಯುಕ್ತಿಗೆ ಸಿಲುಕದವನೇ, ವಿಶ್ವನೆಂಬ ಜಾಗ್ರತ್ ಪ್ರವರ್ತಕನೇ, ತೈಜಸನೆಂಬ ಸ್ವಪ್ನಪ್ರದನೇ, ಪ್ರಾಜ್ಞನೆಂಬ ನಿದ್ರಾಪ್ರದನೇ ನಮ್ಮನ್ನು ರಕ್ಷಿಸು. ॥9॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಪರಮಾತ್ಮನ ಮಹಾಮಹಿಮೆಗಳನ್ನಾಗಲೀ, ಅವನ ಅನಂತಾನಂತ ಗುಣ, ರೂಪ, ಕ್ರಿಯಾದಿಗಳನ್ನಾಗಲಿ ಅನಾದ್ಯನಂತ ಕಾಲದಿಂದಲೂ ರಮಾಬ್ರಹ್ಮಾದಿಗಳಿಗೆ ಸಾಕಲ್ಯೇನ ತಿಳಿಯಲು ಶಕ್ಯವಿಲ್ಲ ಇದರಿಂದ **ಅಪ್ರಮೇಯನು**. ಮೇಯ-ಅಂದರೆ ತಿಳಿಯಲು ಸಾಧ್ಯವಾದದ್ದು. ಪ್ರಮೇಯ ಅಂದರೆ ಪ್ರಕೃಷ್ಟವಾಗಿ ಅಂದರೆ ವಿಶೇಷವಾಗಿ (ಪೂರ್ಣವಾಗಿ) ತಿಳಿಯಲು ಸಾಧ್ಯವಾದದ್ದು. ಅಪ್ರಮೇಯ ಅಂದರೆ ನಿಷೇದಾರ್ಥದಲ್ಲಿ ಸಾಕಲ್ಯೇನ ಯಾರಿಂದಲೂ ಅನುಮೇಯಿಸಲು (ತಿಳಿಯಲು) ಅಸಾಧ್ಯವೆಂದರ್ಥ.

2. **ಅಥವಾ** ಅಪ್ರಮೇಯನು ಮಹತ್ತಿಗಿಂತಲೂ ಮಹತ್ತಮನಾದವನು, ಅತ್ಯಂತ ಬೃಹತ್ತಾದ ವಸ್ತುವಿಗಿಂತ ಮಿಗಿಲಾಗಿ, ಅದಕ್ಕೆ ಆವರಣ ರೂಪದಲ್ಲಿದ್ದಾನೆ. ಇನ್ನೊಂದರ್ಥದಲ್ಲಿ ಸರ್ವೋತ್ಕೃಷ್ಟಗಳಾದ ಸ್ವರೂಪವುಳ್ಳ

ವನು. ಇದರಿಂದ **ಉನ್ನತಸ್ವರೂಪನು.** ಇಲ್ಲಿ ಉನ್ನತ–ಅತ್ಯಂತ ಮಹತ್ವಾದ, ಅಥವಾ ಸರ್ವೋಚ್ಚಗಳಾದ

3. ಉನ್ನತಸ್ವರೂಪನು ಯಾವಾಗಲೂ ತನ್ನ ಭಕ್ತರ ವಿಷಯದಲ್ಲಿ ಹಸನ್ಮುಖವುಳ್ಳವನಾಗಿ ಸುಪ್ರಸನ್ನ ಮುಖಾರವಿಂದವುಳ್ಳವನು. ಅವರಿಗೆ ಸುಮುಖನು ಮತ್ತು ಸುಪ್ರಸನ್ನನು. ಇದರಿಂದ **ಸದಾ ಸುಪ್ರಸನ್ನ ಮುಖಾಬ್ಜನು.** ಮುಕ್ತಿ–ಮೋಕ್ಷಾವಸ್ಥೆಯಲ್ಲಿ ಸುಖ – ನಿತ್ಯಾನಂದವನ್ನು ಪ್ರದಾಯಕನು–ವಿಶೇಷವಾಗಿ ಕೊಡತಕ್ಕವನೆಂದರ್ಥ.

5. ಮುಕ್ತಿಸುಖಪ್ರದಾಯಕನು ಬ್ರಹ್ಮಾದಿ ದೇವತಾವರ್ಗದವರಿಂದ ಚೆನ್ನಾಗಿ ಪೂಜಿತವಾದ ಚರಣ ಕಮಲಗಳುಳ್ಳವನು–ರಮಾ ಬ್ರಹ್ಮಾದಿ ಸಕಲ ದೇವತೆಗಳೂ ಅವನ ಚಾರುಕಮಲಗಳನ್ನು ಸದಾ ಆರಾಧಿಸುತ್ತಿರುವರು. ಇದರಿಂದ **ಸುಮನಸಾರಾಧಿತಪದಾಂಭೋಜನು** ಸುಮನಸನೆಂದರೆ–ಸಾತ್ವಿಕ ಮನೋಭಾವವುಳ್ಳ ದೇವತಾವರ್ಗ. ಪದ + ಅಂಭೋಜ. ಪದ–ಚರಣದ್ವಯಗಳು, ಅಂಭೋಜ–ನೀರಿನಲ್ಲಿ ಉತ್ಪತ್ತಿಯಾಗುವ ಕಮಲ ಅಂದರೆ ಪಾದಕಮಲಗಳೆಂದರ್ಥ.

6. ಸುಮನಸಾರಾಧಿತ ಪದಾಂಭೋಜನು. ತನಗೆ ತಾನೇ ಪ್ರಕಾಶಕನು ಸ್ವಯಂಜ್ಯೋತಿ ಸ್ವರೂಪನು. ಇದರಿಂದ **ಸ್ವಪ್ರಕಾಶನು.** ಪ್ರಕೃತಿಯಲ್ಲಿ ಸೂರ್ಯ, ಚಂದ್ರ, ನಕ್ಷತ್ರಾದಿ ಜ್ಯೋತಿರಾಶಿಗಳು ಶ್ರೀಪರಮಾತ್ಮನ ತೇಜಸ್ಸಿನಿಂದಲೇ ಬೆಳಗುತ್ತಿರುವುವು. ಅವುಗಳ ಸ್ವರೂಪಭೂತವಾದ ತೇಜಸ್ಸಿಗೆ ಸ್ವಪ್ರಕಾಶನಾದ ಶ್ರೀಪರಮಾತ್ಮನ ತೇಜಸ್ಸಿನ ವಿಭೂತಿಯೇ ಕಾರಣವು.

7. ಶ್ರೀಪರಮಾತ್ಮನ ಕರ್ತೃತ್ವಶಕ್ತಿ ಸ್ವಾಧೀನವಾದದ್ದು. ಅದು ಪರಾಧೀನವಲ್ಲ. ಇದರಿಂದ **ಸರ್ವತಂತ್ರಸ್ವತಂತ್ರನು.** ಸ್ವಾತಂತ್ರ್ಯ ಎಂಬುದು ಶ್ರೀಪರಮಾತ್ಮನ ಸ್ವರೂಪಗತ ಧರ್ಮವು. ಪರಾಧೀನ ಕರ್ತೃತ್ವವು ಜೀವರ ಸ್ವರೂಪಲಕ್ಷಣವು, ಹೀಗೆ ಶ್ರೀಶನು ಜೀವರಿಗಿಂತ ಅತ್ಯಂತ ಭಿನ್ನನಾಗಿದ್ದಾನೆ,

8. ಸರ್ವತಂತ್ರ ಸ್ವತಂತ್ರನಾದ ಸರ್ವೇಶ್ವರನು ಸರ್ವತ್ರ ವ್ಯಾಪ್ತನು. ಅಣುರೇಣುತೃಣಕಾಷ್ಠಾದಿ ಸಮಸ್ತ ವಸ್ತುಗಳಲ್ಲಿ ವ್ಯಾಪ್ತನಾಗಿದ್ದಾನೆ. ಇದರಿಂದ **ಸರ್ವಗನು.** ಸರ್ವಗಅಲ್ಲಾ ದೇಶ, ಕಾಲ, ಅವಸ್ಥಾದಿಗಳಲ್ಲಿ ಗಮಿಸಿರುವವನು ಅಂದರೆ ವ್ಯಾಪ್ತನು.

9. ಸರ್ವಗನಾದ ಸ್ವರಮಣನು ತನ್ನನ್ನೇ ಸದಾ ನಂಬಿಕೊಂಡು ಭಜಿಸುತ್ತಿರುವ ಭಕ್ತರಿಗೆ ಅತಿಶೀಘ್ರದಲ್ಲಿಯೇ ಅವರವರ ಯೋಗ್ಯತೆಗನುಗುಣವಾಗಿ ಫಲವನ್ನು ನೀಡುವ ಪ್ರಭುವು. ಇದರಿಂದ **ಕ್ಷಿಪ್ರಫಲದಾಯಕನು.** ಕ್ಷಿಪ್ರ–ಅತಿಶೀಘ್ರವಾಗಿ ಕರ್ಮಕ್ಕೆ ತಕ್ಕಂತೆ ಫಲ. ಕರ್ಮಾನುಭವವೇ ಫಲರೂಪವು. ಶ್ರೀಪರಮಾತ್ಮನು ತನ್ನ ಅಘಟನಾಘಟನ ಶಕ್ತಿಯಿಂದ ಕರ್ಮದ ಉತ್ಕಟತೆಯನ್ನು ಉಪಮರ್ದನ ಮಾಡಿ, ಕ್ಷಿಪ್ರ ಫಲದಾಯಕನು.

10. ಭಕ್ತರಿಗೆ ಕ್ಷಿಪ್ರಫಲದಾಯಕನಾದವನು ಭೂದೇವಿಯ ರಮಣನು. ಶ್ರೀಲಕ್ಷ್ಮೀದೇವಿಯು ಭೂರೂಪದಿಂದ ರಜೋಗುಣಾಭಿಮಾನಿಯಾಗಿದ್ದಾಳೆ. ಕ್ಷಿತಿ–ಭೂಮಿ, ಅಭಿಮಾನಿ ಭೂದೇವಿ. ಈಶ–ಪತಿ ಹಾಗೂ ನಿಯಾಮಕನು.

11. ಕ್ಷಿತೀಶನಾದ ಕ್ಷೀರಸಮುದ್ರಶಾಯಿಯು ಯದುವಂಶದಲ್ಲಿ ಅವತಾರಮಾಡಿ, ಬಹು ಪರಾಕ್ರಮಿ ಎಂದೆನಿಸಿ, ಯದುಕುಲಶ್ರೇಷ್ಠನಾಗಿ ವಿರಾಜಿಸಿದನು, ಶ್ರೀಕೃಷ್ಣಾವತಾರದಲ್ಲಿ. ಇದರಿಂದ ಯದುಕುಲಲಲಾಮನಾದ ಶ್ರೀಕೃಷ್ಣನು **ಯದುಪ್ರವೀರನು.** ಯದು–ಯದುವಂಶ ಪ್ರವೀರ ಶ್ರೇಷ್ಠನು (ಸರ್ವೋತ್ಕೃಷ್ಟನು)

12. ಆ ಯದುಪ್ರವೀರನು ತರ್ಕ, ವಾದವಿವಾದಗಳಿಂದ ಲಭ್ಯನಲ್ಲ ತರ್ಕಾತೀತನು–"ಯತೋವಾಚಾನಿವರ್ತಂತೇ, ಅಪ್ರಾಪ್ಯಮನ ಸಾಸಹ" ಎಂಬ ಶ್ರುತಿ ವಚನದಂತೆ.

ವಾಗ್ರೂಪವಾದ ತರ್ಕಸರಣಿಗೆ ಸಿಕ್ಕುವುದಿಲ್ಲ. ಮನಸಿನ ಆಲೋಚನೆಯಿಂದಲೂ ಅತೀತನು. ಇದರಿಂದ **ವಿತರ್ಕ್ಯನು.** ತರ್ಕ್ಯ–ತರ್ಕದಿಂದ.

13. ಶ್ರೀಪರಮಾತ್ಮನು ವಿಶ್ವನಾಮಕನಾಗಿ ಸರ್ವಜೀವರ ಬಲ ಗಣ್ಣಿನ ತುದಿಯಲ್ಲಿದ್ದಾನೆ. ಈ ರೂಪವು ಜೀವರಿಗೆ ಜಾಗ್ರದಾವಸ್ಥಪ್ರೇರಕ ರೂಪ. ಸ್ತಂಭರೂಪದಲ್ಲಿ ದಕ್ಷಿಣಾಕ್ಷಿಯ ತುದಿಯಲ್ಲಿದ್ದಾನೆ. ಸ್ತಂಭಕ್ಕೆ ರಜ್ಜು ರೂಪದಲ್ಲಿ (ಹಗ್ಗ) ರಮಾದೇವಿ ಇದ್ದಾರೆ. ರಜ್ಜುವಿನ ತುದಿಗೆ ಗೋವತ್ಸ ರೂಪದಲ್ಲಿ ಶ್ರೀವಾಯುದೇವರಿದ್ದಾರೆ (ಮಾಂಡೂಕೋಪನಿಷತ್ತು) ವಿಶ್ವನಾಮಕ ನಿಗೆ 19 ಮುಖಗಳು. ಮಧ್ಯಮುಖ ಗಜಮುಖವು.

14. ಅದೇ ವಿಶ್ವನು ಕಂಠ ಪ್ರದೇಶಕ್ಕೆ ಪ್ರವೇಶಿದಾಗ ತೈಜಸನೆಂಬ ಹೆಸರಿನಿಂದ ಜೀವರಿಗೆ ಸ್ವಪ್ನಾವಸ್ಥೆ ಪ್ರೇರಕನಾಗುವನು. ತೈಜಸನಿಗೂ 19 ಮುಖಗಳು.

15. ಅದೇ ತೈಜಸನು ಜೀವರ ಹೃದಯ ಸ್ಥಾನಕ್ಕೆ ಬಂದಾಗ ಪ್ರಾಜ್ಞ ನೆನಿಸುವನು. ಪ್ರಾಜ್ಞನ ಆಲಿಂಗನದಲ್ಲಿ ಶ್ರೀವಾಯುದೇವರೂ ಮತ್ತು ಶ್ರೀವಾಯುದೇವರ ಆಲಿಂಗನದಲ್ಲಿ ಜೀವರೂ ಇದ್ದಾಗ, ಜೀವರಿಗೆ ಗಾಢನಿದ್ರಾ ವಸ್ಥೆ (ಸುಷುಪ್ತ್ಯವಸ್ಥೆ) ಪ್ರಾಪ್ತವಾಗುವುದು. ಈ ಪ್ರಾಜ್ಞನಿಗೂ 19 ಮುಖಗಳು.

ಹೀಗೆ ಅ–ಕಾರ ವಾಚ್ಯನಾಗಿ ವಿಶ್ವನೂ, ಉ–ಕಾರವಾಚ್ಯನಾಗಿ ತೈಜಸನೂ ಮ–ಕಾರವಾಚ್ಯನಾಗಿ ಪ್ರಾಜ್ಞನೂ ಇದ್ದು, ರೂಪತ್ರಯಗಳಿಂದ ಜೀವರಿಗೆ ಕ್ರಮವಾಗಿ ಜಾಗೃತಿ–ಸ್ವಪ್ನ–ಸುಷುಪ್ತಿ, ಈ ಅವಸ್ಥಾತ್ರಯಗಳನ್ನು ಉಂಟು ಮಾಡುವನು. ‖9‖

## ಪದ್ಯ ೧೦

**ಮೂಲ :**

**ಗಾಳಿನಡೆವಂದದಲಿ ನೀಲಘ ।**
**ನಾಳಿ ವರ್ತಿಸುವಂತೆ ಬ್ರಹ್ಮ ಶ್ರೀ ।**
**ಶೂಲಧರ ಶಕ್ರಾರ್ಕ ಮೊದಲಾದಖಿಳ ದೇವಗಣ ॥**
**ಕಾಲ ಕರ್ಮ ಗುಣಾಭಿಮಾನಿ ಮ ।**
**ಹಾಲಕುಮಿಯನುಸರಿಸಿ ನಡೆವಳು ।**
**ಮೂಲಕಾರಣ ಮುಕ್ತಿದಾಯಕ ಹರಿಯೆನಿಸಿಕೊಂಬ ॥**
॥೧೦॥

**ಅವತರಣಿಕೆ :-**

ರಮಾದಿ ಸಕಲ ದೇವತಾವರ್ಗ ಶ್ರೀಪರಮಾತ್ಮನ ಇಚ್ಛಾನುಸಾರ ನಡೆಯುತ್ತಾರೆಂದು ದೃಷ್ಟಾಂತಪೂರ್ವಕ ಹೇಳುತ್ತಾರೆ. ॥10॥

**ಪ್ರತಿಪದಾರ್ಥ :-**

**ಗಾಳಿ ನಡೆವಂದದಲಿ** = ಗಾಳಿ ಹೇಗೆ ಹೇಗೆ ಬೀಸುತ್ತದೆಯೋ ಹಾಗೆ. **ನೀಲಘನಾಳಿ** = ಉದಕದಿಂದ ಸಹಿತವಾದ ನೀಲವರ್ಣದ ಮೇಘಪಂಕ್ತಿ, **ವರ್ತಿಸುವಂತೆ** = ಸಂಚರಿಸುವಂತೆ, **ಕಾಲ** = ಪ್ರಳಯಕಾಲಗತ ಮಹಾಕಾಲಕ್ಕೆ (ಪ್ರವಾಹತೋ ನಿತ್ಯವಾದ ಕಾಲವು), **ಕರ್ಮ** = ಜೀವರ ಅನಾದಿ ಕರ್ಮಕ್ಕೆ, **ಗುಣ** = ಉಪಾದಾನರೂಪವಾದ ತ್ರಿಗುಣಗಳಿಗೆ, **ಅಭಿಮಾನಿ** = ಅಭಿಮಾನಿಯಾದ, **ಮಹಾಲಕುಮಿಯು** = ಅಕ್ಷರನಾಮಕಳಾದ ಶ್ರೀಲಕ್ಷ್ಮೀದೇವಿಯರು, **ಅನುಸರಿಸಿ ನಡೆವಳು** = ಗಾಳಿ ಸದೃಶನಾದ ಶ್ರೀಪರಮಾತ್ಮನ ಇಚ್ಛೆಗನುಸಾರವಾಗಿ ನಡೆಯುವರು, **ಬ್ರಹ್ಮ** = ಶ್ರೀಬ್ರಹ್ಮ

ದೇವರು, **ತ್ರಿಶೂಲಧರ** = ಶ್ರೀರುದ್ರದೇವರು, **ಶಕ್ರ** = ಇಂದ್ರದೇವರು, **ಅರ್ಕ** = ಸೂರ್ಯದೇವರು, **ಮೊದಲಾದ** = ಇವರೇ ಮೊದಲಾದ, **ಅಖಿಳ ದೇವಗಣ** = ಸಮಸ್ತ ದೇವತಾಸಮೂಹವು ನಡೆಯುವುದು, **ಮೂಲ ಕಾರಣ** = ಜಗತ್ತಿಗೇ ಮೂಲಕಾರಣನಾದ, **ಮುಕ್ತಿ ದಾಯಕ** = ತ್ರಿವಿಧ ರಿಗೂ ಅವರವರ ಯೋಗ್ಯತಾನುಸಾರ ಗತಿಗಳನ್ನು ಕೊಡತಕ್ಕ, **ಹರಿಯೆನಿಸಿ ಕೊಂಬ** = ಶ್ರೀಪರಮಾತ್ಮನು ಶ್ರೀಹರಿನಾಮಕನಾಗಿ ಕರೆಯಿಸಿಕೊಳ್ಳುತ್ತಾನೆ. ॥10॥

## ವ್ಯಾಖ್ಯಾನಗಳು

### 1. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ಶ್ರೀಪರಮಾತ್ಮನ ಮಹಾತ್ಮ್ಯ ಹೇಳತಾರೆ.

ಗಾಳಿ ಹ್ಯಾಂಗೆ ಹ್ಯಾಂಗೆ ಸಂಚಾರ ಮಾಡತದೋ ಅದರಂತೆ ಉದಕದಿಂದ ಸಹಿತವಾದ ನೀಲವರ್ಣವಿಶಿಷ್ಟವಾದ ಮೇಘದ ಪಙ್ತಿ ಸಂಚರಿಸೋದಾಗತದೆ. ಇದರಂತೆ ಮೇಘ ಸದೃಶರಾದ, ಪ್ರಳಯಕಾಲಗತ ಮಹಾಕಾಲಕ್ಕೆ, ಜೀವನ ಅನಾದಿಕರ್ಮಕ್ಕೆ ಉಪಾದಾನರೂಪವಾದ ಸಾತ್ತ್ವಿಕಾದಿ ಗುಣಗಳಿಗೆ ಅಭಿಮಾನಿ ಯಾದ ಅಕ್ಷರಸಾಂಕೇತದಿಂದ ಶ್ರೇಷ್ಠರಾದ ಲಕ್ಷ್ಮೀದೇವೇರು ಪರಮಾತ್ಮನೇಬೋ ಗಾಳಿ ವರ್ತಿಸಿದಂತೆ ತಾವು ನಡೆಯುವರು. ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು, ಸೂರ್ಯದೇವರು ಇವರೇ ಮೊದಲಾದ ಸಮಸ್ತರಾದ ದೇವತಾ ಸಮೂಹ, ಹಾಂಗೆ ತೃಣಾಂತ ತ್ರಿವಿಧಜೀವರು, ಗಾಳಿಸಾಂಕೇತನಾದ ಪರಮಾತ್ಮನ ಅನುಸಾರಿಯಾಗಿ ನಡಿಯೋವರಾಗತಾರೆ. ಸರ್ವಕ್ಕೂ ಮೂಲ ಕಾರಣನಾದ ಶ್ರೀಪರಮಾತ್ಮ ತ್ರಿವಿಧಜೀವರಿಗೆ ಯೋಗ್ಯತಾನುಸಾರ ಮುಕ್ತಿ ಕೊಡತಕ್ಕವ. ಶ್ರೀಪರಮಾತ್ಮನಾದ ತಾನು ಜಗತ್ಪ್ರವರ್ತಕನೆಂದು ಹೇಳಿಸಿ ಕೊಳ್ಳುತ್ತಾನೆ. ಆದಕಾರಣ, ಈ ಪರಮಾತ್ಮ ಸರ್ವೋತ್ಕೃಷ್ಟಮಹಿಮನೆಂದು ತಾತ್ಪರ್ಯ. ॥10॥

**2. ಭಾವಪ್ರಕಾಶಿಕೆ :-**

ಗಾಳಿಯನ್ನನುಸರಿಸಿ ಮೇಘಗಳು ಓಡಾಡುವಂತೆ ರಮಾಬ್ರಹ್ಮಾದಿ ಸಕಲ ದೇವತೆಗಳೂ ಪರಮಾತ್ಮನು ಮಾಡಿಸಿದಂತೇ ಮಾಡುವರೇ ಆಗಲಿ, ಸ್ವತಂತ್ರ ದಿಂದ ಮಾಡುವ ಶಕ್ತಿ ಯಾರಿಗೂ ಇಲ್ಲ. ಇಲ್ಲಿ ಮೇಘವು ಹೇಗೆ ಆಧೀನವೋ, ಹಾಗೆ ಬ್ರಹ್ಮಾದಿ ಸಕಲರೂ ಭಗವದಧೀನರೆಂದು ತಾತ್ಪರ್ಯ. ||10||

**4. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :**

"ಘನಾವಲೀಃ ವಾಯುರಿವಾವಿಪಕ್ಷ್ಯ" ಇತ್ಯುಕ್ತಮಾಹ-"ಘಾಳಿ" ಇತಿ ||10||

**ಕನ್ನಡಾರ್ಥ**

"ಗಾಳಿಯು ಮೇಘಮಂಡಲವನ್ನು ಪ್ರವರ್ತಿಸುವಂತೆ" ಎಂಬುದಾಗಿ ಭಾಗವತ ದೃಷ್ಟಾಂತವನ್ನು "ಗಾಳಿ" ಎಂಬ ಪದ್ಯದಿಂದ ಹೇಳುತ್ತಾರೆ. ||10||

**5. ಶ್ರೀಗುರುಹೃದಯಪ್ರಕಾಶಿಕೆ :**

ಸರ್ವಕ್ರಿಯವೂ ರಮಾನಾರಾಯಣರಧೀನವೆಂದು ಸದೃಷ್ಟಾಂತ ಬೋಧಿ ಸುತ್ತಾರೆ, ಗಾಳಿ ಎಂದು. ಗಾಳಿಯನ್ನನುಸರಿಸಿ ನೀಲಘನವೆಂಬ ಮೇಘವು ಚೇಷ್ಟಿಸುವಂತೆ ಬ್ರಹ್ಮನು, ತ್ರಿಶೂಲಧರನೆಂಬ ರುದ್ರನು, ಶಕ್ರನೆಂಬ ಇಂದ್ರನು, ಅರ್ಕನೆಂಬ ಸೂರ್ಯನು ಮೊದಲಾದ ದೇವತೆಗಳೂ ಗುಣಾಭಿಮಾನಿ ಎಂಬ ಮಹಾಲಕ್ಷ್ಮಿಯನ್ನು ಅನುಸರಿಸಿ ನಡೆಯುವರು, ಅಂದರೆ ಸರ್ವಕ್ರಿಯೆ ಆಚರಿ ಸುವರು. ಆ ಲಕ್ಷ್ಮೀಗು ಸಹಾ ಮೂಲನೆಂಬ ಮುಖ್ಯಕಾರಣನಾಗಿ ಶ್ರೀಹರಿ ಸರ್ವಮುಕ್ತಿಪ್ರದನು. ||10||

## ಸರ್ವವ್ಯಾಖ್ಯಾನಸಾರಸಂಗ್ರಹ

1. ಆಕಾಶದಲ್ಲಿ ಗಾಳಿಯು ಬೀಸುವುದು. ಗಾಳಿಯು ಬೀಸುವ ದಿಕ್ಕನ್ನು ಅನುಸರಿಸಿ, ಸಾಂದ್ರವಾದ ನೀಲಮೇಘಗಳು ಸಂಚರಿಸುವುವು.

ಈ ಉಪಮಾನದಲ್ಲಿ ಮೇಘಗಳ ಚಲನೆಯೂ ಗಾಳಿಯ ಅಧೀನ. ನೀಲ– ನೀಲವರ್ಣವಿಶಿಷ್ಟವಾದ ಘನಾಳಿ–ಸಾಂದ್ರವಾದ ಮೋಡಗಳು.

2. ಮಹಾಪ್ರಳಯಕಾಲದಲ್ಲಿ ವಿದ್ಯಮಾನವಾಗಿರುವ ಮಹಾಕಾಲವು ಪ್ರವಾಹತೋನಿತ್ಯವಾಗಿರುವುದು. ನದಿಯ ಪ್ರವಾಹದಲ್ಲಿ ಒಂದರ ಮೇಲೆ ಮತ್ತೊಂದು ತರಂಗವು ಬರುವಂತೆ, ಕಾಲವು ಪ್ರವಾಹದೋಪಾದಿಯಲ್ಲಿ ನಿತ್ಯವು.

3. ಜೀವರ ಅನಾದಿ ಕರ್ಮಕ್ಕೆ ಮೂಲವಾದ ಸತ್ವಾದಿ ತ್ರಿಗುಣಗಳು, ಕಾಲ ಮತ್ತು ಕರ್ಮ. ತ್ರಿಗುಣಗಳಿಗೆ ಅಭಿಮಾನಿಗಳಾದ ಅಕ್ಷರನಾಮಕ ರಾದ ಶ್ರೀಲಕ್ಷ್ಮೀದೇವಿಯರನ್ನು ಅನುಸರಿಸಿ, ಶ್ರೀಬ್ರಹ್ಮದೇವರು ತ್ರಿಶೂಲ ಧರನಾದ ಶ್ರೀರುದ್ರದೇವರು, ಶಕ್ರನಾಮಕರಾದ ಶ್ರೀಇಂದ್ರದೇವರು, ಸೂರ್ಯ (ಅರ್ಕ) ಇತ್ಯಾದಿ ಸಮಸ್ತ ದೇವತಾಗಣವು ನಡಿಯುವುದು.

4. ಜಗತ್ತಿಗೆ ಮೂಲಕಾರಣನು ಶ್ರೀಪರಮಾತ್ಮನು. ಮುಕ್ತಿಯೋಗ್ಯ ಚೇತನರಿಗೆ ಸ್ವಸ್ವರೂಪಾನಂದ ಆವಿರ್ಭಾವರೂಪವಾದ ನಿತ್ಯಾನಂದರೂಪವಾದ ಮೋಕ್ಷಸುಖವನ್ನು ನೀಡುವವನು ಶ್ರೀಪರಮಾತ್ಮನು. ತ್ರಿವಿಧಜೀವರಿಗೆ ಅವರವರ ಸ್ವರೂಪಯೋಗ್ಯತೆಗನುಗುಣವಾಗಿ ಗತಿದಾಯಕನು. ಅಂತಹ ಶ್ರೀಪರಮಾತ್ಮನ ಇಚ್ಛೆಯಂತೆ, ಛಾಯಾನುವರ್ತಿಯಾಗಿ ನಡೆಯುವಳು ಮಹಾಲಕ್ಷ್ಮೀದೇವಿಯು.

ಈ ಪದ್ಯದಲ್ಲಿ ಶ್ರೀಪರಮಾತ್ಮನು ಗಾಳಿಯ ಸದೃಶ. ರಮಾ ಬ್ರಹ್ಮನ ಸಮಸ್ತರೂ ನೀಲಮೇಘದಂತೆ ಈಶಾಧೀನರು. ಪ್ರಸಕ್ತಪದ್ಯದಿಂದ ಶ್ರೀಪರಮಾತ್ಮನ ಸರ್ವತಂತ್ರಸ್ವಾತಂತ್ರ್ಯಗುಣ ಮತ್ತು ಈಶತ್ವಧರ್ಮವನ್ನು ತಿಳಿಸುತ್ತಾರೆ. ॥10॥

—✱—

## ಪದ್ಯ ೧೧

**ಮೂಲ :**

**ಮೋಡ ಕೈಬೀಸಣಿಗೆಯಿಂದಲಿ ।**
**ಓಡಿಸುವೆನೆಂಬನ ಪ್ರಯತ್ನವು ।**
**ಕೂಡುವುದೆ ಕಲ್ಪಾಂತಕಾದರು ಲಕುಮಿವಲ್ಲಭನು ॥**
**ಜೋಡುಕರ್ಮವ ಜೀವರೊಳು ತಾ ।**
**ಮಾಡಿ ಮಾಡಿಸಿ ಫಲಗಳುಣಿಸುವ ।**
**ಪ್ರೌಢರಾದವರಿವನ ಭಜಿಸಿ ಭವಾಬ್ಧಿ ದಾಟುವರು ॥ ೧೧ ॥**

**ಅವತರಣಿಕೆ :-**

ದ್ವಂದ್ವಕರ್ಮಗಳನ್ನು ಶ್ರೀಪರಮಾತ್ಮನು ತಾನೇ ಮಾಡಿ ಮಾಡಿಸುವನೆಂಬ ಮಂತ್ರವನ್ನು ಸುಂದರವಾದ ದೃಷ್ಟಾಂತದ ದ್ವಾರಾ ತಿಳಿಸುತ್ತಾರೆ. ॥11॥

**ಪ್ರತಿಪದಾರ್ಥ :-**

**ಕೈ** = ಕೈಯಲ್ಲಿ, **ಬೀಸಣಿಗೆಯಿಂದಲಿ** = ಬೀಸಣಿಗೆ ಧರಿಸಿದವನಾಗಿ, ಅದರನ್ನು ಬೀಸಿ, ಅದರಿಂದ ಉತ್ಪನ್ನವಾದ ಗಾಳಿಯಿಂದ, **ಮೋಡ** = ಮೋಡಗಳನ್ನು, **ಓಡಿಸುವೆನು** = ಓಡಿಸುತ್ತೇನೆ (ಸಂಚಾರಗೊಳಿಸುತ್ತೇನೆ) **ಎಂಬನ** = ಎಂದು ಹೇಳುವವನ. **ಪ್ರಯತ್ನವು** = ಕಾರ್ಯರೂಪವಾದ ಯತ್ನವು. **ಕಲ್ಪಾಂತಕಾದರು** = ಬ್ರಹ್ಮಕಲ್ಪದ ಅಂತ್ಯದವರೆವಿಗೂ. **ಕೂಡುವುದೆ** = ಸಾಧ್ಯವಾಗುತ್ತದೆಯೆ ? ಸಾಧ್ಯವಾಗಲಾರದೆಂದು ತಾತ್ಪರ್ಯ. **ಲಕುಮಿವಲ್ಲಭನು** = ರಮಾರಮಣನಾದ ಶ್ರೀಪರಮಾತ್ಮನು, **ಜೋಡು ಕರ್ಮವ** = ಶುಭ-ಅಶುಭಗಳೆಂದು (ಪಾಪಪುಣ್ಯ) ಉಭಯವಿಧವಾದ ಕರ್ಮಗಳನ್ನು, **ಜೀವರೊಳು** = ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ

ಪ್ರಕಾಶತೋವ್ಯಾಪ್ತನಾದ ಜೀವರದ್ವಾರಾ, **ತಾ ಮಾಡಿ** = ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, **ಮಾಡಿಸಿ** = ಜೀವನ ದ್ವಾರಾ ಮಾಡಿಸಿ, **ಫಲ ಗಳುಣಿಸುವ** = ತಜ್ಜನಿತ ಕರ್ಮಫಲಗಳನ್ನು ಜೀವರ ಭೋಗಕ್ಕೆ ಕೊಡುವನು. **ಪ್ರೌಢರಾದವರು** = ಸಮೀಚೀನ ಜ್ಞಾನಯುಕ್ತರಾದವರು. **ಇದನ** = ದೇಹಾಂತರ್ಗತನಾದ ಬಿಂಬರೂಪೀ ಶ್ರೀಪರಮಾತ್ಮನನ್ನು, **ಭಜಿಸಿ** = ಭಕ್ತಿಯಿಂದ ಕೊಂಡಾಡಿ, **ಭವಾಬ್ಧಿದಾಟುವರು** = ಸಂಸಾರವೆಂಬ ದುಸ್ತರವಾದ ಸಾಗರವನ್ನು ದಾಟಿ ನಿತ್ಯಾನಂದರೂಪವಾದ ಮೋಕ್ಷಸುಖವನ್ನು ಹೊಂದುತ್ತಾರೆ. ॥11॥

## ವ್ಯಾಖ್ಯಾನಗಳು

1. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ** :-

ಶ್ರೀಪರಮಾತ್ಮ ಜೀವರಲ್ಲಿ ದ್ವಂದ್ವಕರ್ಮ ಮಾಡಿಸುತಾನೆಂತ ಹೇಳುತಾರೆ. ಮಹಾವಾತದಿಂದ ಸಂಚಾರ ಮಾಡಬೇಕಾದ ಮೇಘವನ್ನ ಅಲ್ಪಾಧಿಕಾರಿಗಳಾದವರು ತಮ್ಮ ಸಾಮರ್ಥ್ಯದಿಂದ ಮೇಘಗಳ ತಾವು ನಡಿಸತೇವೆಂದು ಹೇಳುವರು ಕೊಡೋದಿಲ್ಲವೆಂತ ಹೇಳತಾರೆ.

ಕೈಯಲ್ಲಿ ಬೀಸಣಿಗೆ ಧರಿಸಿದವರಾಗಿ ಅದರನ್ನ ಬೀಸಿ. ತಜ್ಜನಿತವಾದ ಗಾಳಿಯಿಂದ ಮೋಡವನ್ನ ಇತಸ್ತತಃ ಸಂಚಾರ ಮಾಡಿಸುವೆನು ಎನತಕ್ಕವನ ಪ್ರಯತ್ನವು ದಾವ ಬ್ರಹ್ಮಕಲ್ಪಕ್ಕಾದರೂ ಕೂಡಲಾರದು ಎಂತ ತಾತ್ಪರ್ಯ. ಪರಾಧೀನನಲ್ಲದ ಸರ್ವಸ್ವತಂತ್ರನಾದ ಲಕ್ಷ್ಮೀಪತಿಯಾದ, ದೇಹಜೀವಾಂತರ್ಗತನಾದ, ಏಕಾದಶೇಂದ್ರಿಯಗತನಾದ ಬಿಂಬರೂಪಿಯಾದ ಶ್ರೀಪರಮಾತ್ಮ, ಪರಾಧೀನರಾದ ಅಸ್ವತಂತ್ರರಾದ ತಮ್ಮ ತಮ್ಮ ಸ್ವರೂಪಸ್ವಭಾವದ ಅನಾದಿ ಕರ್ತೃತ್ವ ಈಶಾಧೀನವಾಗುಳ್ಳ ಇಂಥಾ ಜೀವರೊಳು ಇರತಕ್ಕ ಬಿಂಬರೂಪೀ ಪರಮಾತ್ಮ, ಈಶನಿಂದ ರಚಿತವಲ್ಲದ ಅನಾದಿಯಾದ ಲಿಂಗದೇಹದ ತೃತೀಯ

ಪರಿಚ್ಛೇದವಾದ ತಮಃಪರಿಚ್ಛಿತಗತ ಪಾಪಪುಣ್ಯಗಳೆಂಬ ಉಭಯಕರ್ಮಗಳ, ಬಿಂಬನಾದ ಪುರುಷ ಚಲಿಸಿದರೆ ಪ್ರತಿಬಿಂಬವಾದ ನೆರಳೂ ಚಲಿಸಿದೋಪಾದಿಯಲ್ಲಿ, ಬಿಂಬನಾದ ಪರಮಾತ್ಮ ತನ್ನ ಕ್ರಿಯಾದ್ವಾರಾ ತಾ ಮಾಡಿ, ಪ್ರತಿಬಿಂಬನಾದ ಜೀವನಿಂದ ಮಾಡಿಸಿ ಪಾಪಪುಣ್ಯಾತ್ಮಕವಾದ ಫಲಗಳ ಉಣಿಸೋವನಾಗ ತಾನೆ. ಪುಣ್ಯಮಾಡಬೇಕು ಪಾಪಮಾಡಬಾರದು ಎಂತ ವಿಧಿ ಹೇಳತದ. ಅಂತಃಪ್ರೇರಕನಾದ ಬಿಂಬನ ಆಜ್ಞಾ ಪ್ರಬಲ. ಬಾಹ್ಯಪ್ರೇರಕನ ಆಜ್ಞಾದಂತೆ ಅಂತಃಪ್ರೇರಕ ನಡಿಸೋದಿಲ್ಲ. ಪರಸ್ಪರ ರೂಪಗಳಿಗೆ ಅತ್ಯಂತಾಭೇದವಾದ ಕಾಲಕ್ಕೂ ಅದು ನೇಮ. ರಾಮಕೃಷ್ಣಾದಿರೂಪಗಳ ದರ್ಶನದಿಂದ ಮೋಕ್ಷ ಆಗೋದಿಲ್ಲ. ದೇಹಾಂತರ್ಗತ ಬಿಂಬನ ದರ್ಶನದಿಂದ ಮೋಕ್ಷವಾಗತದೆ. ಇದು ಹ್ಯಾಂಗೆ ನೇಮವೋ ತದ್ವತ್ ಪೂರ್ವೋಕ್ತವೂ ಆದ್ದರಿಂದ, ಶ್ರುತಿಸ್ಮೃತ್ಯಾನುಸಾರ ಪುಣ್ಯವೇ ಮಾಡತೇನೆ ಪಾಪ ಮಾಡೋದಿಲ್ಲ ಎಂಬುವನ ಪ್ರಯತ್ನ, ಮೋಡವನ್ನ ಕೈಬೀಸಣಿಗಿಗಾಳಿಯಿಂದ ಓಡಿಸತೇನೆ ಎಂದು ಪ್ರಯತ್ನ ಮಾಡಿದರೆ ಆದೀತೆ ? ತದ್ವತ್ ಇದೂನೂ ಆಗೋದಿಲ್ಲ. ಆತ ಏವ ಪ್ರಾಣಿಗಳು ಉಭಯವಿಧಕರ್ಮಗಳ ಮಾಡೋವರಾಗತಾರೆ. ಬಿಡೋದಕ್ಕೆ ಸಮರ್ಥರಾಗೋದಿಲ್ಲ. ಶಾಸ್ತ್ರಾಭ್ಯಾಸದಿಂದ ವಿಧಿ-ನಿಷೇಧಗಳು ಮಾತ್ರ ತಿಳೀತವೆ. ಅದರನ್ನ ತಿಳಿದು ಬುದ್ಧಿಶಾಲಿಗಳಾದ ಸಮೀಚೀನಜ್ಞಾನಯುಕ್ತರಾದವರು ಪಶ್ಚಾತ್ತಪ್ತರಾಗಿ ನಿಷೇಧ ಆಚರಿಸದೆ ಬಿಡೋದಕ್ಕೆ ಸಮರ್ಥರಾಗದೆ, ದೇಹಾಂತರ್ಗತನಾದ ಬಿಂಬನ್ನ ನಿಷ್ಕಾಮನಯಾ ಭಜಿಸಿ, ಅವನ ಅಪರೋಕ್ಷ ಸಂಪಾದಿಸಿ ಪಾಪಗಳ ನಾಶ ಐದಿಸಿದವರಾಗಿ ಸಂಸಾರವೆಂಬ ಸಮುದ್ರವನ್ನು ದಾಟಿದವರಾಗಿ ಸುಖವನ್ನ ಹೊಂದೋವರಾಗತಾರೆ. ॥11॥

**2. ಭಾವಪ್ರಕಾಶಿಕೆ :-**

ಅಂತರಿಕ್ಷವನ್ನೆಲ್ಲಾ ಆವರಿಸಿಕೊಂಡಿರುವ ಮೋಡ (ಮೇಘ ಸಮೂಹ) ವನ್ನು ಕೈಬೀಸಣಿಗೆಯಿಂದ ಓಡಿಸುವನೆಂಬುವನ ಯತ್ನವು ಎಂದಿಗಾದರೂ ಸಾಗೀತೇ ? ಎಂದಿಗೂ ಇಲ್ಲ. ಹಾಗೆ ಸರ್ವಪ್ರಪಂಚವನ್ನು ವ್ಯಾಪಿಸಿಕೊಂಡಿರುವ ಪರಮಾತ್ಮನಿಂದ ಆಗುವ ಕಾರ್ಯವನ್ನು ಇತರರು ಮಾಡಲಾರರು.

ಇಲ್ಲಿ ಮೋಡದಂತೆ ಸರ್ವಜಗತ್ತನ್ನು ಆವರಿಸಿಕೊಂಡಿರುವುದು ತ್ರಿವಿಧಜೀವರ ಪ್ರಾರಬ್ಧ, ಆಗಾಮಿ, ಸಂಚಿತವೆಂಬ ಕರ್ಮಗಳು. ಇವುಗಳನ್ನು ಕಳೆದು ಕೊಳ್ಳುವ ಶಕ್ತಿಯು ಅಸ್ವತಂತ್ರನಾದ ಜೀವಗುಂಟೆ ? ಮಹಾಸಮರ್ಥನಾದ ಪರಮಾತ್ಮನಿಂದಲೇ ಆಗಬೇಕೆಂಬ ತಾತ್ಪರ್ಯ. ಮೇಘದಂತೆ ಜೀವರ ಪ್ರಾರಬ್ಧಾದಿ ಕರ್ಮಗಳು. ಗಾಳಿಯಂತೆ ಪರಮಾತ್ಮನು. ಬೀಸಣಿಕೆಯಿಂದ ಮೋಡವನ್ನು ಓಡಿಸಬೇಕೆಂಬ ಪ್ರಯತ್ನದಂತೆ ಜೀವನ ಕರ್ತೃತ್ವವೆಂದು ತಿಳಿಯ ಬೇಕು. ಶ್ರೀಹರಿಯು ಜೀವರಲ್ಲಿದ್ದು, ಪುಣ್ಯಪಾಪಾದಿ ಕರ್ಮಗಳನ್ನು ಮಾಡಿ, ಮಾಡಿಸಿ, ಅವರವರ ಯೋಗ್ಯತಾನುಸಾರವಾಗಿ, ಫಲವನ್ನು ಅವರಿಗೆ ಉಣಿಸು ವನು. ಇಂತಹ ಮಹಾನುಭಾವನನ್ನು ಜ್ಞಾನಿಗಳು ಭಜಿಸಿ, ಸಂಸಾರದಿಂದ ಮುಕ್ತರಾಗುವರೆಂದು ತಾತ್ಪರ್ಯ. ॥11॥

### 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :-

"ಮೋಡ" ಇತಿ॥ ಮೇಘ। ಜೀವಸ್ಯ ಕರ್ತೃತ್ವಂ ಕಥಮಿತ್ಯತ್ರ ನಿದರ್ಶನ ಮಿದಮ್. ॥11॥

### ಕನ್ನಡಾರ್ಥ

ಜೀವನಿಗೆ ಹೇಗೆ ಕರ್ತೃತ್ವ ? ಎಂಬಲ್ಲಿ ಇದು ಒಂದು ನಿದರ್ಶನ. ॥11॥

### 5. ಶ್ರೀಗುರುಹೃದಯಪ್ರಕಾಶಿಕೆ :-

ತ್ರಿಗುಣಾತ್ಮಕದೇಹ ಇರುವಲ್ಲಿ ಪಾಪ ಇಲ್ಲದ ಹಾಗೆ ನಡೆಯುವುದು ಯಾರಿಂದಲೂ ಆಗುವುದಿಲ್ಲ. ಆದ್ದರಿಂದ ಪ್ರೌಢರು ಸರ್ವಕರ್ಮ ದೇವರಿಗೆ ಒಪ್ಪಿಸಿ ನಿರ್ಮಮರಾಗಿ ಭಕ್ತಿಯಿಂದ ಸಂಸ್ಕೃತಿ ಎಂಬ ಜನನಮರಣ ದಾಟುವ ರೆಂದು ತಿಳಿಸುತ್ತಾರೆ ಸದೃಷ್ಟಾಂತವಾಗಿ. ಮೋಡ ಎಂದು.

ಮೋಡ ಎಂಬ ಮೇಘಕ್ಕೆ ಬೀಸಣಿಗೆಯಿಂದ ಬೀಸಿ ನಿವಾರಣೆ ಮಾಡುವೆ ನೆಂಬುವನ ಪ್ರಯತ್ನ ಕಲ್ಪಾಂತವಾದರೂ ಆಗದೆ ಇರುವ ಹಾಗೆ, ತ್ರಿಗುಣ

ಸಂಬಂಧ ಅನಾದಿಕರ್ಮ ಮೂಲಕವಾಗಿ ಲಕ್ಷ್ಮೀವಲ್ಲಭನಾದ ದೇವರು ಪುಣ್ಯ-ಪಾಪಗಳನ್ನು ಜೀವರಲ್ಲಿದ್ದು ವ್ಯಕ್ತಿಮಾಡಿ, ಮಾಡಿಸಿ ಫಲಗಳನ್ನು ಕೊಡುತ್ತಿರುವಲ್ಲಿ ಪಾಪಕರ್ಮ ಇಲ್ಲದ ಹಾಗೆ ಇರುವುದು ಯಾರಿಂಗೂ ಆಗುವುದಿಲ್ಲ. ಆದ್ದರಿಂದ ಪ್ರೌಢರೆಂಬ ಶಾಸ್ತ್ರಹೃದಯ ಬಲ್ಲವರು ಸರ್ವಕರ್ಮದಲ್ಲೂ ಕರ್ತೃತ್ವಾಭಿಮಾನವಿಲ್ಲದ್ದರಿಂದ ಮಮತೆ ವರ್ಜಿಸಿ ಭಕ್ತಿಯಿಂದ ಸರ್ವಕರ್ಮವೂ ಶ್ರೀಹರಿ ಅಧೀನವೆಂದು ಒಪ್ಪಿಸಿ, ಆ ಸ್ವಾಮಿಯ ಸ್ವಾತಂತ್ರ್ಯವನ್ನೇ ಸ್ಮರಿಸುತ್ತ ಭಜಿಸಿ ಜನನಮರಣರೂಪ ಭವಸಮುದ್ರ ದಾಟುವರು. ॥11॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಪರಮಾತ್ಮನು ಸರ್ವಕರ್ತನು. ಆವನೇ ಸರ್ವತಂತ್ರ ಸ್ವತಂತ್ರನು. ಜೀವರ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಜೀವರೆಲ್ಲರೂ ಪರಾಧೀನ ಕರ್ತೃತ್ವ ಉಳ್ಳವರು. ಈ ತತ್ತ್ವದ ರಹಸ್ಯವನ್ನು ದಾಸಾರ್ಯರು ಸುಂದರವಾದ ಉಪಮಾನದಿಂದ ವಿವರಿಸುತ್ತಾರೆ.

2. ಮಳೆಗಾಲದಲ್ಲಿ ಮೇಘಪಂಕ್ತಿಗಳು ಅಂತರಿಕ್ಷವನ್ನೆಲ್ಲಾ ಆವರಿಸಿಕೊಂಡಿರುವವು. ಅವುಗಳ ಸಂಚಾರಕ್ಕೆ ಬಲವಾದ ಗಾಳಿ ಅತ್ಯಗತ್ಯ. ಗಾಳಿ ಬೀಸದಿದ್ದರೇ ಮೋಡಗಳು ಚಲಿಸಿ, ತದ್ದ್ವಾರಾ ಮಳೆಯಾಗುವುದು ಸಾಧ್ಯವಲ್ಲ.

3. ಒಬ್ಬ ಸಾಮಾನ್ಯ ಮಾನವನು ತನ್ನ ಕೈಯಲ್ಲಿ ಬೀಸಣಿಕೆಯನ್ನು ಹಿಡಿದುಕೊಂಡು ಅದರ ಗಾಳಿಯಿಂದ ಮೋಡಗಳನ್ನು ಓಡಿಸುವೆನೆಂದು ಯತ್ನ ಮಾಡಿದರೆ ಹಾಸ್ಯಾಸ್ಪದವಾಗುವುದು. ಬೀಸಣಿಗೆಯ ಗಾಳಿಯಿಂದ ಮೋಡಗಳನ್ನು ಚಲಿಸುವಂತೆ ಮಾಡಲು ಸಾಧ್ಯವೆ ? ಎಂದೆಂದಿಗೂ ಸಾಧ್ಯವೇ ಇಲ್ಲ. ಆ ಮಾನವನ ಪ್ರಯತ್ನ ಕೇವಲ ವ್ಯರ್ಥವೇ ಸರಿ.

4. ಅದರಂತೆ ಜೀವರನ್ನು ಅನಾದಿಕಾಲದಿಂದ ಬಂಧಿಸಿರುವ ಪ್ರಾರಬ್ಧಕರ್ಮ. ತಜ್ಜನಿತ ಸಂಚಿತ ಆಗಾಮಿಗಳೆಂಬ ಕರ್ಮಾವಳಿಗಳು, ಮೋಡಗಳು ಅಂತರಿಕ್ಷವನ್ನು ಆವರಿಸಿಕೊಂಡಿರುವಂತೆ ಜೀವರಿಗೆ ಹೊಂದಿಕೊಂಡಿರುವವು.

ತನಗೆ ಕರ್ತೃತ್ವಶಕ್ತಿ ಇದೆ. ವಿವೇಚನಾ ಸಾಮರ್ಥ್ಯವಿದೆ ಎಂಬ ಭ್ರಾಂತಿ ಜ್ಞಾನದಿಂದ ಜೀವನು ಅಗಾಧವಾದ ತನ್ನ ಅನಾದಿಕರ್ಮಗಳನ್ನು ಕೇವಲ ತನ್ನ ಪ್ರಯತ್ನದಿಂದ ನಿವಾರಿಸಿಕೊಳ್ಳಲು ಸಾಧ್ಯವೇ ?

5. ಬ್ರಹ್ಮಕಲ್ಪಾಂತ್ಯದವರೆಗೂ ಪ್ರಯತ್ನಿಸಿದರೂ ಸಾಧ್ಯವಾಗದು. ಕರ್ಮಗಳಿಗೆ ಮೂಲಕಾರಣವಾದ ಸತ್ವಾದಿ ಗುಣತ್ರಯಗಳಿಗೆ ಅಭಿಮಾನಿಯಾದ ಶ್ರೀಲಕ್ಷ್ಮೀದೇವಿಯ ರಮಣನು ಜೀವರ ಸ್ಥೂಲದೇಹಗತ ಸಕಲೇಂದ್ರಿಯಗಳಲ್ಲಿ ವ್ಯಾಪ್ತನಾಗಿದ್ದು, ಇಂದ್ರಿಯಗಳ ದ್ವಾರಾ ಪಾಪ-ಪುಣ್ಯಗಳೆಂದ ದ್ವಂದ್ವಕರ್ಮ ಗಳನ್ನು ಮಾಡಿ ಮಾಡಿಸುತ್ತಿರುವನು.

ಸತ್ತ್ವಗುಣದ ಪ್ರಾಚುರ್ಯವು ಪುಣ್ಯಕರ್ಮಗಳಿಗೆ ಕಾರಣವು. ಅಂತೆಯೇ ತಮೋಗುಣದ ಪ್ರಾಚುರ್ಯವು ಪಾಪಕರ್ಮಗಳಿಗೆ ಕಾರಣವು. ರಜೋಗುಣವು ಮಿಶ್ರಕಾರ್ಯಗಳಿಗೆ ಪ್ರೇರಕವು. ಗುಣತ್ರಯಗಳಲ್ಲಿ ಶ್ರೀರಮಾಂತರ್ಗತನಾಗಿ ಶ್ರೀಲಕುಮೀರಮಣನು ಇದ್ದು ಆಯಾಯ ಗುಣಗಳನ್ನು ಪ್ರಚುರಗೊಳಿಸಿ ಬಿಂಬಕ್ರಿಯಾ ದ್ವಾರಾ ದ್ವಂದ್ವಕರ್ಮಗಳನ್ನು ತಾನೇ ಮಾಡುವನು. ತದ್ದ್ವಾರಾ ಪ್ರತಿಬಿಂಬಭೂತರಾದ ಶ್ರೀವಾಯುದೇವರು ಇಂದ್ರಿಯಾಭಿಮಾನಿ ದೇವತೆಗಳು, ಅಸುರರು. ಇವರ ದ್ವಾರಾ ಮಾಡಿಸಿ ಸ್ಥೂಲದೇಹಗತ ಇಂದ್ರಿಯಗಳಲ್ಲಿ ಪ್ರಕಾಶಿತೋವ್ಯಾಪ್ತನಾದ ಜೀವನ ದ್ವಾರಾ ಮಾಡಿ ಮಾಡಿಸುವನು. ಕರ್ಮಜನಿತ ಫಲಗಳನ್ನು ಜೀವರಿಗೆ ಉಣಿಸುವನು.

6. ಜ್ಞಾನಿಗಳು (ಪ್ರೌಢರಾದವರು) ಈ ಕರ್ಮದ ಮರ್ಮವನ್ನು ಅರಿತು, ಸರ್ವಕರ್ಮಕರ್ತನಾದ ಈ ಬಿಂಬನನ್ನು ಭಜಿಸಿ, ತದ್ದ್ವಾರಾ ದುಸ್ತರವಾದ ಸಂಸಾರಸಾಗರವನ್ನು ದಾಟುವರು. ॥11॥

*

## ಪದ್ಯ ೧೨

**ಮೂಲ :-**

**ಕ್ಲೇಶ ಮೋಹಾಜ್ಞಾನ ದೋಷ ವಿ**
**ನಾಶಕ ವಿರಿಂಚಾಂಡದೊಳಗಾ ।**
**ಕಾಶದೋಪಾದಿಯಲಿ ತುಂಬಿಹನೆಲ್ಲ ಕಾಲದಲಿ ॥**
**ಘಾಸಿಗೊಳಿಸದೆ ತನ್ನವರನಾ ।**
**ಯಾಸ ಸಂರಕ್ಷಿಸುವ ಮಹಾಕರು ।**
**ಣಾಸಮುದ್ರ ಪ್ರಸನ್ನವದನಾಂಭೋಜ ನೈ (ಸುರ) ರಾಜ**
**॥ ೧೨ ॥**

**ಅವತರಣಿಕೆ :-**

ಸರ್ವದುರಿತಪರಿಹಾರಕನಾದ. ಸರ್ವತ್ರವ್ಯಾಪ್ತನಾದ, ಭಕ್ತಜನ ಸಂರಕ್ಷಕನಾದ ಶ್ರೀಪರಮಾತ್ಮನ ಮಹಾತ್ಮ್ಯೆಯನ್ನೇ ಮತ್ತೂ ಹೇಳುತ್ತಾರೆ. ॥12॥

**ಪ್ರತಿಪದಾರ್ಥ :-**

**ವಿರಿಂಚಾಂಡದೊಳು** = ಬ್ರಹ್ಮಾಂಡದಲ್ಲಿ, **ಆಕಾಶದೋಪಾದಿಯಲಿ** = ಸರ್ವತ್ರವ್ಯಾಪ್ತವಾಗಿರುವ ಆಕಾಶದಂತೆ, **ಎಲ್ಲ ಕಾಲದಲಿ** = ಸದಾ ಸರ್ವಕಾಲಗಳಲ್ಲಿಯೂ. **ತುಂಬಿಹನು** = ವ್ಯಾಪ್ತನಾಗಿ ಪರಿಪೂರ್ಣ ರೂಪದಿಂದ ಹರಡಿಕೊಂಡಿದ್ದಾನೆ. **ಕ್ಲೇಶ** = ಮನಸ್ಸಿನ ದುಃಖಗಳು, **ಮೋಹ** = ಪ್ರಾಪಂಚಿಕ ವಿಷಯಗಳಲ್ಲಿ ಮೋಹ, **ಅಜ್ಞಾನ** = ಭಗವಂತನನ್ನು ತೋರಗೊಡದ ಜೀವರಿಗೆ ಮುಸುಕಿರುವ ಅಜ್ಞಾನ, **ದೋಷ** = ಇತ್ಯಾದಿ ದೋಷಗಳನ್ನು, **ವಿನಾಶಕ** = ಸಂಪೂರ್ಣವಾಗಿ ನಾಶಮಾಡುವವನು ಶ್ರೀಪರಮಾತ್ಮನು. **ತನ್ನವರನು** = ತನ್ನ ಭಕ್ತರುಗಳನ್ನು, **ಘಾಸಿ**

**ನೋಳಿಸದೆ** = ಬಾಧಕವನ್ನುಂಟುಮಾಡದೆ, **ಅನಾಯಾಸ** = ಶ್ರಮರಹಿತರನ್ನಾಗಿ ಮಾಡಿ, **ಸಂರಕ್ಷಿಸುವ** = ಚೆನ್ನಾಗಿ ಸಲಹುವ, **ಮಹಾಕರುಣಾಕರಸಮುದ್ರ** = ಅತ್ಯಂತ ದಯಾಸಾಗರನಾದ ಶ್ರೀಪರಮಾತ್ಮನು. **ಪ್ರಸನ್ನ** = ಸುಮುಖವಾದ (ಅನುಗ್ರಹಯುಕ್ತವಾದ) **ವದನಾಂಭೋಜ** = ವದನಾರವಿಂದವುಳ್ಳವನು. **ವೈರಾಜ** = ಎಲ್ಲರಿಗೂ ಸರ್ವೋತ್ತಮನಾದ ಶ್ರೀಪರಮಾತ್ಮನು, (**ಸುರರಾಜ** = ದೇವತಾಶ್ರೇಷ್ಠನು ಎಂದು ಪಾಠಾಂತರವಿದೆ.) ॥12॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಶ್ರೀದೇವರ ಮಹಾತ್ಮ್ಯಯನ್ನೇ ಹೇಳುತಾರೆ.

ಬ್ರಹ್ಮಾಂಡದೊಳಃ ಆಕಾಶವು ಹ್ಯಾಂಗೆ ಅಚ್ಛಿದ್ರವಾಗಿ ವ್ಯಾಪ್ತವಾಗಿ ಅದೋ ತದ್ವತ್ ತುಂಬಿಕೊಂಡು ಇರತಕ್ಕವನು ಪರಮಾತ್ಮ. ಈ ಪರಮಾತ್ಮನ್ನ ಹೃದಯಾಕಾಶಗತ ಬಿಂಬನಲ್ಲೂನೂ, ಬಿಂಬನ್ನ ಆಕಾಶವತ್ ವ್ಯಾಪ್ತನಾದ ಪರಮಾತ್ಮನಲ್ಲೂನೂ ಐಕ್ಯಚಿಂತಿಸಿ ನಿಷ್ಕಾಮರಾಗಿ ಆಹಿಂಪಾಮಾತಾದಿಗಳ ಕೈಜಿಸಿ, ಸದಾ ಸರ್ವಕಾಲದಲ್ಲಿ ಭಜಿಸಿದವರಿಗೆ ಮನಃಕ್ಲೇಶವೇನು, ಪ್ರಾಕೃತ ವಿಷಯಾದಿಗಳಲ್ಲಿ ಮೋಹವೇನು. ಅಜ್ಞಾನವೇನು ಇತ್ಯಾದಿ ಪ್ರಬಲಪಾಪಗಳ ಮಾಡೋದಕ್ಕೆ ಕಾರಣವಾದ ದೋಷಗಳ ನಾಶಮಾಡೋವನಾಗತಾನೆ. ಪೂರ್ವೋಕ್ತಪ್ರಕಾರ ತನ್ನ ಭಕ್ತರ, ಸರ್ವೋತ್ತಮನಾದ ಅಂತಃಕರಣನಿಧಿಯಾದ ಎಂದರೆ, ಭಕ್ತರು ಅನಾದಿಕರ್ಮವನ್ನನುಸರಿಸಿ ಬಹುಪಾಪಗಳ ಮಾಡಿದ ಕಾಲಕ್ಕೂ ಅದನ್ನ ಗಣನಿ ಮಾಡೋದಿಲ್ಲ. ಆದ್ದರಿಂದ ದಯಾಸಮುದ್ರನಾದ, ಸುಮುಖವಾದ ವದನವೆಂಬ ಕಮಲವುಳ್ಳವ ಎಂದರೆ, ಭಕ್ತರಿಗೆ ಸುಮುಖನಾಗಿ ಇರತಕ್ಕವ ದೇವತಾಶ್ರೇಷ್ಠನಾದವ, ಇಂಥಾ ಪರಮಾತ್ಮ ತನ್ನವರನ್ನ ಆಯಾಸಗೊಳಿಸದೆ, ಆಯಾಸರಹಿತರನ್ನಾಗಿ ಮಾಡಿ ಚಂದಾಗಿ ಸಂರಕ್ಷಣ ಮಾಡತಾನೆ. ಸಂಸಾರಸಂಬಂಧ ಆಯಾಸವಿಲ್ಲದೆ ಸಂಸಾರದಲ್ಲಿ ಇದ್ದ ಕಾಲಕ್ಕೂ ನಿರ್ಲಿಪ್ತರನ್ನಾಗಿ ಮಾಡಿ ರಕ್ಷಿಸತಾನೆಂತ ತಾತ್ಪರ್ಯ. ॥12॥

2. ಭಾವಪ್ರಕಾಶಿಕೆ :-

ಕ್ಲೇಶ, ಮೋಹ, ಅಜ್ಞಾನ ಇವೇ ಮೊದಲಾದ ದೋಷಗಳನ್ನು ನಾಶ ಮಾಡುವವನು. ಬ್ರಹ್ಮಾಂಡದಲ್ಲಿ ಆಕಾಶದೋಪಾದಿಯಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ವ್ಯಾಪಿಸಿಕೊಂಡಿರುವವನು. ಮಹಾ ಕರುಣಾ ಸಮುದ್ರನು. ಪ್ರಸನ್ನವಾದ ಮುಖಕಮಲವುಳ್ಳವನು. ವಿರಾಟ್ ಎಂಬ ಬ್ರಹ್ಮಾಂಡವು ಪರಮಾತ್ಮನಿಗೆ ಪ್ರತಿಮಾಸ್ಥಾನೀಯವಾಗಿರುವುದರಿಂದ "ವೈರಾಜ"ನೆಂಬ ಹೆಸರುಳ್ಳವನು. ಇಂತಹ ಶ್ರೀಹರಿಯು ತನ್ನವರನ್ನು ಕಷ್ಟಪಡಿಸದೆ, ಆಯಾಸವಿಲ್ಲದೆ, ಚೆನ್ನಾಗಿ ಪಾಲಿಸುವನು. ॥12॥

4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :-

"ಕ್ಲೇಶ" ಇತಿ. ॥12॥

## ಕನ್ನಡಾರ್ಥ

ತನ್ನವರನ್ನು ಅನಾಯಸದಿಂದ ಸಲಹುವ ಶ್ರೀಹರಿಯ ಕರುಣಾನುಭಾವವನ್ನು ಈ ಪದ್ಯದಿಂದ ಹೇಳುತ್ತಾರೆ. ॥12॥

5. ಶ್ರೀಗುರುಹೃದಯಪ್ರಕಾಶಿಕೆ :

ಭಕ್ತರ ಪಾಪಪರಿಹಾರಕನಾದ ಶ್ರೀಹರಿಗೆ ಇವರು ಒಪ್ಪಿಸಿದ ಪಾಪಬಾಧೆ, ಸೂರ್ಯನಿಗೆ ಕತ್ತಲೆಯಂತೆ ಎಂದಿಗೂ ಇಲ್ಲವೆಂದು ತಿಳಿಸಿ ದೇವರನ್ನು ಸ್ತುತಿಸುತ್ತಾರೆ, ಕ್ಲೇಶ ಎಂದು.

ಕ್ಲೇಶ ಎಂಬ ದುಃಖ, ಮೋಹವೆಂಬ ಮಿಥ್ಯಾಜ್ಞಾನ, ಜ್ಞಾನಪ್ರತಿಬಂಧಕ ಅಜ್ಞಾನವೆಂಬ ಮರೆವು ಮೊದಲಾದ ದೋಷವನ್ನು ಭಕ್ತರಿಗೆ ಪರಿಹರಿಸುವ ದೇವರು, ವಿರಿಂಚಾಂಡವೆಂಬ ಬ್ರಹ್ಮಾಂಡದಲ್ಲಿ ಆಕಾಶದಂತೆ ನಿರ್ಲೇಪನಾಗಿ ಸದಾ ತುಂಬಿ ಇರುವನು. ಇತರ ಮಮತೆ ಬಿಟ್ಟು ತನ್ನವರಾದ ಭಕ್ತರನ್ನು

ಘಾಸಿಯೆಂಬ ಪೀಡೆಯನ್ನು ಕೊಡದೆ, ಅನಾಯಾಸವಾಗಿ ಸಂರಕ್ಷಿಸುವ ಮಹಾ ಕರುಣಾಸಮುದ್ರನು. ಪ್ರಸನ್ನ ಮುಖಾಬ್ಜನು, ದೇವೋತ್ತಮನು. ॥12॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ದೇಹಾದ್ಯುಪದ್ರವಗಳಿಂದ ಉಂಟಾಗುವ ಬಾಧೆ-ತಜ್ಜನಿತ ದುಃಖ. ಮಾನಸಿಕ ದುಃಖಾದಿಗಳು. ಇತ್ಯಾದಿ ದೋಷವೆಲ್ಲವೂ ಕ್ಲೇಶವೆನಿಸುವುವು.

2. ಪತ್ನೀಪುತ್ರರು, ಸಂಪಾದಿಸುವ ದ್ರವ್ಯ, ಆಸ್ತಿಪಾಸ್ತಿಗಳು, ಬಂಧು-ಬಾಂಧವರು, ಮಿತ್ರರು ಇವೇ ಮುಂತಾದ ಅಸಿತ್ಯ ವಸ್ತುಗಳಲ್ಲಿರುವ ಮಮತೆ, ಹುಟ್ಟಾಗಿ ದೇಹಾಭಿಮಾನ ಇವೆಲ್ಲವೂ ಮೋಹಗಳು.

3. ಸಮೀಚೀನವಾದ ಜ್ಞಾನವನ್ನು ಮರೆಮಾಚಿ, ಭಗವತ್ಸಂಬಂಧ ವಾದ ವಿಷಯಗಳನ್ನು ಆಚ್ಛಾದಿಸಿರುವುದು ಅಜ್ಞಾನವು.

4. ಕ್ಲೇಶ ಮೋಹ ಅಜ್ಞಾನ ಇತ್ಯಾದಿ ದೋಷಗಳನ್ನು ಬೇರೂರಿಸಿ ಕಿತ್ತುಹಾಕಿ, ನಿವಾರಿಸುವ ಶಕ್ತಿ ಶ್ರೀಪರಮಾತ್ಮನಿಗೆ ಮಾತ್ರ ಇರುವುದು.

5. ಸಮಸ್ತ ದೋಷ ವಿನಾಶಕನಾದ ಸರ್ವೇಶ್ವರನು ಈ ಬ್ರಹ್ಮಾಂಡ ದಲ್ಲಿ ಆಕಾಶದಂತೆ ಎಲ್ಲೆಲ್ಲೂ ವ್ಯಾಪಿಸಿರುವನು. ಸೂಕ್ಷ್ಮಸೃಷ್ಟಿಯಲ್ಲಿ ಶ್ರೀವಾಸು ದೇವನಿಂದ ಮಾಯಾನಾಮಕ ಶ್ರೀಲಕ್ಷ್ಮೀದೇವಿಯಲ್ಲಿ ಸೃಷ್ಟರಾದ ಜ್ಯೇಷ್ಠ ಪುತ್ರರೇ ಪುರುಷನಾಮಕ ವಿರಿಂಚಿಯು. ಆ ವಿರಿಂಚಿನಾಮಕರೇ ಶ್ರೀಬ್ರಹ್ಮ ದೇವರು. ಅಂದರೆ, ವಿರಿಂಚಾಂಡ ಎಂದರೆ ಬ್ರಹ್ಮಾಂಡ ಎಂದರ್ಥ. ಆಕಾಶವು ಸರ್ವತ್ರ ವ್ಯಾಪ್ತವಾಗಿದೆ. ಆಕಾಶಸದೃಶನಾಗಿ ಅನಂತನಾಮಕ ಶ್ರೀಪರಮಾತ್ಮನು ಸರ್ವತ್ರ ಅಣುರೇಣುತೃಣಕಾಷ್ಠಾದಿಗಳಲ್ಲಿ ಪರಿಪೂರ್ಣವಾಗಿ ವ್ಯಾಪ್ತನಾಗಿರು ವನು. ಅವನಿಲ್ಲದ ಸ್ಥಳವೇ ಇಲ್ಲ. ಸರ್ವ ದೇಶ, ಕಾಲ ಅವನೇಗಳಲ್ಲಿ ಪೂರ್ಣವ್ಯಾಪ್ತನು.

6. ಅಂತಹ ಸರ್ವತ್ರ ವ್ಯಾಪ್ತನಾದ ಶ್ರೀಪರಮಾತ್ಮನು ತನ್ನನ್ನೇ ನಂಬಿ, ಶರಣುಬಂದ ಭಕ್ತರಿಗೆ ಯಾವ ರೀತಿಯ ಬಾಧಕವಾಗದಂತೆ, ಅನಾಯಸ ದಿಂದ ಸಂರಕ್ಷಿಸುವನು. ಸೃಷ್ಟ್ಯಾದಿ ಸಕಲ ಜಗದ್ವ್ಯಾಪಾರಗಳನ್ನು ಸರ್ವಶಕ್ತ ನಾದ ಸರ್ವೇಶ್ವರನು ನಿರಾಯಾಸವಾಗಿ ನಿರ್ವಹಿಸುತ್ತಿರುವನು. ಅಂತೆಯೇ, ತನ್ನ ಭಕ್ತರಿಗೂ ಸಹ ಶ್ರಮವನ್ನು ಕೊಡದೇ ಪಾಲಿಸುವನು.

7. ಆ ಕಮಲನಾಭನು ಪರಮ ಕರುಣಾಸಾಗರನು. ಸದಾ ಪ್ರಸನ್ನ ವಾಗಿರುವ ಮುಖ ಕಮಲವುಳ್ಳವನು. ತನ್ನ ಭಕ್ತರಿಗೆ ಸದಾ ಸುಪ್ರಸನ್ನನು (ಸುಮುಖನು)

8. ಅಂತಹ ವಿರಾಡ್ರೂಪಿಯು ದೇವತಾಶ್ರೇಷ್ಠನು ಮತ್ತು ಸರ್ವೋಚ್ಚನು. (ವೈರಾಜ) ‖12‖

## ಪದ್ಯ ೧೩

ಮೂಲ :

ಕನ್ನಡಿಯು ಕೈಪಿಡಿದು ನೋಳ್ಪನ ।
ಕಣ್ಣುಗಳು ಕಂಡಲ್ಲಿ ಎರಗದೆ ।
ತನ್ನವೋಲ್ ಪ್ರತಿಬಿಂಬ ಕಾಂಬುವ ದರ್ಪಣವ ಬಿಟ್ಟು ॥
ಧನ್ಯರಿಕೆಯೊಳಗೆಲ್ಲ ಕಡೆಯಲಿ ।
ನಿನ್ನ ರೂಪವ ನೋಡಿ ಸುಖಿಸುತ ।
ಸನ್ನುತಿಸುತಾನಂದವಾರಿಧಿಯೊಳಗೆ ಮುಳುಗಿಹರು ॥ ॥೧೩॥

**ಅವತರಣಿಕೆ :–**

ಸರ್ವತ್ರ ಭಗವದ್ರೂಪಗಳನ್ನು ಚಿಂತಿಸುತ್ತಾ ಸುಖಿಸುವ ಭಗವದ್ಭಕ್ತ ರನ್ನು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ. ॥13॥

**ಪ್ರತಿಪದಾರ್ಥ :–**

**ಕನ್ನಡಿಯನು ಕೈಪಿಡಿದು** ಕನ್ನಡಿಯನ್ನು ಕೈಯಲ್ಲಿ ಹಿಡಿದಿರುವವನ, **ನೋಳ್ಪನ** = ದರ್ಪಣದಲ್ಲಿ ಮೂಡಿದ ತನ್ನ ಪ್ರತಿಬಿಂಬವನ್ನು ನೋಡುವವನ, **ಕಣ್ಣುಗಳು** = ನೇತ್ರದ್ವಯಗಳು, **ಕಂಡಲ್ಲಿ ಎರಗದೆ** = ಬೇರೆ ಕಡೆಗೆ ನೋಡದೆ. **ದರ್ಪಣವ ಬಿಟ್ಟು** = ತನ್ನ ಪ್ರತಿಬಿಂಬವನ್ನು ಪ್ರತಿಫಲಿಸುವ ಕನ್ನಡಿಯನ್ನು ಬಿಟ್ಟು, ಅನ್ಯತ್ರ ವೀಕ್ಷಿಸದೆ, **ತನ್ನವೋಲ್** = ತನಗೆ ಸದೃಶ ವಾಗಿರುವ, **ಪ್ರತಿಬಿಂಬ ಕಾಣುವ** = ಪ್ರತಿಬಿಂಬವನ್ನು ಕಾಣುತ್ತಾನೆ, **ಇಳೆಯೊಳಗೆ** – ತದ್ವತ್ ಈ ಭೂಮಂಡಲದಲ್ಲಿ, **ಎಲ್ಲ ಕಡೆಯಲಿ** = ಸರ್ವತ್ರ, **ನಿನ್ನ ರೂಪವ ನೋಡಿ** = ವ್ಯಾಪ್ತವಾಗಿರುವ ಶ್ರೀಪರಮಾತ್ಮನ ರೂಪಗಳನ್ನು ನೋಡಿ, **ಸುಖಿಸುತ** = ಆನಂದಿಸುತ್ತಾ, **ಸನ್ನುತಿಸುತ** = ಚೆಂದಾಗಿ ಸ್ತೋತ್ರಗಳನ್ನು ಮಾಡುತ್ತಾ, **ಆನಂದವಾರಿಧಿಯೊಳಗೆ** = ಸಂತೋಷಸಮುದ್ರದಲ್ಲಿ, **ಮುಳುಗಿಹರು** = ಮುಳುಗಿಹರು. **ಧನ್ಯರು** = ಅವರೆಂತಹ ಧನ್ಯರು ! ॥13॥

## ವ್ಯಾಖ್ಯಾನಗಳು

1. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :**

ಶ್ರೀಪರಮಾತ್ಮನ ಭಜಿಸಬೇಕು ಎಂತ ಹೇಳಿತಾರೆ.

ದೃಷ್ಟಾಂತ–ದರ್ಪಣವನ್ನು ಕೈಯಲ್ಲಿ ಧರಿಸಿದ ಪುರುಷನಾದವ ದರ್ಪಣ ವನ್ನು ನೋಡೋವನಾಗತಾನೆ. ಆ ನೋಡತಕ್ಕವನ ನೇತ್ರಗಳು, ದರ್ಪಣದಲ್ಲಿ

ಲಕ್ಷ್ಯ ಇಡದೆ ಬಿಟ್ಟವನಾಗಿ, ದರ್ಪಣದಲ್ಲಿ ತನ್ನೋಪಾದಿಯಲ್ಲಿ ಕಾಣತಕ್ಕ ಪ್ರತಿಬಿಂಬವನ್ನು ಮನೋನೇತ್ರಗಳು ಕಂಡ ಕಡೆ ಸಂಚಾರ ಮಾಡದಂತೆ ಮಾಡಿ, ದರ್ಪಣಗತ ತನ್ನ ಪ್ರತಿಬಿಂಬ ಕಾಣೋವನಾಗತಾನೆ. ತದ್ವತ್ ಶ್ರೀಪರಮಾತ್ಮನ ಅಪರೋಕ್ಷದಿಂದ ನೋಡಿದವರು ಭೂಮಿಯೊಳಗೆ. ದರ್ಪಣಕ್ಕೆ ಸದೃಶವಾದ ಸರ್ವಾಧಿಷ್ಠಾನದಲ್ಲಿ ವಿದ್ಯಮಾನಗಳಾದ ಶ್ರೀಪರಮಾತ್ಮನಾದ ನಿನ್ನ ರೂಪವನ್ನ ಅಧಿಷ್ಠಾನಗಳ ತ್ಯಜಿಸಿ ದರ್ಪಣಗತ ಪ್ರತಿಬಿಂಬವನ್ನ ನೋಡಿದೋಪಾದಿಯಲ್ಲಿ ಅಚಲದಿಂದ ನೋಡಿ, ಅದರಿಂದ ಜನಿತವಾದ ಆನಂದದಿಂದ ಸುಖಿಸತಾ, ಚೆಂದಾಗಿ ಸ್ತೋತ್ರಾದಿಗಳನ್ನು ಮಾಡತಾ ಸಂತೋಷಸಮುದ್ರದಲ್ಲಿ ಮುಳುಗಿ ಇರೋವರಾಗಿದ್ದಾರೆಂತ ತಾತ್ಪರ್ಯ. ||13||

**2. ಭಾವಪ್ರಕಾಶಿಕೆ :–**

ಕೈಯಲ್ಲಿ ಕನ್ನಡಿಯನ್ನು ಹಿಡಿದು ನೋಡಿಕೊಂಡರೆ, ನಮ್ಮ ಕಣ್ಣುಗಳು ಕಂಡಲ್ಲಿ ಹೋಗದೆ, ಅದರಲ್ಲಿ ಕಾಣುವ ನಮ್ಮ ಪ್ರತಿಬಿಂಬದ ಮೇಲೆಯೇ ಇರುವುದು. ಹೀಗೆ ನಾವು ಸಾಧಾರಣ ಜನರು ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವನ್ನು ನೋಡಿ ಸುಖಿಸುವೆವು. ನಿನ್ನ ಏಕಾಂತ ಭಕ್ತರು, ಕನ್ನಡಿ ಇಲ್ಲದೆ ಸರ್ವತ್ರ ವ್ಯಾಪ್ತನಾದ ಬಿಂಬರೂಪಿಯಾದ ನಿನ್ನ ರೂಪವನ್ನು ಬೇಕಾದಲ್ಲಿ ನೋಡಿ, ಸಂತೋಷ ಪಡುತ್ತಾ, ಸ್ತೋತ್ರ ಮಾಡುತ್ತಾ, ಆನಂದ ಸಮುದ್ರದಲ್ಲಿ ಮುಳುಗಿರುವರು. ಆಹಾ! ಅವರು ಎಂತಹ ಧನ್ಯರು! ||13||

**4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :–**

"ಕನ್ನಡಿ" ಇತಿ॥ ಕಾಂಬುವಂತೇ ||13||

### ಕನ್ನಡಾರ್ಥ

ಇಲಿ "ಪ್ರತಿಬಿಂಬವನ ಕಾಂಬುವಂತ" ಎಂಬ ಉಪಮೇಯವನ್ನು ತಿಳಿಯ ಬೇಕು. ಏಕೆಂದರೆ ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡುವವರಿಗೂ, ಎಲ್ಲ

ಕಡೆಗಳಲ್ಲಿ ಭಗವಂತನ ರೂಪವನ್ನು ನೋಡುವವರಿಗೂ ದೃಷ್ಟಾಂತ ದಾರ್ಷ್ಟಾಂತಿಕ ಭಾವ (ವಿಲ್ಲ) ಇಲ್ಲಿರುತ್ತದೆ. ॥13॥

## ಶ್ರೀ. ಶ್ರೀಗುರುಹೃದಯಪ್ರಕಾಶಿಕೆ :–

ಜೀವಾದ್ಯಧಿಷ್ಠಾನ ಬಿಟ್ಟು ದೇವರನ್ನೇ ನೋಡುವ ಜ್ಞಾನಿಗಳ ನಡತೆ ದೃಷ್ಟಾಂತದಿಂದ ತಿಳಿಸುತ್ತಾರೆ, ಕನ್ನಡಿಯೆಂದು.

ಕನ್ನಡಿಯನ್ನು ನೋಡುವ ಜನರ ಕಣ್ಣುಗಳು ದರ್ಪಣವೆಂಬ ಕನ್ನಡಿಯನ್ನು ಬಿಟ್ಟು ಅಂದರೆ ಕನ್ನಡಿಯನ್ನೇ ನೋಡದೆ ತಮ್ಮ ಪ್ರತಿಬಿಂಬವನ್ನೇ ನೋಡಿ ಸಂತೋಷಿಸುವಂತೆ, ಧನ್ಯರೆಂಬ ಕೃತಕೃತ್ಯರಾದ ಜ್ಞಾನಿಗಳು ಈ ಭೂಮಿಯಲ್ಲಿ ನೋಡಿದ ಎಲ್ಲಾ ಕಡೆಯಲ್ಲೂ ಅಧಿಷ್ಠಾನದಲ್ಲಿ ದೃಷ್ಟಿ ಇಡದೆ, ಅಲ್ಲಿರುವ ನಿನ್ನ ರೂಪವನ್ನೇ ನೋಡುತ್ತಾ, ಸ್ತುತಿಸುತ್ತಾ ಆನಂದ ಸಮುದ್ರ ಮಗ್ನರಾಗುವರು. ॥13॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಕನ್ನಡಿಯಲ್ಲಿ ನೋಡಿಕೊಂಡಾಗ, ನಮ್ಮ ಪ್ರತಿಬಿಂಬವು ದರ್ಪಣದಲ್ಲಿ ಮೂಡುವುದು. ಆ ಪ್ರತಿಬಿಂಬವು ನಮ್ಮಂತೆ ಸದೃಶವಾಗಿರುವುದು. ಸಾದೃಶ್ಯ ಭಾವವೇ ಬಿಂಬ-ಪ್ರತಿಬಿಂಬಗಳಿಗಿರುವ ಪರಸ್ಪರ ಸಂಬಂಧವು.

2. ದರ್ಪಣದಲ್ಲಿಯೇ ನಮ್ಮ ನೇತ್ರಗಳನ್ನು ನೆಟ್ಟು ನೋಡಿದಾಗ, ಪ್ರತಿಬಿಂಬವು ಸ್ಪಷ್ಟವಾಗಿ ಕಾಣಿಸುವುದು. ಅನ್ಯತ್ರ ನೋಡಿದರೆ ಪ್ರತಿಬಿಂಬವು ಕಾಣಿಸುವುದಿಲ್ಲ. ದರ್ಪಣದಲ್ಲಿ ಲಕ್ಷ್ಯವಿಟ್ಟರೆ, ದರ್ಪಣಗತ ತನ್ನ ಪ್ರತಿಬಿಂಬವನ್ನು ನೋಡಿ ಸಂತೋಷಪಡುತ್ತೇವೆ.

3. ಅಂತೆಯೇ ಜಗದ್ಭರಿತನಾದ ಸರ್ವತ್ರ ವ್ಯಾಪ್ತನಾದ ಭಗವದ್ರೂಪವನ್ನು ನೋಡಿ, ಸುಖಿಸುವವರು ಅದೆಂತಹ ಧನ್ಯರೋ!– ಎಂದು

ಉದ್ಗಾರ ತೆಗೆದಿದ್ದಾರೆ ದಾಸಾರ್ಯರು. ಈ ಭಾವವನ್ನೇ ದಾಸರಾಯರು "ಕಂಡಕಂಡಲ್ಲಿ ವಿಶ್ವರೂಪ ಕಾಂಬೊರೋ" ಎಂದಿದ್ದಾರೆ. ಹಾಗೆ ಸರ್ವತ್ರ ವ್ಯಾಪ್ತವಾದ ಭಗವದ್ರೂಪಗಳನ್ನು ತಮ್ಮ ಅಂತರಂಗದಲ್ಲಿ ನಿಲ್ಲಿಸಿಕೊಂಡು ನಿಶ್ಚಲಚಿತ್ತದಿಂದ ನೋಡಿ ಸುಖಿಸುವರು ವ್ಯಾಪ್ತ್ಯೋಪಾಸಕರು.

4. ಅಂತಹ ಪರಮಭಗವದ್ಭಕ್ತರು ಆ ಭಗವದ್ರೂಪಗಳ ಗುಣಗಳನ್ನು ಭಕ್ತಿಭಾವದಿಂದ ಕೊಂಡಾಡುತ್ತಿರುವರು. ಅದರಿಂದುಂಟಾದ ಸುಖವೆಂಬ ಸಮುದ್ರದಲ್ಲಿ ಮುಳುಗಿ. ಭಗವಂತನ ಗುಣಗಾನಗಳಲ್ಲಿಯೇ ತಲ್ಲೀನರಾಗಿ ಬಿಡುತ್ತಾರೆ.

5. ಪ್ರತಿಬಿಂಬದ ಸ್ಪಷ್ಟತೆ, ದರ್ಪಣದಲ್ಲಿ ನಾವು ಇಡುವ ಏಕಾಗ್ರಚಿತ್ತ ರೂಪವಾದ ಲಕ್ಷ್ಯವಿದ್ದಂತೆ, ಸರ್ವಾಧಿಷ್ಠಾನಗಳಲ್ಲಿ ಇರತಕ್ಕ ಶ್ರೀಪರಮಾತ್ಮನ ವ್ಯಾಪ್ತರೂಪಗಳನ್ನು ನಿಶ್ಚಲಚಿತ್ತದಿಂದ ಧ್ಯಾನಿಸಿ. ನೋಡಿ, ಸುಖಿಸ ಬೇಕೆಂದು ತಾತ್ಪರ್ಯ. ||13||

## ಪದ್ಯ ೧೪

ಮೂಲ :

ಅನ್ನಮಾನಿ ಶಶಾಂಕನೊಳು ಕಾ|
ರುಣ್ಯಸಾಗರ ಕೇಶವನು ಪರ|
ಮಾನ್ನದೊಳು ಭಾರತಿಯು ನಾರಾಯಣನು ಭಕ್ಷ್ಯದೊಳು||
ಸೊನ್ನಗಳಿತನು ಮಾಧವನು ಶ್ರುತಿ|
ಸನ್ನುತ ಶ್ರೀಲಕ್ಷ್ಮೀ ಘೃತದೊಳು|
ಮಾನ್ಯ ಗೋವಿಂದಾಭಿಧನು ಇರುತಿಪ್ಪನೆಂದೆಂದು || ೧೪ ||

**ಅವತರಣಿಕೆ :-**

ನೈವೇದ್ಯ ಸಮರ್ಪಣಕ್ರಮವನ್ನು ಮತ್ತು ಪದಾರ್ಥಾಂತರ್ಗತ ಭಗವದ್ರೂಪಗಳ ಅನುಸಂಧಾನವಿಧಾನವನ್ನು ತಿಳಿಸುತ್ತಾರೆ. ॥14॥

**ಪ್ರತಿಪದಾರ್ಥ :-**

**ಅನ್ನಮಾನಿ** = ಅನ್ನಕ್ಕೆ ಅಭಿಮಾನಿಯಾದ, **ಶಶಾಂಕನೊಳು** = ಚಂದ್ರಾಂತರ್ಗತನಾದ, **ಕಾರುಣ್ಯಸಾಗರ** = ದಯಾಸಮುದ್ರನಾದ, **ಕೇಶವನು** = ಕೇಶವನಾಮಕ ಶ್ರೀಪರಮಾತ್ಮನೆಂದು ತಾತ್ಪರ್ಯ, **ಪರಮಾನ್ನದೊಳು** = ಪಾಯಸದಲ್ಲಿ, **ಭಾರತಿಯು** = ಭಾರತೀದೇವಿಯರು, **ನಾರಾಯಣನು** = ಭಾರತಿಯ ಅಂತರ್ಗತನಾದ ಶ್ರೀಹನ್ನಾರಾಯಣನು, **ಭಕ್ಷ್ಯದೊಳು** = ನಾನಾವಿಧಗಳಾದ ಭಕ್ಷ್ಯಗಳಲ್ಲಿ, **ಸೂನ್ನಗದಿರನು** = ಭಂಗಾರೋಪಾದಿಯಲ್ಲಿ ಕಾಂತಿಯುಕ್ತರಾದ ಸೂರ್ಯದೇವರು, **ಮಾಧವನು** = ಸೂರ್ಯಾಂತರ್ಗತನಾಗಿ ಮಾಧವನಾಮಕನು, **ಶ್ರುತಿಸನ್ನುತ** = ವೇದಗಳಿಂದ ಚೆನ್ನಾಗಿ ಸ್ತುತ್ಯರಾದ, **ಶ್ರೀಲಕ್ಷ್ಮೀ** = ಕಾಂತಿಸಂಪನ್ನರಾದ ಶ್ರೀಲಕ್ಷ್ಮೀದೇವಿಯರು, **ಘೃತದೊಳು** = ತುಪ್ಪದಲ್ಲಿ ಅಭಿಮಾನಿಗಳಾಗಿದ್ದಾರೆ. **ಮಾನ್ಯಗೋವಿಂದ** = ಲಕ್ಷ್ಮ್ಯಂತರ್ಗತನಾಗಿ ಪೂಜ್ಯನಾದ ಗೋವಿಂದ ನಾಮಕ ಶ್ರೀಪರಮಾತ್ಮ, **ಅಭಿಧನು** = ಆಯಾಯ ನಾಮಗಳಿಂದ, **ಎಂದೆಂದು** = ಯಾವಾಗಲೂ, **ಇರುತಿಪ್ಪನು** = ಶ್ರೀಪರಮಾತ್ಮನು ಸ್ಥಿತನಾಗಿದ್ದಾನೆಂದು ತಾತ್ಪರ್ಯ. ॥14॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಇದು ಪರಿಯಂತ ಪರಮಾತ್ಮನ ಮಾಹಾತ್ಮ್ಯ ಹೇಳಿ ಇನ್ನುಮ್ಯಾಲೆ ನೈವೇದ್ಯ ಸಮರ್ಪಣಕ್ರಮವನ್ನೂ, ಪದಾರ್ಥಾಂತರ್ಗತ ದೇವತಾನುಸಂಧಾನ ಕ್ರಮವನ್ನೂ ನಿರೂಪಿಸುತ್ತಾರೆ.

ಅನ್ನಾಭಿಮಾನಿಯಾದವರು ಚಂದ್ರದೇವರು. ಈ ಚಂದ್ರದೇವರಂತ ರ್ಗತನಾದ ಕರುಣಾಸಮುದ್ರನಾದ ಕೇಶವಮೂರ್ತಿ ಎಂತ ತಾತ್ಪರ್ಯ. ಪಾಯಸದಲ್ಲಿ ಭಾರತೀದೇವೇರು, ಇವರಂತರ್ಗತ ನಾರಾಯಣದೇವರು. ಭಕ್ಷ್ಯಗಳಲ್ಲಿ ಬಂಗಾರದೋಪಾದಿಯಲ್ಲಿ ಕಾಂತಿಯುಕ್ತರಾದ ಸೂರ್ಯದೇವರು. ಇವರಂತರ್ಗತದಲ್ಲಿ ಮಾಧವರೂಪಿ ಪರಮಾತ್ಮ. ಅಕ್ಷರರೆಂದು ವೇದಶ್ರುತಿ ಗಳಿಂದ ಚಂದಾಗಿ ಸ್ತುತ್ಯರಾದ ಕಾಂತಿಸಂಪನ್ನರಾದ ಲಕ್ಷ್ಮೀದೇವೇರು ತುಪ್ಪ ದೊಳು ಅಭಿಮಾನಿಯಾಗಿ ಇರತಾರೆ. ಇವರ ಅಂತರ್ಗತನಾದ ಶ್ರೀಗೋವಿಂದ ಮೂರ್ತಿ ಭಕ್ತರಿಂದ ಮಾನ್ಯನಾದವನು ಎಂತ ತಾತ್ಪರ್ಯ. ಆಯಾ ಪದಾರ್ಥ ಗಳಲ್ಲಿ ಆಯಾ ನಾಮಗಳಿಂದ ಕರಸತ ಶ್ರೀಪರಮಾತ್ಮ ಇರೋವನಾಗಿದ್ದಾನೆ. ಎಂದೆಂದಿಗೂ ಈ ಪದಾರ್ಥಗಳಿಗೆ ಇವರೆ ಅಭಿಮಾನಿಗಳೆಂದು ತಾತ್ಪರ್ಯ. ॥14॥

## 2. ಭಾವಪ್ರಕಾಶಿಕೆ :-

ಅನ್ನಾಭಿಮಾನಿಯು ಚಂದ್ರನು. ಅವನಲ್ಲಿ ಕೇಶವಮೂರ್ತಿಯನ್ನು ಚಿಂತಿಸಬೇಕು. ಪರಮಾನ್ನಾಭಿಮಾನಿಯು ಭಾರತೀದೇವಿಯರು. ಅವರಲ್ಲಿ ನಾರಾಯಣಮೂರ್ತಿಯನ್ನು ಚಿಂತಿಸಬೇಕು. ಭಕ್ಷ್ಯಾಭಿಮಾನಿಯು ಸೂರ್ಯನು ಅವನಲ್ಲ ಮಾಧವಮೂರ್ತಿಯನ್ನು ಚಿಂತಿಸಬೇಕು, ತುಪ್ಪಕ್ಕೆ ಅಭಿಮಾನಿಯು ಶ್ರೀಲಕ್ಷ್ಮೀದೇವಿ. ಅವರಲ್ಲಿ ಗೋವಿಂದಮೂರ್ತಿಯನ್ನು ಚಿಂತಿಸಬೇಕು.

"ಅನ್ನಾಭಿಮಾನೀ ಚಂದ್ರಸ್ತು ವಿಚಿಂತ್ಯ ಸ್ತತ್ರ ಕೇಶವಃ" **ಸತ್ತತ್ತ್ವರತ್ನಮಾಲಾ ಪ್ರಮಾಣ. ॥14॥**

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ ;

ಪಂಚರಾತ್ರ ವಿವಕ್ಷಯಾ ಆಹ 'ಅನ್ನ' ಇತಿ। ಅನ್ನಾಭಿಮಾನೀ ಚಂದ್ರಸ್ತು ವಿಚಿಂತ್ಯಃ ತತ್ರ ಕೇಶವಃ॥ ಭಾರತೀ ಪರಮಾನ್ನಸ್ಥಾ ದೇವಃ ನಾರಾಯಣಃ ಪ್ರಭುಃ॥ ಭಕ್ಷ್ಯೇಷು ಸೂರ್ಯೋಧಿಷ್ಠಾತಾ ವಿಚಿಂತ್ಯ: ತತ್ರ ಮಾಧವಃ॥೬೦॥ ಅನ್ನಾಯನ್ನಾಮವಿನಾಃ ಘೃತ ಮಾಮಾಯಾಃ ಅತ್ಸೂರ್ಯಂ ಜನಯನ್

ದ್ಯಾಮಬಹಾಸಂ ತಾದೀತ್ಯಾಶತ್ರುಃ ನಕಿಲಾವಿವತ್ಕೇ॥ x ಓox (ಅಹನ್) ಮಾಙ್ಞಾನವರ್। ತತ್ಕರಣಮಾಚಾರ್ಯಾದಿ ವಾ ತತ್ಪ್ರತಿಷ್ಠಾಪಕತ್ವೇನ ಧವಃ॥ ಘೃತಾಭಿಮಾನೀ ಲಕ್ಷ್ಮೀಃ ಗೋವಿಂದಃ ತತ್ರದೇವತಾ। ಇತಿ ಪ್ರಮಾಣಾರ್ಥ ಮಾಹ. ॥14॥

## ಕನ್ನಡಾರ್ಥ

ಪಂಚರಾತ್ರಾನುಸಾರವಾಗಿ 'ಅನ್ನ' ಈ ಪದ್ಯವನ್ನು ಹೇಳುತ್ತಾರೆ. ಅನ್ನಾಭಿಮಾನಿ ಚಂದ್ರ. ಅಲ್ಲಿಯು ಭಗವದ್ರೂಪ ಕೇಶವ ಪರಮಾನ್ನಾಭಿ ಮಾನಿನೀ ಭಾರತಿ. ಅಲ್ಲಿ ನಾರಾಯಣ, ಭಕ್ಷ್ಯಗಳಿಗೆ ಅಭಿಮಾನಿ ಸೂರ್ಯ, ಅಲ್ಲಿ ಮಾಧವರೂಪ. ಮಾಙ್ಞಾನ ಅಥವಾ ಜ್ಞಾನೋತ್ಪಾದಕರಾದ ಆಚಾರ್ಯ, ವೇದ ಮುಂತಾದವರು ಅವರನ್ನು ಪ್ರತಿಷ್ಠಾಪಿಸುವುದರಿಂದ ಧವ ಹರಿ, ಘೃತಾಭಿಮಾನಿನೀ ಲಕ್ಷ್ಮೀ. ಅಲ್ಲಿ ಗೋವಿಂದರೂಪ. ಈ ಪ್ರಮಾಣ ಗಳ ಅರ್ಥವನ್ನು ಈ ಪದ್ಯದಿಂದ ಹೇಳಿರುತ್ತಾರೆ. ॥14॥

## 5. ಶ್ರೀಗುರುಹೃದಯಪ್ರಕಾಶಿಕೆ :

ಆದ್ದರಿಂದಲೇ ಪೂಜಾಕಾಲದಲ್ಲೂ ದೇವತೆಗಳೇ ನಿನ್ನನ್ನು ಸೇವಿಸುವ ರೀತಿ ಭಾವಿಸುವುದು ಎಂದು ಅಧ್ಯಾಯಾಂತ ಹನ್ನೆರಡು ಪದದಿಂದ ತಿಳಿಸು ತ್ತಾರೆ, ಅನ್ನವೆಂದು.

ಅನ್ನಾಭಿಮಾನಿಚಂದ್ರನು, ಅಲ್ಲಿ ಕರುಣಾಸಿಂಧುವಾದ ಕೇಶವ ನಿಯಾ ಮಕ. ಪರಮಾನ್ನದಲ್ಲಿ ಭಾರತೀದೇವಿಯು. ನಾರಾಯಣರೂಪ ನಿಯಾಮಕ. ಭಕ್ಷ್ಯದಲ್ಲಿ ಸೊನ್ನಗದಿರನಂಟ ಚಿನ್ನದಂತೆ ಕಿರಣಉಳ್ಳ ಸೂರ್ಯನು ಅಲ್ಲಿ ಅಭಿ ಮಾನಿ, ಮಾಧವನು ನಿಯಾಮಕ. ಘೃತಪ್ರತೀಕ ಎಂದು ಶ್ರುತಿಯಲ್ಲಿ ಸ್ತುತಳಾದ ಲಕ್ಷ್ಮೀ ತುಪ್ಪಕ್ಕೆ ಅಭಿಮಾನಿ, ಗೋವಿಂದಮೂರ್ತಿ ಅಲ್ಲಿ ಸದಾ ನಿಯಾಮಕನಾಗಿರುವನು. ಕದಿರಿನಂತೆ ಸಣ್ಣಗೆ ನೀಳವಾದ್ದರಿಂದ ಕಿರಣಕ್ಕೆ ಕದಿರು, ಗದಿರು ಎಂದು ಹೆಸರು ತಿಳಿಯುವುದು. ॥14॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಪ್ರಸಕ್ತಪದ್ಯದಿಂದ ಆರಂಭಿಸಿ, ಪ್ರತಿ ಭೋಜನ ಪದಾರ್ಥಗಳ ಅಭಿಮಾನಿದೇವತಾ, ಆ ದೇವತಾವರ್ಗದ ಕೇಶವಾದಿ ಭಗವದ್ರೂಪಗಳ ಚಿಂತನೆಯನ್ನು ತಿಳಿಸುತ್ತಾರೆ.

2. **ಅನ್ನಕ್ಕೆ** ಅಭಿಮಾನಿದೇವತಾ **ಚಂದ್ರನು.** ಚಂದ್ರನು ವನಸ್ಪತಿಗಳ ಪೋಷಣೆಗೆ ಕಾರಣನು. ಅವನ ತಂಪಾದ ಕಿರಣಗಳಿಂದ ರಾತ್ರಿಸಮಯದಲ್ಲಿ ವನಸ್ಪತಿಗಳು ಚನ್ನಾಗಿ ವೃದ್ಧಿಹೊಂದುವುವು. ಭತ್ತ, ಗೋಧಿ ಮುಂತಾದ ಧಾನ್ಯಗಳಲ್ಲಿ ಹಾಲು ತುಂಬಿಕೊಂಡು ಧಾನ್ಯಗತ ಆಹಾರ ವಸ್ತುಗಳು ಉಪಚಯ ಹೊಂದುವುವು. ಈ ಕಾರಣದಿಂದ ಚಂದ್ರನು ಅನ್ನಾಭಿಮಾನಿಯು. ಅನ್ನಾಭಿಮಾನಿ ಚಂದ್ರನಲ್ಲಿ **ಕೇಶವನ ಭಗವದ್ರೂಪವನ್ನು** ಚಿಂತಿಸಬೇಕು. ಕೇಶವಾದಿ ಚತುರ್ವಿಂಶತಿ ಭಗವದ್ರೂಪಗಳು. **ಕೇಶವ** ಪ್ರಥಮರೂಪವು. (ಬ್ರಹ್ಮಾರುದ್ರಾದಿಗಳಿಗಿಂತ ಉತ್ಕೃಷ್ಟನು).

3. ಪಾಯಸಕ್ಕೆ ಅಭಿಮಾನಿ **ಶ್ರೀಭಾರತೀದೇವಿಯರು.** ಪರಮಾನ್ನವೆಂದರೆ ಪಾಯಸ. ಅದರ ತಯಾರಿಕೆಯಲ್ಲಿ ಉಪಯೋಗಿಸುವ ಹಾಲು, ಶರ್ಕರಾದಿಗಳಲ್ಲಿ ಭಾರತೀದೇವಿಯರ ವ್ಯಾಪ್ತಿ. ಶ್ರೀಭಾರತೀದೇವಿಯರಲ್ಲಿ ಚಿಂತಿಸಬೇಕಾದ ಭಗವದ್ರೂಪ **ನಾರಾಯಣ.** (ಅನಂತ ಕಲ್ಯಾಣಗುಣಗಣ ಪರಿಪೂರ್ಣನೂ, ನಿರ್ದೋಷನೂ ಆದ ಶ್ರೀಪರಮಾತ್ಮನ ರೂಪ, ಮೂಲರೂಪ)

4. ಹೋಳಿಗೆ ಇತ್ಯಾದಿ ನಾನಾ **ಭಕ್ಷ್ಯ ಪದಾರ್ಥಗಳಲ್ಲಿ** ಅಭಿಮಾನಿ ದೇವತಾ **ಸೂರ್ಯನು.** ಭಂಗಾರದ ಪ್ರಕಾಶದಂತೆ ಹೊಂಬಣ್ಣದಿಂದ ಪ್ರಕಾಶಿಸುತ್ತಿರುವ ಸೂರ್ಯನಿಗೆ **ಸೊನ್ನಗದಿರನು ಎಂದಿದ್ದಾರೆ.** ಹಿರಣ್ಯರಶ್ಮಿ ಎಂದೂ ಸೂರ್ಯನಿಗೆ ಹೆಸರು.

5. "ಘೃತಪ್ರತೀಕಂ" ಎಂದು ವೇದಗಳಲ್ಲಿ ಸ್ತುತ್ಯರಾಗಿರುವ

**ಶ್ರೀಲಕ್ಷ್ಮೀದೇವಿಯರು ತುಪ್ಪಕ್ಕೆ ಅಭಿಮಾನಿ** ಶ್ರುತಿಸನ್ನುತ ಶ್ರೀಲಕ್ಷ್ಮೀ ದೇವಿಯರಲ್ಲಿ ಪರಮಪೂಜ್ಯನಾದ (ಸಕಲ ದೇವತಾವರ್ಗದಿಂದ ಪೂಜ್ಯನಾದ) **ಗೋವಿಂದ ಎಂತ ಹೆಸರಿನ** ಭಗವದ್ರೂಪದ ಚಿಂತನೆ. ಈ ರೀತಿಯಲ್ಲಿ ಭೋಜನವಸ್ತು, ಅಭಿಮಾನೀದೇವತಾ, ತದರ್ಗತ ಭಗವದ್ರೂಪಗಳ ಚಿಂತನೆ ಈ ಪಟ್ಟಿಯಲ್ಲಿ ಕೊಟ್ಟಿದೆ. ॥14॥

**ಪಟ್ಟಿ**

| ಕ್ರಮ ಸಂಖ್ಯೆ | ಭೋಜ್ಯ ವಸ್ತು | ಅಭಿಮಾನಿ ದೇವತಾ | ತದಂರ್ಗತ ಭಗವದ್ರೂಪ |
|---|---|---|---|
| 1. | ಅನ್ನ | ಚಂದ್ರ | ಕೇಶವ |
| 2. | ಪಾಯಸ | ಭಾರತೀ | ನಾರಾಯಣ |
| 3. | ಭಕ್ಷಗಳು | ಸೂರ್ಯ | ಮಾಧವ |
| 4, | ತುಪ್ಪ | ಲಕ್ಷ್ಮೀದೇವಿ | ಗೋವಿಂದ |

## ಪದ್ಯ ೧೫

**ಮೂಲ :**

**ಕ್ಷೀರಮಾನಿ ಸರಸ್ವತಿ ಜಗ ।**
**ತ್ಸಾರ ವಿಷ್ಣುವ ಚಿಂತಿಸುವುದು ಸ ।**
**ರೋರುಹಾಸನ ಮಂಡಿಗೆಯೊಳಿರುತಿಪ್ಪ ಮಧುವೈರಿ ॥**
**ಮಾರುತನು ನವನೀತದೊಳು ಸಂ ।**
**ಪ್ರೇರಕ ತ್ರಿವಿಕ್ರಮನು ದಧಿಯೊಳು ।**
**ವಾರಿನಿಧಿ ಚಂದ್ರಮರೊಳಗೆ ಇರುತಿಪ್ಪ ವಾಮನನು ॥ ೧೫ ॥**

**ಅವತರಣಿಕೆ :-**

ಇತರ ಅಭಿಮಾನೀ ದೇವತಾವರ್ಗ ಮತ್ತು ತದಂರ್ಗತ ಭಗವದ್ರೂಪಗಳ ಚಿಂತನೆಯನ್ನು ತಿಳಿಸುತ್ತಾರೆ. ॥14॥

**ಪ್ರತಿಪದಾರ್ಥ :-**

**ಕ್ಷೀರಮಾನಿ** = ಹಾಲಿಗೆ ಅಭಿಮಾನಿನಿಯಾದ. **ಸರಸ್ವತಿ** = ಶ್ರೀಸರಸ್ವತೀ ದೇವಿಯರು. **ಜಗತ್ಸಾರ** = ಜಗತ್ತಿಗೇ ಸಾರಭೂತನಾದ, **ವಿಷ್ಣುವ** = ವಿಷ್ಣುರೂಪೀ ಶ್ರೀಪರಮಾತ್ಮನನ್ನು, **ಚಿಂತಿಸುವುದು** = ಚಿಂತಿಸಬೇಕು. **ಸರೋರುಹಾಸನ** = ಕಮಲಾಸನರಾದ ಶ್ರೀಬ್ರಹ್ಮದೇವರು, **ಮಂಡಿಗೆಯೊಳು ಇರುತಿಪ್ಪ** = ಮಂಡಿಗೆ ಭಕ್ಷ್ಯದಲ್ಲಿ ಇರುವವರಾಗಿದ್ದಾರೆ. **ಮಧುವೈರಿ** = ಬ್ರಹ್ಮಾಂತರ್ಗತನಾಗಿ ಮಧುನಾಮಕ ದೈತ್ಯಸಂಹಾರಿಯಾದ ಮಧುಸೂಧನನನ್ನು ಚಿಂತಿಸಬೇಕು. **ಮಾರುತನು** = ಜೀವೋತ್ತಮರಾದ ಶ್ರೀವಾಯುದೇವರು, **ನವನೀತದೊಳು** = ಬೆಣ್ಣೆಯಲ್ಲಿ, **ಸಂಪ್ರೇರಕ** = ಸರ್ವಪ್ರಾಣಿಗಳಿಗೆ ಪ್ರೇರಕನಾದ, **ತ್ರಿವಿಕ್ರಮನು** = ಶ್ರೀತ್ರಿವಿಕ್ರಮನಾಮಕ

ಶ್ರೀಪರಮಾತ್ಮನು ಇದ್ದಾನೆ. **ದಧಿಯೊಳು** = ಮೊಸರಿನಲ್ಲಿ, **ವಾರಿನಿಧಿ** = ಸಮುದ್ರಮಥನಕಾಲದಲ್ಲಿ ಸಂಜಾತರಾದ, **ಚಂದ್ರಮರೊಳಗೆ** = ಚಂದ್ರ ದೇವರು ಇದ್ದಾರೆ. **ವಾಮನನು ಇರುತಿಪ್ಪ** = ಚಂದ್ರಾಂತರ್ಗತನಾಗಿ ಶ್ರೀವಾಮನರೂಪೀ ಪರಮಾತ್ಮನಿದ್ದಾನೆ. ॥15॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ನೈವೇದ್ಯಸಮರ್ಪಣಕ್ರಮವನ್ನೇ ಹೇಳತಾರೆ.

ಹಾಲಿಗೆ ಅಭಿಮಾನಿ ಸರಸ್ವತೀದೇವೇರು. ಜಗತ್ತಿನೊಳಗೆ ಸಾರಭೂತ ನಾದ ಸರ್ವೋತ್ತಮನಾದ ಶ್ರೀವಿಷ್ಣುರೂಪ ಪರಮಾತ್ಮನನ್ನ ಪೂರ್ವೋಕ್ತ ಸರಸ್ವತೀ ಅಂತರ್ಗತದಲ್ಲಿ ಚಿಂತಿಸಬೇಕು. ಕಮಲಾಸನರಾದ ಬ್ರಹ್ಮದೇವರು ಮಂಡಿಗೆಯೊಳಗೆ ಇರೋವರಾಗಿದ್ದಾರೆ. ಇವರ ಅಂತರ್ಗತದಲ್ಲಿ ಮಧುಸೂದನ ನಾಮಕ ಪರಮಾತ್ಮ ಇದ್ದಾನೆ. ಜೀವೋತ್ತಮರಾದ ಪ್ರಧಾನವಾಯು ದೇವರು ಬೆಣ್ಣೆಯಲ್ಲಿ. ಸರ್ವಪ್ರಾಣಿಗಳಿಗೆ ಚಂದಾಗಿ ಪ್ರೇರಕನಾದ ಈ ವಾಯು ಗೋಳಾಂತರ್ಗತನಾಗಿ ತ್ರಿವಿಕ್ರಮನಾಮಕ ಪರಮಾತ್ಮ ಇದ್ದಾನೆ. ಮೊಸರಿನಲ್ಲಿ ಸಮುದ್ರಮಥನಕಾಲದಲ್ಲಿ ಉತ್ಪನ್ನರಾದ ಚಂದ್ರದೇವರು ಇದ್ದಾರೆ. ಈ ಚಂದ್ರದೇವರ ಅಂತರ್ಗತದಲ್ಲಿ ವಾಮನರೂಪೀ ಪರಮಾತ್ಮ ಇರೋವನಾಗಿದ್ದಾನೆಂದು ತಾತ್ಪರ್ಯ. ॥15॥

### 2. ಭಾವಪ್ರಕಾಶಿಕೆ :–

ಕ್ಷೀರಕ್ಕಭಿಮಾನಿಯು ಶ್ರೀಸರಸ್ವತೀದೇವಿಯರು. ಅವರಲ್ಲಿ ವಿಷ್ಣು ಮೂರ್ತಿಯನ್ನು ಚಿಂತಿಸಬೇಕು. ಮಂಡಿಗೆಗಭಿಮಾನಿ ಶ್ರೀಬ್ರಹ್ಮದೇವರು. ಅವರಲ್ಲಿ ಮಧುಸೂದನಮೂರ್ತಿಯನ್ನು ಚಿಂತಿಸಬೇಕು. ಬೆಣ್ಣೆಗೆ ಅಭಿ ಮಾನಿಯು ಶ್ರೀವಾಯುದೇವರು. ಅವರಲ್ಲಿ ಶ್ರೀತ್ರಿವಿಕ್ರಮನನ್ನು ಚಿಂತಿಸ

ಬೇಕು. ಮೊಸರಿಗೆ ಅಭಿಮಾನಿಯು ವರುಣ ಮತ್ತು ಚಂದ್ರರು. ಅವರಲ್ಲಿ ವಾಮನಮೂರ್ತಿಯನ್ನು ಚಿಂತಿಸಬೇಕು.

## 4. ಶ್ರೀವ್ಯಾಸಸಿದ್ಧಾಂತಕೌಮುದಿ :-

"ಸರಸ್ವತೀ ಕ್ಷೀರನಿಷ್ಠಾ ವಿಷ್ಣುಂ ತತ್ರ ವಿಚಿಂತಯೇತ್" ಚತುರ್ಮುಖಃ ಮಂಡಮಾನೀ, ವಿಚಿಂತ್ಯಃ ಮಧುಸೂದನಃ॥ ನವನೀತಂ ವಾಯುದೈವ್ಯಂ ಚಿಂತ್ಯಃ ತತ್ರ ತ್ರಿವಿಕ್ರಮಃ ॥ ದಧಿಸ್ಥೌ ಸೋಮ ವರುಣ ವಾಮನಃ ತತ್ರ ದೇವತಾ ॥ ಇತಿ ಮಾನಮರ್ಥತಃ ಅನುವದತಿ "ಕ್ಷೀರ" ಇತೀ. ॥15॥

## ಕನ್ನಡಾರ್ಥ

"ಕ್ಷೀರದಲ್ಲಿ ಸರಸ್ವತಿ ಅಲ್ಲಿ ವಿಷ್ಣುರೂಪ. ಮಂಡ (ಮಂಡಿಗೆ)ಕ್ಕೆ ಚತುರ್ಮುಖನು ಅಭಿಮಾನಿ. ಅಲ್ಲಿ ಮಧುಸೂದನರೂಪ. ನವನೀತದಲ್ಲಿ ವಾಯುದೇವನು. ಅಲ್ಲಿ ತ್ರಿವಿಕ್ರಮರೂಪ. ಮೊಸರಿನಲ್ಲಿ ಸೋಮ (ಚಂದ್ರ), ವರುಣರು. ಅಲ್ಲಿ ವಾಮನರೂಪ. "ಈ ರೀತಿಯಾದ ಪ್ರಮಾಣದ ಅರ್ಥವನ್ನು" ಕ್ಷೀರಮಾನೀ ಈ ಪದ್ಯದಿಂದ ಅನುವಾದಿಸುತ್ತಾರೆ. ॥15॥

## 5. ಶ್ರೀಗುರುಹೃದಯಪ್ರಕಾಶಿಕೆ:

ಕ್ಷೀರಾಭಿಮಾನಿ ಸರಸ್ವತಿ. ಜಗತ್ತಿಗೆ ಸಾರವೆಂದರೆ ಮುಖ್ಯನಾದ ವಿಷ್ಣು ರೂಪ ಅಲ್ಲಿ ತಿಳಿಯಬೇಕು. ಮಂಡಿಗೆಯಲ್ಲಿ ಸರೋರುಹಾಸನನೆಂಬ ಕಮಲ ಪೀಠನಾದ ಬ್ರಹ್ಮದೇವರು, ಅಲ್ಲಿ ಮಧುಸೂದನರೂಪ. ಮಾರುತನೆಂಬ ಪ್ರಾಣದೇವರು ಬೆಣ್ಣೆಗೆ ಅಭಿಮಾನಿ. ಅಲ್ಲಿ ಪ್ರೇರಕ ತ್ರಿವಿಕ್ರಮರೂಪನು. ದಧಿ ಎಂಬ ಮೊಸರಿನಲ್ಲಿ ವಾರಿನಿಧಿ ಎಂಬ ವರುಣನು, ಚಂದ್ರ ಸಹ ಅಭಿಮಾನಿ. ಅಲ್ಲಿ ನಿಯಾಮಕರೂಪ ವಾಮನನು. ॥15॥

—★—

# ಸರ್ವವ್ಯಾಖ್ಯಾನಸಾರಸಂಗ್ರಹ

1. ಹಾಲಿಗೆ ಅಭಿಮಾನಿದೇವತೆ ಶ್ರೀಸರಸ್ವತೀದೇವಿ. ಅವರಲ್ಲಿ ಚಿಂತಿಸಬೇಕಾದ ಭಗವದ್ರೂಪ ಶ್ರೀವಿಷ್ಣು. ಪರಿಪೂರ್ಣನೂ, ಸರ್ವತ್ರ ವ್ಯಾಪ್ತನೂ ಆದ ಮೂಲರೂಪೀ ಶ್ರೀಪರಮಾತ್ಮನು ಶ್ರೀವಿಷ್ಣುಶಬ್ದವಾಚ್ಯನು. "ವಿಪ್ಲೃತ್" ವ್ಯಾಪ್ತೌ ಎಂಬ ಧಾತುವಿನ ಪರಿಷ್ಕಾರ ರೀತ್ಯಾ. "ವಿಷ್ಣು" ಎಂದರೆ ಪರಿಪೂರ್ಣವಸ್ತು ಮತ್ತು ಸರ್ವತ್ರ ವ್ಯಾಪ್ತನೆಂದರ್ಥ. ಕ್ಷೀರವು ಸಾರಭೂತವಾದದ್ದು. ಅದರ ಸಾರಾಂಶಗಳೇ ಮೊಸರು–ನವನೀತ–ತುಪ್ಪ. ಜಗತ್ತಿಗೇ ಸಾರಭೂತನಾದ ಶ್ರೀವಿಷ್ಣುವನ್ನು ಜಗತ್ಸಾರನೆಂದು ಕರೆದಿದ್ದಾರೆ.

2. ಮಂಡಿಗೆ ಎಂಬ ಭಕ್ಷ್ಯಕ್ಕೆ ಅಭಿಮಾನಿ ಶ್ರೀಬ್ರಹ್ಮದೇವರು. ಬ್ರಹ್ಮದೇವತಾಂತರ್ಗತ ಮಧುಸೂದನ ನಾಮಕ ಪರಮಾತ್ಮನನ್ನು ಮಂಡಿಗೆ ಭಕ್ಷ್ಯದಲ್ಲಿ ಚಿಂತಿಸಬೇಕು. ಶ್ರೀಪರಮಾತ್ಮನ ನಾಭೀಕಮಲ ಸಂಜಾತರಾದ ಶ್ರೀಬ್ರಹ್ಮದೇವರೇ ಸರೋರುಹಾಸನರು.

ಸರರೋರು–ನೀರನ್ನು ಭೇದಿಸಿಕೊಂಡು ಉತ್ಪತ್ತಿಯಾಗುವ ಕಮಲ. ಅಂತಹ ನಾಭೀಕಮಲವನ್ನೇ ಆಸನವನ್ನಾಗಿ ಉಳ್ಳವರು ಕಮಲಾಸನರಾದ ಬ್ರಹ್ಮದೇವರು.

"ಮಧು" ಎಂಬ ಮಹಾದೈತ್ಯನನ್ನ ಶ್ರೀವಿಷ್ಣುವು ಸಂಹರಿಸಿದನು. ಆದರಿಂದ ಮಧುವೈರಿಯು ಅವನೇ ಮಧುಸೂದನನಾಮಕನು.

3. ಬೆಣ್ಣೆಯಲ್ಲಿ ಅಭಿಮಾನಿದೇವತಾ ಶ್ರೀವಾಯುದೇವರು. ಇದರಿಂದ ಮಾರುತನು ನವನೀತದೊಳು ಎಂದಿದ್ದಾರೆ ದಾಸರಾಯರು, ಅವರಲ್ಲಿ ಸಂಪ್ರೇರಕ ರೂಪ ತ್ರಿವಿಕ್ರಮನು. ಸರ್ವಜೀವರಿಗೂ ಪ್ರೇರಕನು, ಸಂಪ್ರೇರಕನಾದ ಶ್ರೀಪರಮಾತ್ಮನು. ಅವನ ಪ್ರೇರಣೆ ಶ್ರೀವಾಯುದೇವರಿಗೆ, ವಾಯುದೇವರ ಪ್ರೇರಣೆ, ಇಂದ್ರಿಯಾಭಿಮಾನಿ ದೇವತೆಗಳಿಗೆ ಮತ್ತು ಅಸುರರಿಗೆ ಆದರಿಂದ ಜೀವರಿಗೆ ಪ್ರೇರಣೆ,

4. ಮೊಸರಿನಲ್ಲಿ ಅಭಿಮಾನಿಗಳು ಇಬ್ಬರು ಶ್ರೀವರುಣದೇವರು (ವಾರಿನಿಧಿ) ಮತ್ತು ಚಂದ್ರ. ವಾರಿನಿಧಿ ಎಂದರೆ ಸಮುದ್ರ, ಸಮುದ್ರ ರಾಜನಾದ ವರುಣನೆಂದು ಗ್ರಾಹ್ಯಾರ್ಥ. ಚಂದ್ರನೂ ಸಾಗರಸಂಜಾತನು. ಇವರಲ್ಲಿ ಅಂತರ್ಗತ ಭಗವದ್ರೂಪ ಶ್ರೀವಾಮನ. ||15||

| ಕ್ರಮ ಸಂಖ್ಯೆ | ಭೋಜ್ಯ ವಸ್ತು | ಅಭಿಮಾನಿ ದೇವತಾ | ತದಂತರ್ಗತ ಭಗವದ್ರೂಪ |
|---|---|---|---|
| 1. | ಕ್ಷೀರದಲ್ಲಿ | ಶ್ರೀಸರಸ್ವತೀ | ಶ್ರೀವಿಷ್ಣು |
| 2. | ಮಂಡಿಗೆಯಲ್ಲಿ | ಶ್ರೀಬ್ರಹ್ಮದೇವರು | ಶ್ರೀಮಧು ಸೂದನ |
| 3. | ನವನೀತ (ಬೆಣ್ಣೆಯಲ್ಲಿ) | ಶ್ರೀವಾಯು ದೇವರು | ಶ್ರೀತ್ರಿವಿಕ್ರಮ |
| 4. | ಮೊಸರಿನಲ್ಲಿ | ವರುಣ–ಚಂದ್ರ | ಶ್ರೀವಾಮನ |

## ಪದ್ಯ ೧೬

ಮೂಲ :-

ಗರುಡಸೂಪಕೆ ಮಾನಿ ಶ್ರೀ ಶ್ರೀ ।
ಧರನು ದೇವತೆ ಪತ್ರಶಾಕಕೆ ।
ವರನೆನಿಪ ವಿಶ್ವಾಖ್ಯಸೂರ್ಯ ಹೃಷೀಕಪನಮೂರ್ತಿ ।
ಉರಗರಾಜನು ಫಲಸುಶಾಕಕೆ ।
ವರನೆನಿಸುವನು ಪದ್ಮನಾಭನ ।
ಸ್ಮರಿಸಿ ಭುಂಜಿಸುತಿಹರು ಬಲ್ಲವರೆಲ್ಲಕಾಲದಲಿ || ೧೬ ||

**ಅವತರಣಿಕೆ :-**

ನೈವೇದ್ಯ ಸಮರ್ಪಣಾ ಕ್ರಮವನ್ನೇ ಮುಂದುವರಿಸಿ ಹೇಳುತ್ತಾರೆ.

॥16॥

**ಪ್ರತಿಪದಾರ್ಥ :-**

**ಗರುಡ** = ಶ್ರೀಗರುಡದೇವರು, **ತೊವೆಗೆ ಮಾನಿ** = ತೊವ್ವೆಗೆ ಅಭಿಮಾನಿ ದೇವತೆಯು, **ಶ್ರೀ ಶ್ರೀಧರನು** = ಕಾಂತಿಸಂಪನ್ನನೂ ಪರಿಪೂರ್ಣನೂ ಆದ ಶ್ರೀಧರನಾಮಕ ಪರಮಾತ್ಮನು ಇದ್ದಾನೆ, **ಪತ್ರಶಾಕಕೆ** = ಸೊಪ್ಪಿನ ಪಲ್ಯಗಳಲ್ಲಿ, **ವರನೆನಿಪ** = ಅಭಿಮಾನಿ ಎನಿಸತಕ್ಕ, **ಮಿತ್ರಾಖ್ಯಸೂರ್ಯ** = ಮಿತ್ರನಾಮಕ ಸೂರ್ಯನು, **ಹೃಷೀಕಪನಮೂರ್ತಿ** = ಅವನ ಅಂತರ್ಗತನಾದ ಶ್ರೀ ಹೃಷೀಕೇಶನಾಮಕನನ್ನು ಚಿಂತಿಸಬೇಕು, **ಉಗರರಾಜನು** = ಸರ್ಪಶ್ರೇಷ್ಠರಾದ ಶ್ರೀಶೇಷದೇವರು, **ಫಲಸುಶಾಕಕೆ** = ಅನಿಷಿದ್ಧಗಳಾದ ತರಕಾರಿಗಳ ಪಲ್ಯಗಳಿಗೆ, **ವರನೆನಿಸುವನು** = ಅಭಿಮಾನಿ ಎನಿಸುತ್ತಾನೆ. **ಪದ್ಮನಾಭನ** = ಶೇಷಾಂತರ್ಗತನಾಗಿ ಶ್ರೀಪದ್ಮನಾಭರೂಪಿಯನ್ನು, **ಸ್ಮರಿಸಿ** = ನೆನೆಸಿಕೊಂಡು (ಚಿಂತನಾಪೂರ್ವಕವಾಗಿ), **ಬಲ್ಲವರು** = ಜ್ಞಾನಿಗಳಾದವರು, **ಎಲ್ಲ ಕಾಲದಲಿ** = ತಾವು ಭೋಜನ ಮಾಡುವ ಕಾಲದಲ್ಲಿ, **ಭುಂಜಿಸುತಿಹರು** = ಧ್ಯಾನಪೂರ್ವಕವಾಗಿ ಭೋಜನ ಮಾಡುತ್ತಾರೆ. ॥16॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಇನ್ನೂ ನೈವೇದ್ಯಸಮರ್ಪಣಕ್ರಮವನ್ನೇ ಹೇಳುತಾರೆ.

ಗರುಡದೇವರು ತೊವ್ವಿಗೆ ಅಭಿಮಾನಿ. ಅವರ ಅಂತರ್ಗತ ದೇವಶ್ರೇಷ್ಠನಾದ ಕಾಂತಿಸಂಪನ್ನನಾದ ಶ್ರೀಧರನಾಮಕ ಪರಮಾತ್ಮ ಇರೋವ

ನಾಗಿದ್ದಾನೆ. ತೊಪ್ಪಲುಗಳಿಂದ ನಿರ್ಮಿತವಾದ ಪಲ್ಯಗಳಿಗೆ ಅಭಿಮಾನಿ ಎನಿಸತಕ್ಕವರು ಮಿತ್ರನಾಮಕ ಸೂರ್ಯದೇವರು. ಇವರ ಅಂತರ್ಗತದಲ್ಲಿ ಹೃಷೀಕೇಶಮೂರ್ತಿಯನ್ನು ಚಿಂತಿಸಬೇಕು. ಸರ್ವಶ್ರೇಷ್ಠರಾದ ಶೇಷದೇವರು, ಅನಿಷಿದ್ಧಗಳಾದ ಕಾಯಿಶಾಖಗಳಿಗೆ ಅಭಿಮಾನಿ ಎನಿಸೋವರಾಗತಾರೆ. ಇವರ ಅಂತರ್ಗತದಲ್ಲಿ ಪದ್ಮನಾಭಮೂರ್ತಿಯನ್ನ ಅನುಸಂಧಾನ ಮಾಡೋವರಾಗ ಬೇಕು. ಜ್ಞಾನಿಗಳಾದವರು ನೈವೇದ್ಯಸಮರ್ಪಣ ಮಾಡುವಂಥಾ ಎಲ್ಲ ಕಾಲದಲ್ಲೂನೂ, ಅಧಿಕಾರಿಗಳಾದವರು ತಾವು ಭೋಜನ ಮಾಡೋಕಾಲದಲ್ಲೂನೂ ಪೂರ್ವೋಕ್ತ ಪ್ರಕಾರದಿಂದಲೂ, ಇನ್ನೂ ಮ್ಯಾಲೆ ಹೇಳಿದ ಪ್ರಕಾರದಿಂದಲೂ ಅನುಸಂಧಾನ ಮಾಡಬೇಕಂತ ತಾತ್ಪರ್ಯ. ॥16॥

## 2. ಭಾವಪ್ರಕಾಶಿಕೆ :-

ತೊಪ್ಪೆಗಭಿಮಾನಿಯು ಗರುಡನು. ಅವನಲ್ಲಿ ಶ್ರೀಧರಮೂರ್ತಿಯನ್ನು ಚಿಂತಿಸಬೇಕು. ಸೊಪ್ಪಿನ ಶಾಖಗಳಿಗೆ ಮಿತ್ರನೆಂಬ ಸೂರ್ಯನು. ಅವನಲ್ಲಿ ಹೃಷೀಕೇಶನನ್ನು ಚಿಂತಿಸಬೇಕು. ಬಾಳೇಕಾಯಿ ಮೊದಲಾದ ಕಾಯಿಪಲ್ಯಗಳಿಗೆ ಶೇಷನು ಅಭಿಮಾನಿಯು. ಅವನೊಳಗೆ ಪದ್ಮನಾಭಮೂರ್ತಿಯನ್ನೂ ಚಿಂತಿಸುತ್ತಾ ಭೋಜನ ಮಾಡಬೇಕೆಂದು ತಾತ್ಪರ್ಯ. ॥16॥

## 4. ಶ್ರೀವ್ಯಾಸದಾಸಸಿದ್ಧಾಂತ ಕೌಮುದೀ :

ಸೂಪಾಭಿಮಾನೀ ಗರುಡಃ ಶ್ರೀಧರಃ ತತ್ರ ದೇವತಾ॥ ಮಿತ್ರಸ್ತು ಪತ್ರಶಾಕೇ ಚ ಹೃಷೀಕೇಶಸ್ತು ತತ್ರಗಃ॥ ಶೇಷಸ್ತು ಫಲಶಾಕೇಷು ಪದ್ಮನಾಭಸ್ತು ತದ್ಗತಃ॥ ಇತ್ಯರ್ಥಮಾಹ "ಗರುಡ" ಇತಿ ॥16॥

## ಕನ್ನಡಾರ್ಥ

ಸೂಪಕ್ಕೆ ಅಭಿಮಾನಿ ಗರುಡ. ಅಲ್ಲಿ ಶ್ರೀಧರ ರೂಪ. ಪತ್ರಶಾಖಕ್ಕೆ ಸೊಪ್ಪಿನ ಪಲ್ಯಗೆ ಮಿತ್ರನಾಮಕ ಸೂರ್ಯ; ಅಲ್ಲಿ ಹೃಷೀಕೇಶರೂಪ. ಫಲಶಾಖ

(ಕಾಯಿಪಲ್ಲೆ)ಕ್ಕೆ ಶೇಷನು ಅಭಿಮಾನಿ. ಅಲ್ಲಿ ಪದ್ಮನಾಭರೂಪ. ಈ ವಿಷಯವನ್ನು "ಗರುಡ" ಈ ಪದ್ಯದಿಂದ ಹೇಳುತ್ತಾರೆ. ॥16॥

### 5. ಶ್ರೀಗುರುಹೃದಯಪ್ರಕಾಶಿಕೆ :

ಗರುಡನು ಸೂಪವೆಂಬ ತೊವ್ವೆಗೆ ಅಭಿಮಾನಿ, ಶ್ರೀಧರರೂಪನಿಯಾಮಕನು. ಪತ್ರಶಾಖವೆಂಬ ಸೊಪ್ಪಿನ ಪಲ್ಯಕ್ಕೆ ಅಭಿಮಾನಿ ಮಿತ್ರನಾಮಕ ಸೂರ್ಯ. ಅಲ್ಲಿ ಹೃಷೀಕೇಶಮೂರ್ತಿ. ಫಲಸುಶಾಖವೆಂಬ ಕಾಯಿಪಲ್ಯಕ್ಕೆ ಉರಗರಾಜನೆಂಬ ಶೇಷನು ಅಭಿಮಾನಿ. ಅಲ್ಲಿ ಪದ್ಮನಾಭಮೂರ್ತಿಯನ್ನು ಸ್ಮರಿಸಿ, ಬಲ್ಲವರು ನೈವೇದ್ಯದಲ್ಲೂ ಭಾವಿಸಿ ಭೋಜನಕಾಲದಲ್ಲೂ ಸದಾ ಚಿಂತಿಸುವರು.

॥16॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ತೊವ್ವೆಗೆ ಅಭಿಮಾನಿಯು ಶ್ರೀಗರುಡದೇವರು. ಕಾಲನಾಮಕ ಮತ್ತು ಚಿತ್ತಾಭಿಮಾನಿ-ಗರುಡನು. ತೊವ್ವೆಯ ಭೋಜನರಸದಿಂದ ಚಿತ್ತೇಂದ್ರಿಯಕ್ಕೆ ಉಪಚಯ. ಗರುಡದೇವರಲ್ಲಿ ಅಂತರ್ಗತನಾಗಿರುವ **ಶ್ರೀಧರ ಮೂರ್ತಿಯನ್ನು** ಚಿಂತಿಸಬೇಕು. ಶ್ರೀಲಕ್ಷ್ಮೀದೇವಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವ ಶ್ರೀಧರನಾಮಕನು ತೊವ್ವೆಯಲ್ಲಿದ್ದಾನೆ.

2. ಸೊಪ್ಪಿನಿಂದ ಮಾಡಿದ ಪಲ್ಯಗಳಿಗೆ–**ಪತ್ರ ಶಾಖವೆಂದು** ಹೆಸರು. ಪತ್ರಶಾಖಕ್ಕೆ ಅಭಿಮಾನಿಯು ಮಿತ್ರನಾಮಕ **ಸೂರ್ಯನು**. ದ್ವಾದಶಾದಿತ್ಯರಲ್ಲಿ ಒಬ್ಬನು ಮಿತ್ರನಾಮಕ ಸೂರ್ಯನು. ಅವನಲ್ಲಿ **ಹೃಷೀಕೇಶನ** ಚಿಂತನೆ. ಹೃಷೀಕ–ಎಂದರೆ ದೇಹಗತ ಇಂದ್ರಿಯಗಳು. ಈ ಇಂದ್ರಿಯಾಂತರ್ಗತನಾಗಿದ್ದು ಇಂದ್ರಿಯಗಳಿಗೆ ಪ್ರೇರಕನಾಗಿ, ನಿಯಾಮಕನಾಗಿರುವುದರಿಂದ ಶ್ರೀಪರಮಾತ್ಮನಿಗೆ–**ಹೃಷೀಕೇಶ (ಹೃಷೀಕಪ)**–ಎಂದು ಹೆಸರು.

3. ಬಾಳೇಕಾಯಿ, ಕುಂಬಳಕಾಯಿ ಇತ್ಯಾದಿ ತರಕಾರಿಗಳಿಂದ ಮಾಡಿದ

ಪಲ್ಯ ಮತ್ತು ವ್ಯಂಜನ ವಸ್ತುಗಳಿಗೆ ಫಲಸುಶಾಕವೆಂದು ಹೆಸರು. ಇದಕ್ಕೆ ಅಭಿಮಾನಿಯು ಸರ್ಪಶ್ರೇಷ್ಠರಾದ ಶ್ರೀಶೇಷದೇವರು. (ಉರಗರಾಜನು) ಶೇಷದೇವರಲ್ಲಿ ಪದ್ಮನಾಭಮೂರ್ತಿಯನ್ನು ಚಿಂತಿಸಬೇಕು. ಜಗತ್ತಿನ ಸೃಷ್ಟಿಗೆ ಕಾರಣರೂಪವು ಶ್ರೀಪದ್ಮನಾಭರೂಪವು. ಶ್ರೀಪದ್ಮನಾಭನ ನಾಭೀಕಮಲ ಸಂಜಾತರಾದ ಶ್ರೀಬ್ರಹ್ಮದೇವರ ಅವಯವಗಳಲ್ಲಿ ಅಜನಾಮಕನಾಗಿ ವಿದ್ಯಮಾನ ನಾಗಿದ್ದು ಅವಯವ ಸೃಷ್ಟಿಯನ್ನು ಮಾಡುತ್ತಾನೆ.

ಈ ರೀತಿಯಲ್ಲಿ ತೊವ್ವೆಯಲ್ಲಿ ಶ್ರೀಧರನನ್ನು ಪತ್ರಶಾಕಗಳಲ್ಲಿ ಹೃಷೀಕೇಶ ನನ್ನು ಮತ್ತು ಫಲಸುಶಾಖಗಳಲ್ಲಿ ಪದ್ಮನಾಭಮೂರ್ತಿಯನ್ನು ಚಿಂತಿಸುತ್ತಾ, ತತ್ತದ್ರೂಪಾಂತರ್ಗತ ರೂಪಗಳನ್ನು ಧ್ಯಾನಿಸುತ್ತಾ ಭೋಜನ ಮಾಡಬೇಕೆಂದು ತಾತ್ಪರ್ಯ. ॥16॥

| ಕ್ರಮ ಸಂಖ್ಯೆ | ಭೋಜ್ಯ ವಸ್ತು | ಅಭಿಮಾನಿ ದೇವತಾ | ತದಂತರ್ಗತ ಭಗವದ್ರೂಪ |
|---|---|---|---|
| 1. | ತೊವ್ವೆ | ಶ್ರೀಗರುಡದೇವರು | ಶ್ರೀಧರ |
| 2. | ಪತ್ರಶಾಕ | ಮಿತ್ರನಾಮಕಸೂರ್ಯ | ಹೃಷೀಕೇಶ |
| 3. | ಫಲಸುಶಾಕ | ಶ್ರೀಶೇಷದೇವರು | ಪದ್ಮನಾಭ |

# ಪದ್ಯ ೧೭

**ಮೂಲ :-**

ಗೌರಿ ಸರ್ವಾಮ್ಲಸ್ಥಳೆನಿಪಳು ।
ಶೌರಿ ದಾಮೋದರನ ತಿಳಿವುದು ।
ಗೌರಿಪಾನಾಮ್ಲಸ್ಥ ಸಂಕರುಷಣನ ಚಿಂತಿಪುದು ॥
ಸಾರಶರ್ಕರ ಗುಡದೊಳಗೆ ವೃ ।
ಶ್ರೌರಿ ಇರುತಿಹ ವಾಸುದೇವನ ।
ಸೂರಿಗಳು ಧೇನಿಪರು ಪರಮಾದರದಿ ಸರ್ವತ್ರ ॥ ॥೧೭॥

**ಅವತರಣಿಕೆ :-**

ಮತ್ತೂ ನೈವೇದ್ಯ ಸಮರ್ಪಣಕ್ರಮವನ್ನೇ ಮುಂದುವರಿಸುತ್ತಾರೆ.

॥17॥

**ಪ್ರತಿಪದಾರ್ಥ :-**

**ಗೌರಿ** = ಶ್ರೀರುದ್ರದೇವರ ಪತ್ನಿ ಶ್ರೀಗೌರೀದೇವಿ (ಶ್ರೀಪಾರ್ವತೀ), **ಸರ್ವಆಮ್ಲಸ್ಥಳೆನಿಪಳು** = ಸಕಲವಾದ ಹುಳಿಯಿಂದ ಯುಕ್ತವಾದ ಪದಾರ್ಥಗಳಿಗೆ ಅಭಿಮಾನಿ ಎಂದು ಕರೆಯಿಸುವರು, **ಶೌರಿ** = ನಂದಗೋಪನ ಪುತ್ರನಾದ, **ದಾಮೋದರನ** = ದಾಮೋದರ ನಾಮಕನಾದ ಶ್ರೀಪರಮಾತ್ಮನು, **ತಿಳಿವುದು** = ಸರ್ವಾಮ್ಲಸ್ಥ ಗೌರ್ಯಂತರ್ಗತನೆಂದು ಚಿಂತಿಸಬೇಕು, **ಗೌರಿಪ** = ಗೌರಿಯ ಪತಿಯಾದ ಶ್ರೀರುದ್ರದೇವರನ್ನು, **ಅನಾಮ್ಲಸ್ಥ** = ಹುಳಿಮಿಶ್ರವಲ್ಲದ ಭೋಜನ ಪದಾರ್ಥಗಳಲ್ಲಿ (ಮಧುರ), **ಸಂಕಷರುಣನ ಚಿಂತಿಪುದು** = ಸಂಕರ್ಷಣನಾಮಕ ಶ್ರೀಪರಮಾತ್ಮನನ್ನು ಚಿಂತಿಸಬೇಕು, **ಸಾರ** = ಮಧುರ

ಸಾರದಿಂದ ಯುಕ್ತವಾದ, **ಶರ್ಕರ ಗುಡದೊಳಗೆ**= ಸಕ್ಕರೆ, ಬೆಲ್ಲ ಮೊದಲಾದ ಮಧುರ ವಸ್ತುಗಳಲ್ಲಿ, **ವೃತ್ರಾರಿ**= ವೃತ್ರಾಸುರನನ್ನು ಸಂಹರಿಸಿದ, ಶ್ರೀಇಂದ್ರದೇವರು, **ಇರುತಿಹ**= ಅಭಿಮಾನಿಗಳಾಗಿ ಇದ್ದಾರೆ, **ವಾಸುದೇವನ**= ಶ್ರೀವಾಸುದೇವನನ್ನು, **ಸೂರಿಗಳು** = ಜ್ಞಾನಿಗಳು, **ಸರ್ವತ್ರ**= ಸರ್ವತ್ರ ವ್ಯಾಪ್ತನಾದ ಶ್ರೀಪರಮಾತ್ಮನನ್ನು, **ಧೇನಿಪರು**= ಪದಾರ್ಥಾಭಿಮಾನಿ ದೇವತೆಗಳಲ್ಲಿ ಅಂತರ್ಯಾಮಿರೂಪದಿಂದ ಅನುಸಂಧಾನಪೂರ್ವಕ ಧ್ಯಾನಿಸುತ್ತಾರೆ. ॥17॥

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ನೈವೇದ್ಯಸಮರ್ಪಣಕ್ರಮವನ್ನೇ ಹೇಳುತಾರೆ.

ರುದ್ರದೇವರ ಪತ್ನಿಯಾದ ಗೌರೀದೇವೇರು ಸಮಸ್ತವಾದ ಹುಳಿಯಿಂದ ಸಹಿತವಾದ ಪದಾರ್ಥಾಂತರ್ಗರಾಗಿ ಅದಕ್ಕೆ ಅಭಿಮಾನಿ ಎಂತ ಎನಿಸೋವರಾಗತಾರೆ. ಶೌರಿ ಎಂದರೆ ನಂದಗೋಪ, ಇವನ ಪುತ್ರನಾದ ತಾಯಿಯಿಂದ ಹಗ್ಗದಿಂದ ಕಟ್ಟಿಸಿಕೊಳ್ಳಲ್ಪಟ್ಟಂಥಾ ಉದರ ಉಳ್ಳವನಾದ್ದರಿಂದ ದಾಮೋದರನಂತ ನಾಮ. ಈ ದಾಮೋದರನಾಮಕ ಪರಮಾತ್ಮನ ಗೌರೀಗೋಳಕಾಂತರ್ಗತದಲ್ಲಿ ತಿಳಿಯೋವರಾಗಬೇಕು. ಗೌರೀದೇವೇರನ್ನ ಪಾಲನಿ ಮಾಡತಕ್ಕ ರುದ್ರದೇವರು ಹುಳಿಮಿಶ್ರವಲ್ಲದ ಭೋಜನ ಪದಾರ್ಥಗಳಲ್ಲಿ ಅಭಿಮಾನಿಯಾಗಿ ಇರೋವರಾಗಿದ್ದಾರೆ. ಈ ರುದ್ರಗೋಳಕಾಂತರ್ಗತದಲ್ಲಿ ಸಂಕರ್ಷಣರೂಪೀ ಪರಮಾತ್ಮನ ಅನುಸಂಧಾನ ಮಾಡೋವರಾಗಬೇಕು. ಮಧುಸಾರದಿಂದ ಯುಕ್ತವಾದ ಸಕ್ಕರಿ ಬೆಲ್ಲ ಇವುಗಳೊಳಗೆ, ವೃತ್ರಾಸುರಗೆ ಶತ್ರುವಾದ ಇದ್ರದೇವರು ಅಭಿಮಾನಿಯಾಗಿ ಇರೋವರಾಗಿದ್ದಾರೆ. ಇಂದ್ರದೇವರ ಗೋಳಕಾಂತರ್ಗತದಲ್ಲಿ ವಾಸುದೇವರೂಪೀ ಪರಮಾತ್ಮನ್ನ ಚಿಂತಿಸೋವರಾಗಬೇಕು. ಸರ್ವತ್ರವ್ಯಾಪ್ತ

ನಾದ ಶ್ರೀಪರಮಾತ್ಮನ್ನ ಜ್ಞಾನಿಗಳಾದವರು ಅತ್ಯಂತ ಆದರದಿಂದ ಪದಾರ್ಥಾಂತರ್ಗತದಲ್ಲಿ ಅನುಸಂಧಾನ ಮಾಡತಾರೇದು ತಾತ್ಪರ್ಯ. ॥17॥

## 2. ಭಾವಪ್ರಕಾಶಿಕೆ :-

ಪಾರ್ವತೀದೇವಿಯರು ಹುಳಿಪದಾರ್ಥಗಳಿಗೆಲ್ಲಾ ಅಭಿಮಾನಿ ಎನಿಸುವರು. ಅವರಲ್ಲಿ ದಾಮೋದರಮೂರ್ತಿಯನ್ನು ಚಿಂತಿಸಬೇಕು. ಹುಳಿ ಇಲ್ಲದ ಪದಾರ್ಥಗಳಿಗೆ ರುದ್ರದೇವರು ಅಭಿಮಾನಿಗಳು. ಅವರಲ್ಲಿ ಸಂಕರ್ಷಣಮೂರ್ತಿಯನ್ನು ಚಿಂತಿಸಬೇಕು. ಸಕ್ಕರೆ, ಬೆಲ್ಲ ಇವುಗಳಿಗಭಿಮಾನಿಯು ದೇವೇಂದ್ರನು ಅವನಲ್ಲಿ ಶ್ರೀವಾಸುದೇವನನ್ನು ಚಿಂತಿಸಬೇಕು. ॥17॥

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :-

ಗೌರೀ ಸರ್ವಾಮ್ಲವಸ್ತುಸ್ಥಾ ತತ್ರ ದಾಮೋದರಃ ಸ್ಮೃತಃ॥ ಅನಾಮ್ಲದ್ರವ್ಯಗಃ ರುದ್ರಃ ಚಿಂತ್ಯಃ ಸಂಕರ್ಷಣಃ ಪರಃ॥ ಶರ್ಕರಾಗುಡಗಃ ಶಕ್ರಃ ವಾಸುದೇವಸ್ತು ತತ್ರತಃ"। ಇತ್ಯರ್ಥಂ ಬ್ರೂತೇ "ಗೌರಿ" ಇತಿ ॥17॥

### ಕನ್ನಡಾರ್ಥ

ಎಲ್ಲ ಹುಳಿವಸ್ತುಗಳಿಗೆ ಗೌರಿ ಅಭಿಮಾನಿ ದೇವತೆ. ಅಲ್ಲಿ ದಾಮೋದರರೂಪ. ಹುಳಿಯಿಲ್ಲದ ವಸ್ತುಗಳಿಗೆ ರುದ್ರನು ಅಭಿಮಾನಿ. ಅಲ್ಲಿ ಸಂಕರ್ಷಣರೂಪ. ಸಕ್ಕರೆ-ಬೆಲ್ಲಗಳಿಗೆ ಇಂದ್ರನು ಅಭಿಮಾನಿ, ಅಲ್ಲಿ ವಾಸುದೇವರೂಪ. ಈ ವಿಷಯವನ್ನು, "ಗೌರಿ" ಈ ಪದ್ಯದಿಂದ ಹೇಳುತ್ತಾರೆ. ॥17॥

## 5. ಶ್ರೀಗುರುಹೃದಯಪ್ರಕಾಶಿಕೆ :

ಸರ್ವಾಮ್ಲವೆಂಬ ಎಲ್ಲಾ ಹುಳಿ ಪಲ್ಯದಲ್ಲೂ ಗೌರಿ ಅಭಿಮಾನಿ. ಅಲ್ಲಿ ಶೌರಿಯೆಂಬ ಶ್ರೀಕೃಷ್ಣ ದಾಮೋದರರೂಪದಿಂದ ಇರುವನು. ಅನಾಮ್ಲವೆಂಬ ಹುಳಿಗೆ ವಿರುದ್ಧ ಸಿಹಿ ಪಲ್ಯದಲ್ಲಿ ಗೌರಿಪನೆಂಬ ರುದ್ರ ಅಭಿಮಾನಿ. ಅಲ್ಲಿ ಸಂಕರ್ಷಣನ ರೂಪ ಚಿಂತಿಸಬೇಕು. ಸಾರವಾದ ಶರ್ಕರ, ಗುಡವೆಂಬ ಬೆಲ್ಲ

ದಲ್ಲಿ ಸಹ ವೃತ್ರಾರಿ ಎಂಬ ಇಂದ್ರ ಇರುವನು. ಅಲ್ಲಿ ನಿಯಾಮಕನಾಗಿ ವಾಸು ದೇವರೂಪವನ್ನು ಸೂರಿಗಳೆಂಬ ಜ್ಞಾನಿಗಳು ಪರಮಾದರದಿಂದ ಸದಾ ಧ್ಯಾನಿಸುವುದು. ॥17॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಹುಳಿರಸಯುಕ್ತವಾದ ಸಕಲ ವಸ್ತುಗಳಿಗೂ ಅಭಿಮಾನಿ ದೇವತಾ- **ಗೌರೀದೇವಿಯು.** ಪಾರ್ವತಿಗೆ ಗೌರೀ ಎಂತ ನಾಮ. ನೆಲ್ಲಿಕಾಯಿ–ಹುಣಸೇ ಹಣ್ಣು...ಇತ್ಯಾದಿ ಪದಾರ್ಥಗಳಲ್ಲಿ ಆಮ್ಲರಸ (ಹುಳಿ) ಅಧಿಕವಾಗಿರುವುದು. ಇದರಿಂದ ಗೌರಿಯು **ಸರ್ವಾಮ್ಲಸ್ಥಳು.** ಗೌರಿಯಲ್ಲಿ **ದಾಮೋದರ ನಾಮಕ** ಶ್ರೀಹರಿಯ ಚಿಂತನೆ. ದಾಮೋದರನು ಕಾರ್ತೀಕಮಾಸಾಭಿ ಮಾನಿಯು. ಕಾರ್ತೀಕಮಾಸದಲ್ಲಿಯೇ 'ಧಾತ್ರಿಹವನ'- ಅಂದರೆ ನೆಲ್ಲಿಕಾಯಿ **ಹೋಮ.**

**ಅನಾಮ್ಲಸ್ಥ**–ಎಂದರೆ ಹುಳಿಯಲ್ಲದ ಪದಾರ್ಥಗಳು ಅಂತಹ ಭೋಜ್ಯ ವಸ್ತುಗಳಲ್ಲಿ ಗೌರೀಧವನಾದ ಶ್ರೀಮಹರುದ್ರದೇವರು ಅಭಿಮಾನಿಗಳು. **ಗೌರಿಪ**–ಗೌರಿಯಪತಿ ಮತ್ತು ಸಂರಕ್ಷಕರಾದ ಶ್ರೀರುದ್ರದೇವರು. ಶ್ರೀರುದ್ರ ದೇವರಲ್ಲಿ ಅಂತರ್ಗತನಾದ **ಶ್ರೀಸಂಕರ್ಷಣಭಗವದ್ರೂಪದ** ಚಿಂತನೆ. ಶ್ರೀರುದ್ರದೇವರ ಉಪಾಸ್ಯಮೂರ್ತಿ, ಶ್ರೀ ಸಂಕರ್ಷಣನಾಮಕ ಪರಮಾತ್ಮ.

"ಶರ್ಕರ"–ಎಂದರೆ ಸಕ್ಕರೆ. "ಗಂಡ", ಎಂದರೆ ಬೆಲ್ಲ. ಸಕ್ಕರೆ, ಬೆಲ್ಲ ಮುಂತಾದ ವಸ್ತುಗಳಲ್ಲಿ ಮಾಧುರ್ಯರಸ. ಇಂತಹ ಮಧುರವಾದ ಪದಾರ್ಥ ಗಳಲ್ಲಿ **ಇಂದ್ರದೇವರು** ಅಭಿಮಾನಿಗಳು. ವೃತ್ರಾಸುರನನ್ನು ವಜ್ರಾಯುಧ ದಿಂದ ಸಂಹರಿಸಿದ ಶ್ರೀಇಂದ್ರದೇವರು **ವೃತ್ರಾರಿಗಳು.** ಇಂದ್ರದೇವರಲ್ಲಿ **ವಾಸುದೇವನಾಮಕ** ಶ್ರೀಪರಮಾತ್ಮನ ಚಿಂತನೆ.

4. ಈ ರೀತಿಯಲ್ಲಿ ಜ್ಞಾನಿಗಳು (ಸೂರಿಗಳು) ಭಕ್ತಿಯಿಂದ (ಪರಮಾ ದರದಿ) **ತಾವು ಭೋಜನ ಮಾಡುವಾಗ**, ಹುಳಿಯಲ್ಲಿ ಗೌರಿ ಮತ್ತು ದಾಮೋದರರ

ಹುಳಿಯಿಲ್ಲದ ವಸ್ತುಗಳಲ್ಲಿ ಶ್ರೀರುದ್ರದೇವರು ತದಂತರ್ಗತ ಶ್ರೀ ಸಂಕರ್ಷಣ ಮತ್ತು ಸಿಹಿವಸ್ತುಗಳಲ್ಲಿ ಶ್ರೀಇಂದ್ರದೇವರು ತದಂತರ್ಗತ ಶ್ರೀವಾಸುದೇವ. ಈ ರೀತಿಯಲ್ಲಿ ಚಿಂತಿಸುತ್ತ ಭುಂಜಿಸುವರೆಂದು ತಾತ್ಪರ್ಯ. ॥17॥

| ಕ್ರಮ ಸಂಖ್ಯೆ | ಭೋಜ್ಯ ವಸ್ತುಗಳು | ಅಭಿಮಾನಿ ದೇವತಾ | ತದಂತರ್ಗತ ಭಗವದ್ರೂಪ |
|---|---|---|---|
| 1. | ಆಮ್ಲರಸಯುಕ್ತ ಪದಾರ್ಥಗಳು (ರುಚಿಯಲ್ಲಿ ಹುಳಿ) | ಶ್ರೀಗೌರೀ | ಶ್ರೀದಾಮೋದರ |
| 2. | ಹುಳಿಯಿಲ್ಲದ ಪದಾರ್ಥಗಳು | ಶ್ರೀರುದ್ರ ದೇವರು | ಶ್ರೀಸಂಕರ್ಷಣ |
| 3. | ಮಧುರ ಪದಾರ್ಥಗಳು | ಶ್ರೀಇಂದ್ರ ದೇವರು | ಶ್ರೀವಾಸು ದೇವ |

## ಪದ್ಯ ೧೮

ಮೂಲ :

ಸ್ಮರಿಸು ವಾಚಸ್ಪತಿಯ ಸೋಪ ।
ಸ್ಕರದೊಳಗೆ ಪ್ರದ್ಯುಮ್ನನಿಪ್ಪನು ।
ನಿಕಯಪತಿ ಯಮಧರ್ಮ ಕಟುದ್ರವ್ಯದೊಳಗನಿರುದ್ಧ ॥
ಸರಸಪ ಶ್ರೀರಾಮತೀಳದಿ ।
ಸ್ಮರನ ಶ್ರೀಪುರುಷೋತ್ತಮನ ಕ ।
ರ್ಪುರದಿ ಚಿಂತಿಸಿ ಪೂಜಿಸುತಲಿರು ಪರಮಭಕುತಿಯಲಿ ॥೧೮॥

**ಅವತರಣಿಕೆ :**

ಪ್ರಸಕ್ತಪದ್ಯದಿಂದ ನೈವೇದ್ಯಪ್ರಕರಣವನ್ನು ಇನ್ನೂ ಮುಂದುವರಿಸು ತ್ತಾರೆ. ॥16॥

**ಪ್ರತಿಪದಾರ್ಥ :**

**ಕೋಸಂಬರಿದೊಳಗೆ** = ಕೋಸುಂಬರಿ ಮೊದಲಾದ ಭೋಜ್ಯ ವಸ್ತು ಗಳಲ್ಲಿ, **ವಾಚಸ್ಪತಿಯು** = ವಾಕ್ಯಾಭಿಮಾನಿಗಳಾದ ಶ್ರೀಬೃಹಸ್ಪತ್ಯಾ ಚಾರ್ಯರನ್ನು, **ಸ್ಮರಿಸು** = ಚಿಂತಿಸುವುದು. **ಪ್ರದ್ಯುಮ್ನನಿಪ್ಪನು** = ಅವರ ಅಂತರ್ಗತನಾಗಿ ಶ್ರೀಪ್ರದ್ಯುಮ್ನನಾಮಕ ಶ್ರೀಪರಮಾತ್ಮನಿದ್ದಾನೆ. **ಕಟುದ್ರವ್ಯದೊಳಗೆ** = ಕಹಿರುಚಿ ಇರುವ ಭೋಜನ ಪದಾರ್ಥಗಳಲ್ಲಿ (ಬೇವಿನ ಸೊಪ್ಪು, ಹಾಗಲಕಾಯಿ, ಕಷಾಯ ಇತ್ಯಾದಿಗಳಲ್ಲಿ), **ನಿರಯಪತಿ** = ನರಕಾಧಿಪತಿಯಾದ ಯಮಧರ್ಮರಾಯನು ಅಭಿಮಾನಿಯಾಗಿದ್ದಾನೆ. **ಅನಿರುದ್ಧ** = ಯಮನಲ್ಲಿ ಅಂತರ್ಗತನಾಗಿ ಅನಿರುದ್ಧನಿದ್ದಾನೆ. **ಶ್ರೀರಾಮ** = ಇಂಗಿನಲ್ಲಿ, **ಏಳದಿ** = ಯಾಲಕ್ಕಿಯಲ್ಲಿ. **ಸರಷಪ** = ಸಾಸುವೆಯಲ್ಲಿ, **ಕರ್ಪುರದಿ** = ಕರ್ಪೂರದಲ್ಲಿ, **ಸ್ಮರನ** = ಅಭಿಮಾನಿಯಾಗಿರತಕ್ಕ ಮನ್ಮಥ ನನ್ನು. **ಪುರುಷೋತ್ತಮನ** = ಅವನಲ್ಲಿ ಶ್ರೀಪುರುಷೋತ್ತಮನಾಮಕ ಶ್ರೀಪರಮಾತ್ಮನನ್ನು, **ಚಿಂತಿಸಿ** = ಧ್ಯಾನಪೂರ್ವಕವಾಗಿ, **ಪರಮಭಕುತಿಯಲಿ** = ಅತ್ಯಂತ ಭಕ್ತಿಯಿಂದ, **ಪೂಜಿಸುತಲಿರು** = ಐಕ್ಯಚಿಂತನಾ ಕ್ರಮ ದಿಂದ ಪೂಜಿಸು. ॥18॥

## ವ್ಯಾಖ್ಯಾನಗಳು

1. **ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-**

ಇನ್ನೂ ನೈವೇದ್ಯಸಮರ್ಪಣಕ್ರಮವನ್ನೇ ಹೇಳುತಾರೆ.

ಕೋಸಂಬರೀ ಮೊದಲಾದ ಸೋಪಸ್ಕರದೊಳಗೆ ವಾಕ್ಯಾಭಿಮಾನಿಯಾದ ಬೃಹಸ್ಪತ್ಯಾಚಾರ್ಯರನ್ನ ಸ್ಮರಿಸೋವನಾಗಬೇಕು. ಇವರ ಅಂತರ್ಗತದಲ್ಲಿ ಪ್ರದ್ಯುಮ್ನರೂಪೀ ಪರಮಾತ್ಮನ್ನ ಅನುಸಂಧಾನ ಮಾಡಬೇಕು. ಕಹಿಯಿಂದ ಸಹಿತವಾದ ಭೋಜನಪದಾರ್ಥದೊಳಗೆ ನರಕಗಳಿಗೆ ಯಜಮಾನರಾದ ಯಮ ಧರ್ಮರಾಯ ಅಭಿಮಾನಿಯಾಗಿ ಇರೋವರಾಗಿದ್ದಾರೆ. ಇವರ ಅಂತರ್ಗತದಲ್ಲಿ ಅನಿರುದ್ಧನಾಮಕ ಪರಮಾತ್ಮ ಇದ್ದಾನೆ. ಇಂಗಿನಲ್ಲಿ ಯಾಲಕ್ಕಿಯಲ್ಲಿ ಸಾಸುವೆಯಲ್ಲಿ ಕರ್ಪೂರದಲ್ಲಿ ಮನ್ಮಥದೇವರು ಅಭಿಮಾನಿಯಾದವರು. ಇವರ ಅಂತರ್ಗತದಲ್ಲಿ ಕಾಂತಿಯೂ ಐಶ್ವರ್ಯವೂ ಪೂರ್ಣನಾದ ಶ್ರೀಪುರುಷೋತ್ತಮನಾಮಕ ಪರಮಾತ್ಮನ್ನ ಅತ್ಯಂತ ಭಕ್ತಿಪೂರ್ವಕವಾಗಿ ಅನುಸಂಧಾನ ಮಾಡಬೇಕೆಂತ ತಾತ್ಪರ್ಯ. ಆಯಾ ಪದಾರ್ಥಾಂತರ್ಗತ ಆಯಾ ಭಗವದ್ರೂಪಗಳ ಪ್ರತಿಮಾ ಪೂಜಾದಂತೆ ಪೂಜಾದಿಗಳು ಮಾಡಿ, ದೇಹಾಂತರ್ಗತ ಬಿಂಬಪೂಜಾತಂತ್ರ ಸಾರೋಕ್ತ ಮಾಡಿ ತನ್ನ ಉಪಾಸ್ಯಪ್ರತಿಮಾಂತರ್ಗತ ಭಗವದ್ರೂಪಕ್ಕೂ ಪದಾರ್ಥಗಳ ಅಂತರ್ಗತ ಭಗವದ್ರೂಪಕ್ಕೂ ಐಕ್ಯಚಿಂತನರೂಪದಿಂದ ಮಾಡಿದ ಪೂಜಾವೇ ಪೂಜಾ ಎಂತ ಅನಿಸಿಕೊಳ್ಳಲ್ಪಡತದೆ. ಆದ್ದರಿಂದ ಇಂಥಾ ಪೂಜಾ ನಿವೇದನ ಮಾಡಬೇಕಂತ ತಾತ್ಪರ್ಯ. ॥18॥

## 2. ಭಾವಪ್ರಕಾಶಿಕೆ :-

ಅಡಿಗೆಯ ಸಾಮಗ್ರಿಯಲ್ಲಿ, ಬೃಹಸ್ಪತಿಯನ್ನೂ, ಅವರಲ್ಲಿ ಪ್ರದ್ಯುಮ್ನ ಮೂರ್ತಿಯನ್ನು ಚಿಂತಿಸು. ಕಹಿಪದಾರ್ಥಗಳಲ್ಲಿ ಯಮಧರ್ಮರಾಯನನ್ನೂ, ಅವನಲ್ಲಿ ಅನಿರುದ್ಧಮೂರ್ತಿಯನ್ನು ಚಿಂತಿಸು. ಸಾಸುವೆ, ಇಂಗು, ಏಲಕ್ಕಿ, ಕರ್ಪೂರ ಈ ನಾಲ್ಕರಲ್ಲಿ ಮನ್ಮಥನನ್ನೂ, ಅವನಲ್ಲಿ ಪುರುಷೋತ್ತಮ ಮೂರ್ತಿಯನ್ನೂ ಪರಮಭಕ್ತಿಯಿಂದ ಚಿಂತಿಸಿ, ಪೂಜಿಸುತ್ತಲಿರು. ॥18॥

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :

"ಉಪಸ್ಕರಸ್ಥ" ವಾಗೀಶಃ ಪ್ರದ್ಯುಮ್ನಃ ತತ್ರದೇವತಾಃ॥ ಕಟುದ್ರವ್ಯಂ ಪತಿ ಧರ್ಮ: ಹ್ಯನಿರುದ್ಧಾಸ್ತು ತತ್ರಗ!॥ ರಾಮಠೇಲಾ ಸರ್ಷಪಶ್ರೀಖಂಡ

ಕರ್ಪೂರಗಃ ಸ್ಮರಃ॥ ದೇವತಾ ತತ್ರ ಭಗವಾನ್ ಸಾಕ್ಷಾತ್ ಶ್ರೀಪುರುಷೋತ್ತಮಃ॥ ಇತ್ಯಾಕ್ತಮಾಹ "ಸ್ಮರಿಸು" ಇತಿ. ॥18॥

### ಕನ್ನಡಾರ್ಥ

ಉಪಸ್ಕಾರಗಳಿಗೇ (ಚಟ್ನಿ ಮುಂತಾದವುಗಳಿಗೆ) ಬೃಹಸ್ಪತಿಯು ಅಭಿಮಾನಿ. ಅಲ್ಲಿ ಪ್ರದ್ಯುಮ್ನರೂಪ. ಕಟುದ್ರವ್ಯಗಳಿಗೆ ಯಮ ಅಭಿಮಾನಿ, ಅಲ್ಲಿ ಅನಿರುದ್ಧರೂಪ. ಸಾಸವಿ, ಇಂಗು, ಯಾಲಕ್ಕಿ, ಕರ್ಪೂರಗಳಿಗೆ ಕಾಮನು ಅಭಿಮಾನಿ. ಅಲ್ಲಿ ಭಗವಾನ್ ಪುರುಷೋತ್ತಮನ ರೂಪ. ಈ ಪ್ರಮೇಯವನ್ನು "ಸ್ಮರಿಸು" ಇತಿ. ॥18॥

### 5. ಶ್ರೀಗುರುಹೃದಯಪ್ರಕಾಶಿಕೆ :—

ಸೋಪಸ್ಕರವೆಂಬ ಕಿಚ್ಚಡಿ (ಚಟ್ನಿ), ಕೋಸಂಬರಿ ಮೊದಲಾದ್ದಕ್ಕೂ, ಪಾಕಕ್ಕೆ ಉಪಯುಕ್ತವಾದ ಅಕ್ಕಿ ಮೊದಲಾದ ಹಸಿಪದಾರ್ಥಗಳಿಗೂ ಸಹಾ ಬೃಹಸ್ಪತಿ ಅಭಿಮಾನಿಯೆಂದು, ಪ್ರದ್ಯುಮ್ನ ಅಲ್ಲಿ ನಿಯಾಮಕನೆಂದು ಸಹ ಸ್ಮರಿಸಬೇಕು. ಕಟುದ್ರವ್ಯವೆಂಬ ಖಾರದಲ್ಲಿ ನಿರಯಪತಿ ಅಂದರೆ ಯಮಧರ್ಮ ಅಭಿಮಾನಿ. ಅಲ್ಲಿ ಅನಿರುದ್ಧರೂಪ ನಿಯಾಮಕರೂಪ. ಸರ್ಷಪವೆಂಬ ಸಾಸುವೆಯಲ್ಲಿ (ವಘರಣೆಯಲ್ಲಿ) ಶ್ರೀದೇವಿ, ರಾಮಠವೆಂಬ ಇಂಗು, ಏಳವೆಂಬ ಯಾಲಕ್ಕಿ ಇವುಗಳಲ್ಲಿ ಸಹ ಸ್ಮರನೆಂಬ ಕಾಮನು ಅಭಿಮಾನಿ. ಕರ್ಪೂರದಲ್ಲಿ ಸಹ ಕಾಮನು ಅಭಿಮಾನಿ, ಪುರುಷೋತ್ತಮಮೂರ್ತಿಯು ನಿಯಾಮಕ ಎಂದು ಚಿಂತಿಸಿ ಪರಮಭಕ್ತಿಯಿಂದ ಪೂಜಿಸಬೇಕು. ॥18॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಅಡಿಗೆಗೆ ಉಪಯೋಗಿಸುವ ಅಕ್ಕಿ, ಗೋಧಿ ಇತ್ಯಾದಿ ವಸ್ತುಗಳಿಗೆ **ಸೋಪಸ್ಕರ**ಗಳೆಂದು ಹೆಸರು. ಚಟ್ನಿ, ಕೋಸುಂಬರೀ ಮುಂತಾದ ವಸ್ತುಗಳೂ ಸೋಪಸ್ಕರಗಳು. ಇಂತಹ ಸೋಪಸ್ಕರಗಳಲ್ಲಿ ಸುರಗುರುವೂ, ವಾಕ್ಯಾಭಿಮಾನಿ ದೇವತೆಯೂ ಆದ **ಬೃಹಸ್ಪತ್ಯಾಚಾರ್ಯ**ರು (**ವಾಚಸ್ಪತಿ**) ಅಭಿಮಾನಿಗಳು. ಅವರಲ್ಲಿ **ಪ್ರದ್ಯುಮ್ನ**ನನ್ನು ಚಿಂತಿಸಬೇಕು. ದ್ಯುತಿ–ಎಂದರೆ

ಕಾಂತಿ, ಪ್ರಕಾಶವೆಂದರ್ಥ. ಪ್ರಕೃಷ್ಟವಾದ ಅಂದರೆ ಅಪರಿಮಿತವಾದ ಕಾಂತಿ ಯಿಂದ ಯುಕ್ತನಾಗಿರುವುದರಿಂದ ಪ್ರದ್ಯುಮ್ನಶಬ್ದವಾಚ್ಯನು. ಸ್ಥೂಲಸೃಷ್ಟಿ ಮತ್ತು ಜಗತ್ತಿನ ಪಾಲನಾ ಕಾರ್ಯನಿರ್ವಾಹಕ ಭಗವದ್ರೂಪವು.

2. ನಿರಯ ಎಂದರೆ ನರಕಗಳು. ನಿರಯಪತಿ ಎಂದರೆ ನರಕಗಳ ಮೇಲ್ವಿಚಾರಕನಾದ ಯಮಧರ್ಮನು. ಬೇವು, ಹಾಗಲಕಾಯಿ, ಕಷಾಯ.... ಇತ್ಯಾದಿ ಕಹಿವಸ್ತುಗಳಿಗೆ ಯಮಧರ್ಮನು ಅಭಿಮಾನಿಯು. ಇಂತಹ ಕಟು ದ್ರವ್ಯಗಳಲ್ಲಿ (ಕಹಿರಸಯುಕ್ತ) ಅನಿರುದ್ಧನಾಮಕ ಶ್ರೀಪರಮಾತ್ಮನನ್ನು ಚಿಂತಿಸಬೇಕು. ಯಾವ ಪ್ರತಿಬಂಧಕ-ಪ್ರತಿರೋಧವೂ ಇಲ್ಲದ ಸರ್ವತಂತ್ರ ಸ್ವತಂತ್ರನಾದ ಜಗದೀಶ್ವರನಿಗೆ ಅನಿರುದ್ಧ ಎಂತನಾಮ.

3. ಒಗ್ಗರಣೆಗೆ ಹಾಕುವ ಸಾಸುವೆ (ಸರಷಪ) ಇಂಗು (ರಾಮಠ) ಸುಗಂಧಯುಕ್ತವಾದ ಏಲಕ್ಕಿ (ಏಳ) ಪಚ್ಚಕರ್ಪೂರ ಈ ದ್ರವ್ಯಗಳಲ್ಲಿ ಅಭಿ ಮಾನಿಯು ಮನ್ಮಥನು (ಸ್ಮರನ) ಅವನ ಅಂತರ್ಯಾಮಿ ಶ್ರೀಪುರುಷೋ ತ್ತಮನನನ್ನು ಸ್ಮರಿಸಬೇಕು. ಕ್ಷರಾಕ್ಷರರಿಗಿಂತಲೂ ಉತ್ತಮೋತ್ತಮನಾದ ಶ್ರೀಪರಮಾತ್ಮನು, ಪುರುಷೋತ್ತಮ ಶಬ್ದವಾಚ್ಯನು.

4. ಈ ರೀತಿಯಲ್ಲಿ ಭೋಜನ ಪದಾರ್ಥಾಭಿಮಾನಿ ದೇವತಾ, ತದಂತರ್ಗತಭಗವದ್ರೂಪಗಳನ್ನು ತತ್ತತ್ಸ್ಥಾನಗಳಲ್ಲಿ ಚಿಂತಿಸುತ್ತಾ, ಅತ್ಯಂತ ಭಕ್ತಿಭಾವದಿಂದ ಅರಾಧಿಸುತ್ತಿರು ಎಂದು ದಾಸಾರ್ಯರ ಅಮೃತೋಪದೇಶ.

| ಕ್ರಮ ಸಂಖ್ಯೆ | ಭೋಜ್ಯ ವಸ್ತುಗಳು | ಅಭಿಮಾನಿ ದೇವತಾ | ತದಂತರ್ಗತ ಭಗವದ್ರೂಪ |
|---|---|---|---|
| 1. | ಸೋಪ ಸ್ಕರಗಳು | ಬೃಹಸ್ಪತ್ಯಾ ಚಾರ್ಯರು | ಪ್ರದ್ಯುಮ್ನ |
| 2. | ಕಟುದ್ರವ್ಯಗಳು | ಯಮಧರ್ಮ | ಅನಿರುದ್ಧ |
| 3, | ಸಾಸುವೆ-ಇಂಗು ಏಲಕ್ಕಿ-ಕರ್ಪೂರ | ಮನ್ಮಥ | ಪುರುಷೋ ತ್ತಮ |

## ಪದ್ಯ ೧೯

**ಮೂಲ :**

ನಾಲಿಗಿಂದಲಿ ಸ್ವೀಕರಿಪ ರಸ ।
ಹಾಲು ಮೊದಲಾದುದರೊಳಗೆ ಘೃತ ।
ತೈಲಪಕ್ವಪದಾರ್ಥದೊಳಗಿಹ ಚಂದ್ರನಂದನನ ॥
ಪಾಲಿಸುವಧೋಕ್ಷಜನ ಚಿಂತಿಸು ।
ಸ್ಥೂಲಕೂಷ್ಮಾಂಡ ತಿಲ ಮಾಷಜ ।
ಈ ಲಲಿತ ಭಕ್ಷ್ಯದೊಳು ದಕ್ಷನು ಲಕ್ಷ್ಮೀನರಸಿಂಹ ॥ ೧೯ ॥

**ಅವತರಣಿಕೆ :-**

ನೈವೇದ್ಯ ಸಮರ್ಪಣಾ ವಿಧಾನವನ್ನು ಪ್ರಸಕ್ತಪದ್ಯದಿಂದ ಇನ್ನೂ ತಿಳಿಸುತ್ತಾರೆ. ॥19॥

**ಪ್ರತಿಪದಾರ್ಥ :-**

**ನಾಲಿಗಿಂದಲಿ** = ನಾಲಗೆಮಾತ್ರದಿಂದ, **ಸ್ವೀಕರಿಪ** = ಭುಂಜಿಸುವ, **ರಸ** = ಷಡ್ರಸಯುಕ್ತವಾದ, **ಹಾಲು ಮೊದಲಾದುದರೊಳು** = ಹಾಲು, ಪಾನಕ, ಮಜ್ಜಿಗೆ, ಮಧುರದ್ರವಗಳು (ಉದಕ ವ್ಯತಿರಿಕ್ತ) ಇತ್ಯಾದಿ ವಸ್ತುಗಳಲ್ಲಿ, **ಘೃತ** = ತುಪ್ಪದಿಂದಲೂ, **ತೈಲ** = ಎಣ್ಣೆಯಿಂದಲೂ, **ಪಕ್ವ ಪದಾರ್ಥದೊಳಗೆ** = ಕರಿದ ಪದಾರ್ಥಗಳ ಒಳಗೆ, **ಇರುತಿಹ** = ಅಭಿಮಾನಿಯಾಗಿ ವಿದ್ಯಮಾನನಾಗಿಹ, **ಚಂದ್ರನಂದನನ** = ಚಂದ್ರನ ಮಗನಾದ ಬುಧನು. **ಪಾಲಿಸುವ** = ಬುಧನಲ್ಲಿ ಅಂತರ್ಗತನಾಗಿರುವ ಸಕಲ ಜನರ ಸಂರಕ್ಷಕನಾಗಿರುವ, **ಅಧೋಕ್ಷಜನ** = ಅಧೋಕ್ಷಜನಾಮಕನಾದ ಶ್ರೀಪರಮಾತ್ಮನನ್ನು, **ಚಿಂತಿಸು** = ಚಿಂತಿಸಬೇಕು. **ಸ್ಥೂಲಕೂಷ್ಮಾಂಡ** = ಬೂದು

ಗುಂಬಳಕಾಯಿ. **ತಿಲ** = ಎಳ್ಳು. **ಮಾಷ** = ಉದ್ದು ಇವುಗಳಿಂದ ಮಾಡಿದ, **ಈ ಲಲಿತಭಕ್ಷ್ಯದೊಳು** = ಸಂಡಿಗೆ ಮುಂತಾದ ಸುಲಭವಾದ ಭಕ್ಷ್ಯಗಳಲ್ಲಿ, **ದಕ್ಷನು** = ದಕ್ಷಪ್ರಜಾಪತಿಯು, **ಲಕ್ಷ್ಮೀನರಸಿಂಹ** = ತದಂತರ್ಗತನಾದ ಶ್ರೀಲಕ್ಷ್ಮೀನರಸಿಂಹದೇವರನ್ನು ಚಿಂತಿಸಬೇಕು. ॥19॥

## ವ್ಯಾಖ್ಯಾನಗಳು

### 1. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—

ಇನ್ನೂ ನೈವೇದ್ಯಸಮರ್ಪಣ ಅನುಸಂಧಾನವನ್ನೇ ಹೇಳುತಾರೆ.

ನಾಲಿಗೆಮಾತ್ರದಿಂದಲೇ ಸ್ವೀಕಾರ ಮಾಡತಕ್ಕ ಷಡ್ರಸೋಪೇತವಾದ, ಉದಕವ್ಯತಿರಿಕ್ತ ಹಾಲು, ಪಾನಕ, ಮಜ್ಜಿಗಿ, ಗೊಜ್ಜು ಮೊದಲಾದ ದ್ರವ್ಯಗಳಲ್ಲೇನು. ತುಪ್ಪದಿಂದಲೂ, ಎಣ್ಣೆಯಿಂದಲೂ ಕರಿದ ಪದಾರ್ಥಗಳ ಒಳಗೇನು ಚಂದ್ರದೇವರ ಮಗನಾದ ಬುಧನು ಅಭಿಮಾನಿಯಾಗಿ ಇದ್ದಾನೆ. ಈ ಬುಧನನ್ನು ರಕ್ಷಣೆ ಮಾಡುವ, ಅವನ ಅಂತರ್ಗತನಾದ ಅಧೋಕ್ಷಜನಾಮಕ ಪರಮಾತ್ಮನ್ನ ತಿಳಿಯೋವನಾಗಬೇಕು. ಬೂದುಗುಂಬಳಕಾಯಿ, ಎಳ್ಳು, ಉದ್ದು ಇವುಗಳಿಂದ ನಿರ್ಮಿತವಾದದ್ದು ಸಂಡಿಗಿ. ಈ ಸುಲಭವಾದ ಭಕ್ಷ್ಯಗಳಲ್ಲಿ ದಕ್ಷಪ್ರಜೇಶ್ವರನು ಅಭಿಮಾನಿ. ಇವನ ಅಂತರ್ಗತ ಪೂರ್ವೋಕ್ತ ಸಂಡಿಗಿಯಲ್ಲಿ ಶ್ರೀಲಕ್ಷ್ಮೀನರಸಿಂಹದೇವರನ್ನ ಅನುಸಂಧಾನ ಮಾಡೋವನಾಗಬೇಕಂತ ತಾತ್ಪರ್ಯ. ॥19॥

### 2. ಭಾವಪ್ರಕಾಶಿಕೆ :-

ನಾಲಿಗೆಯಿಂದ ರುಚಿಯನ್ನು ತೆಗೆದುಕೊಳ್ಳುವ, ಅಂದರೆ, ಹಲ್ಲಿನಿಂದ ಅಗಿಯದೇ ಪಾನಮಾಡುವ ರಸ ಹಾಲು ಮೊದಲಾದವುಗಳಿಗೂ, ತುಪ್ಪ, ಎಣ್ಣೆಗಳಿಂದ ಪಕ್ವಮಾಡಿದ ಪದಾರ್ಥಗಳಿಗೂ ಅಭಿಮಾನಿಯು ಬುಧನು. ಅವನಲ್ಲಿ ಅಧೋಕ್ಷಜಮೂರ್ತಿಯನ್ನು ಚಿಂತಿಸು. ಬೂದುಕುಂಬಳ, ಎಳ್ಳು, ಉದ್ದು

ಇವುಗಳಿಂದ ಮಾಡಲ್ಪಟ್ಟ ಹಪ್ಪಳ, ಸಂಡಿಗೆ ಮೊದಲಾದವುಗಳಿಗೆ ಅಭಿಮಾನಿಯು ದಕ್ಷಪ್ರಜೇಶ್ವರನು. ಅವನಲ್ಲಿ ಶ್ರೀಲಕ್ಷ್ಮೀನರಸಿಂಹಮೂರ್ತಿಯನ್ನು ಚಿಂತಿಸು. ||19||

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :-

"ಚೋಷ್ಯಪೇಯಾದ್ಯಾಜ್ಯ ತೈಲ ಪಕ್ವಪಃ ಚಂದ್ರನಂದನಃ ॥ ಅಧೋಕ್ಷಜಃ ತತ್ರ ದೇವತಾ ತಿಲ ಕೂಷ್ಮಾಂಡ ಮಾಷಜೈಃ ॥ ನಿರ್ಮಿತೇಷಂಪತಿಃ ದಕ್ಷಃ ನಾರಸಿಂಹಸ್ತುತತ್ರಗಃ" ಇತ್ಯುಕ್ತಮಾಹ "ನಾಲಿಗೆ" ಇತಿ. ॥19॥

### ಕನ್ನಡಾರ್ಥ

"ಚೋಷ್ಯ, ಪೇಯ. ಆಜ್ಯ (ತುಪ್ಪ) ತೈಲಗಳಲ್ಲಿ ಮಾಡಿದ ಪಕ್ವಾನ್ನಗಳಿಗೆ ಬುಧನು ಅಭಿಮಾನಿ. ಅಲ್ಲಿ ಅಧೋಕ್ಷಜರೂಪ, ತಿಲ, ಕೂಷ್ಮಾಂಡ, ಮಾಷಗಳಿಂದ ನಿರ್ಮಿತವಾದ ಪಕ್ವಾನ್ನಗಳಿಗೆ ದಕ್ಷನು ಅಭಿಮಾನಿ. ಅಲ್ಲಿ ನರಸಿಂಹರೂಪ. ಈ ವಿಷಯವನ್ನು "ನಾಲಿಗೆ" ಈ ಪದ್ಯದಿಂದ ಹೇಳುತ್ತಾರೆ. ॥19॥

## 5. ಶ್ರೀಗುರುಹೃದಯಪ್ರಕಾಶಿಕೆ :-

ನಾಲಿಗೆಯಿಂದ ಸ್ವೀಕರಿಸುವ ರಸಗಳು ಹಾಲು ಮೊದಲಾದುದರೊಳಗೆ, ಘೃತ ತೈಲದಿಂದ ಸಹ ಪಕ್ವವಾದ ಪದಾರ್ಥಗಳಲ್ಲೂ ಚಂದ್ರನಂದನನಾದ ಬುಧನು ಅಭಿಮಾನಿ, ಅಲ್ಲಿ ರಕ್ಷಿಸುವ ಅಧೋಕ್ಷಜರೂಪವನ್ನು ಚಿಂತಿಸುವುದು. ಸ್ಥೂಲಕೂಷ್ಮಾಂಡವೆಂಬ ಕುಂಬಳಕಾಯಿ, ತಿಲ ಎಂಬ ಎಳ್ಳು, ಮಾಷವೆಂಬ ಉದ್ದು ಇವುಗಳಿಂದ ಮಾಡಿದ, ಈ ಲಲಿತವೆಂಬ ಮನೋಹರಭಕ್ಷ್ಯದಲ್ಲಿ ದಕ್ಷಪ್ರಜೇಶ ಅಭಿಮಾನಿ. ಅಲ್ಲಿ ಲಕ್ಷ್ಮೀನರಸಿಂಹರೂಪ ನಿಯಾಮಕರೂಪವು. ॥19॥

—*—

## ಸರ್ವವ್ಯಾಖ್ಯಾನಸಾರಸಂಗ್ರಹ

ನಾಲಿಗೆಯಿಂದ ಚಪ್ಪರಿಸಿ, ರುಚಿನೋಡಿ. ಪಾನಮಾಡುವ ನೀರು ವ್ಯತಿರಿಕ್ತ, ಹಸುವಿನಹಾಲು, ಪಾನಕ, ಶರ್ಕರಮಿಶ್ರರಸಗಳು ಇತ್ಯಾದಿ ವಸ್ತುಗಳಲ್ಲಿಯೂ ಮತ್ತು ಶುದ್ಧವಾದ ತುಪ್ಪ ಮತ್ತು ಎಣ್ಣೆಯಲ್ಲಿ ಕರಿದ ಮತ್ತು ಮಾಡಿದ ಪದಾರ್ಥಗಳಲ್ಲಿ ಚಂದ್ರನಂದನನಾದ **ಬುಧನು** ಅಭಿಮಾನಿಯು. ಬುಧನಲ್ಲಿ **ಅಧೋಕ್ಷಜ**ನಾಮಕನಾದ ಶ್ರೀಪರಮಾತ್ಮನು ನಿಯಾಮಕನಾಗಿದ್ದಾನೆ. ಎಂದೆಂದಿಗೂ ಅಪಕರ್ಷವನ್ನು ಹೊಂದಿರುವ ಶ್ರೀಪರಮಾತ್ಮನಿಗೆ **ಅಧೋಕ್ಷಜ**ನೆಂತನಾಮ.

"ಜಾನುಕದಾಚಿದಪಿ ಅಧಃ ನಕ್ಷೀಯತೇನ ಕ್ಷಯತಿ ಗಚ್ಛತೀತಿ ಅಧೋಕ್ಷಜಃ॥ ಎಂದು **ವಿಷ್ಣುಸಹಸ್ರನಾಮ**ದಲ್ಲಿ ಪರಿಷ್ಕಾರರೂಪ. (415ನೆಯ ನಾಮ)

2. ಬೂದುಕುಂಬಳಕಾಯಿ (**ಸ್ಥೂಲಕೂಷ್ಮಾಂಡ**) ಯನ್ನು ಉಪಯೋಗಿಸಿ ತಯಾರಿಸಿದ ಸಂಡಿಗೆ, ಇತರ ವಸ್ತುಗಳಿಂದ ತಯಾರಿಸಿದ ಹಪ್ಪಳ ಇವುಗಳನ್ನು ಎಣ್ಣೆಯಲ್ಲಿ ಕರಿದ (**ತಿಲ**) ಉದ್ದು (**ಮಾಷ**) ಮಾಡಿದ ಒಡೆ ಇತ್ಯಾದಿ ಭೋಜ್ಯವಸ್ತುಗಳು ಇವುಗಳನ್ನು ಲಲಿತಭಕ್ಷ್ಯಗಳೆಂದು ಕರೆದಿರುತ್ತಾರೆ. ಈ ವಸ್ತುಗಳಲ್ಲಿ ದಕ್ಷಪ್ರಜಾಪತಿಯು ಅಭಿಮಾನಿಯು. ದಕ್ಷನಲ್ಲಿ ಅಂತರ್ಗತನಾದ ಶ್ರೀಲಕ್ಷ್ಮೀನರಸಿಂಹ ದೇವರನ್ನು ಚಿಂತಿಸಬೇಕು. ॥19॥

| ಕ್ರಮ ಸಂಖ್ಯೆ | ಭೋಜ್ಯ ವಸ್ತುಗಳು | ಅಭಿಮಾನಿ ದೇವತಾ | ತದಂತರ್ಗತ ಭಗವದ್ರೂಪ |
|---|---|---|---|
| 1. | ಹಾಲು, ಪಾನಕ, ಮಧುರದ್ರವ್ಯಗಳು ಹಾಗೂ ತುಪ್ಪ ಮತ್ತು ಎಣ್ಣೆಯಲ್ಲಿ ಕರಿದ ಭಕ್ಷ್ಯಗಳಲ್ಲಿ | ಚಂದ್ರ ನಂದನನಾದ ಬುಧನು | ಶ್ರೀಅಧೋಕ್ಷಜ |
| 2. | ಲಲಿತ ಭಕ್ಷ್ಯಗಳಲ್ಲಿ | ದಕ್ಷ ಪ್ರಜಾಪತಿ | ಶ್ರೀಲಕ್ಷ್ಮೀ ನರಸಿಂಹ |

## ಪದ್ಯ ೨೦

ಮೂಲ :

ಮನುವು ಮಾಷಸುಭಕ್ಷ್ಯದೊಳು ಚಿಂ ।
ತನೆಯ ಮಾಡಚ್ಯುತನ ನಿರಯತಿ ।
ಮನೆಯೆನಿಪ ಲವಣದೊಳು ಮರೆಯದೆ ಶ್ರೀಜನಾರ್ದನನ ॥
ನೆನೆವುತಿರು ಫಲರಸಗಳೊಳು ಪ್ರಾಣನ ।
ಉಪೇಂದ್ರನ ವೀಳ್ಯದೆಲೆಯೊಳು ।
ದ್ಯುನದಿ ಹರಿರೂಪವನೆ ಕೊಂಡಾಡುತಲಿ ಸುಖಿಸುತಿರು ॥೨೦॥

ಅವತರಣಿಕೆ :-

ಪ್ರಸಕ್ತಪದ್ಯದಿಂದ ನೈವೇದ್ಯಸಮರ್ಪಣಾನುಸಂಧಾನಕ್ರಮವನ್ನೇ ಮುಂದು ವರಿಸಿ ಹೇಳುತ್ತಾರೆ. ।20।

ಪ್ರತಿಪದಾರ್ಥ :-

**ಮನುವು** = ಸ್ವಾಯಂಭುವಮನುವು. **ಮಾಷಸುಭಕ್ಷ್ಯದೊಳು** = ಉದ್ದಿನಿಂದ ತಯಾರಿಸಿದ ಒಡೆ ಇತ್ಯಾದಿ ಭೋಜ್ಯವಸ್ತುಗಳಲ್ಲಿ ಅಭಿಮಾನಿಯಾಗಿದ್ದಾನೆ. **ಅಚ್ಯುತನ** = ಮನುವಿನಲ್ಲಿ ಅಂತರ್ಗತನಾದ ಅಚ್ಯುತನಾಮಕ ಶ್ರೀಪರಮಾತ್ಮನನ್ನು, **ಚಿಂತನೆಯಮಾಡು** = ಧ್ಯಾನಿಸಬೇಕು. **ನಿರಯತಿ** = ನಿರಋತಿಯು, **ಮನೆಯೆನಿಪ** = ಅಭಿಮಾನಿಯಾಗಿರುವ, **ಲವಣದೊಳು** = ಉಪ್ಪಿನಲ್ಲಿ, **ಶ್ರೀಜನಾರ್ದನನ** = ಶ್ರೀಜನಾರ್ದನರೂಪೀ ಶ್ರೀಹರಿಯನ್ನು, **ಮರೆಯದೆ** = **ಸ್ಮರಣಪೂರ್ವಕ**. **ನೆನೆವುತಿರು** = ಚಿಂತಿಸುತ್ತಿರು. **ಫಲರಸಗಳೊಳು** = ಹಣ್ಣಿನ ರಸಗಳಲ್ಲಿ, **ಪ್ರಾಣನ** = ದಾಸಪ್ರಾಣದೇವರ, **ಉಪೇಂದ್ರನ** = ತದಂತರ್ಗತ ಶ್ರೀಉಪೇಂದ್ರನನ್ನು, **ವೀಳ್ಯದೆಲೆಯೊಳು** =

ವೀಳ್ಯದೆಲೆಯಲ್ಲಿ, **ದ್ಯುನದಿ** = ದೇವನದಿ ಎಂದೆನಿಪ ಶ್ರೀಭಾಗೀರಥೀದೇವಿ ಯರು. **ಹರಿರೂಪವನೆ -** ಅವರಲ್ಲಿ ಹರಿನಾಮಕ ಶ್ರೀಪರಮಾತ್ಮನ **ಕೊಂಡಾಡುತಲಿ** = ಮಹಾತ್ಮ್ಯಜ್ಞಾನಪೂರ್ವಕವಾಗಿ ತಿಳಿದು ಭಜಿಸುತ್ತಾ, **ಸುಖಿಸುತಿರು** = ಸಂತೋಷಿಸುತ್ತಿರು. ॥20॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ನೈವೇದ್ಯಸಮರ್ಪಣಾನುಸಂಧಾನವನ್ನೇ ಹೇಳತಾರೆ.

ಉದ್ದುಮಾತ್ರದಿಂದ ನಿರ್ಮಿತವಾದ ವಡಿಸಾಂಕೇತವಾದ ಭಕ್ಷ್ಯದಲ್ಲಿ ಅಭಿಮಾನಿಯಾಗಿ ಸ್ವಾಯಂಭುವಮನುವು ಇರೋವನಾಗಿದ್ದಾನೆ. ಇವನ ಅಂತರ್ಗತದಲ್ಲಿ ಅಚ್ಯುತನಾಮಕ ಶ್ರೀಪರಮಾತ್ಮನ್ನ ತಿಳಿಯೋವನಾಗಬೇಕು. ನಿರಋತಿ ಉಪ್ಪಿನೊಳಗೆ ಅಭಿಮಾನಿ ಎಂತ ಕರಸುವ. ಇವನ ಅಂತರ್ಗತದಲ್ಲಿ ಶ್ರೀಜನಾರ್ದನಮೂರ್ತಿಯನ್ನು ತಿಳಿಯೋವನಾಗಬೇಕು. **ಬಾಳೇಹಣ್ಣು**, ತೆಂಗಿನಕಾಯಿ ಮೊದಲಾದ ಫಲಗಳಲ್ಲೇನು, ತದ್ಗತ ರಸಗಳಲ್ಲೇನು ದಾಸ ಪ್ರಾಣನ, ಇವನ ಅಂತರ್ಗತದಲ್ಲಿ ಉಪೇಂದ್ರನಾಮಕ ಶ್ರೀಪರಮಾತ್ಮನ್ನ ತಿಳಿಯೋವನಾಗಬೇಕು. ವೀಳ್ಯದೆಲೆಯಲ್ಲಿ ಭಾಗೀರಥೀದೇವೇರು. ಇವರ ಅಂತರ್ಗತದಲ್ಲಿ ಶ್ರೀಹರಿನಾಮಕ ಶ್ರೀಪರಮಾತ್ಮನ ರೂಪವನ್ನ ಮರಿಯಧಾಂಗೆ ಅನುಸಂಧಾನದಿಂದ ಚಿಂತನಿಮಾಡಬೇಕು. ಇಂಥಾ ದೇವತೆಗಳ ತದಂತರ್ಗತ ಶ್ರೀಪರಮಾತ್ಮನ ಸ್ತೋತ್ರಾದಿ ಮಹಾತ್ಮ್ಯಗಳನ್ನ ತಿಳಿದು ಸಂತೋಷಭರಿತನಾಗಿ ಇರೋವನಾಗು ಎಂತ ತಾತ್ಪರ್ಯ. ॥20॥

### 2. ಭಾವಪ್ರಕಾಶಿಕೆ :-

ಒಡೆ ಮೊದಲಾದ ಉದ್ದಿನ ಭಕ್ಷ್ಯಗಳಲ್ಲಿ ಸ್ವಾಯಂಭುವ ಮನುವನ್ನೂ, ಅವನಲ್ಲಿ ಅಚ್ಯುತಮೂರ್ತಿಯನ್ನು ಚಿಂತಿಸು. ಫಲಗಳ ರಸಗಳಲ್ಲಿ ಪಂಚ

ಪ್ರಾಣರ ಪೈಕಿ ಒಬ್ಬನಾದ ಪ್ರಾಣನನ್ನೂ, ಅವನಲ್ಲಿ ಉಪೇಂದ್ರನನ್ನು ಚಿಂತಿಸು. ವೀಳ್ಯದೆಲೆಯಲ್ಲಿ ಗಂಗೆಯನ್ನೂ, ಅಕೆಯಲ್ಲಿ ಶ್ರೀಹರಿಯನ್ನೂ ಕೊಂಡಾಡಿ ಸುಖದಿಂದಿರು. ||20||

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :-

ಮನುರಾಜಃ ಮಾಷಭಕ್ಷ್ಯಪತಿಃ, ಚಿಂತ್ಯೋಽಚ್ಯುತಃ ಪತಿಃ|| ಲವಣಸ್ಥಃ ನಿರಋತಿಃ ದೇವತಾ ತು ಜನಾರ್ದನಃ|| ಫಲ ತದ್ರಸಗಃ ಪ್ರಾಣಃ ಉಪೇಂದ್ರಃ ತತ್ರ ದೇವತಾ। ಗಂಗಾಂ ತಾಂಬೂಲಗಾಂ ವಿದ್ಧಿ ಶ್ರೀಹರಿಃ ತತ್ರ ದೇವತಾ। ಇತಿ ಮನೋಕ್ತಮಾಹ "ಮನುವು" ಇತಿ. ||20||

### ಕನ್ನಡಾರ್ಥ

"ಮಾಷಭಕ್ಷ್ಯಗಳಿಗೆ ಸ್ವಾಯಂಭುವಮನುವು ಅಭಿಮಾನಿ. ಅಲ್ಲಿ ಅಚ್ಯುತರೂಪ; ಲವಣಕ್ಕೆ ಅಭಿಮಾನಿ ನಿರಋತಿ, ಅಲ್ಲಿ ಜನಾರ್ದನರೂಪ, ಫಲರಸಗಳಿಗೆ ಪ್ರಾಣನು ಅಭಿಮಾನಿ, ಅಲ್ಲಿ ಉಪೇಂದ್ರರೂಪ, ತಾಂಬೂಲಾಭಿಮಾನೀ ಗಂಗಾ. ಅಲ್ಲಿ ಶ್ರೀಹರಿರೂಪ" ಈ ವಿಷಯವನ್ನು "ಮನುವು" ಈ ಪದ್ಯದಿಂದ ಹೇಳುತ್ತಾರೆ. ||20||

## ೫. ಶ್ರೀಗುರುಹೃದಯಪ್ರಕಾಶಿಕೆ :-

ಮಾಷಭಕ್ಷ್ಯವೆಂಬ ವಡೆಯಲ್ಲಿ ಸ್ವಾಯಂಭುವಮನು ಅಭಿಮಾನಿ. ಅಲ್ಲಿ ಅಚ್ಯುತಮೂರ್ತಿಯನ್ನು ಚಿಂತಿಸುವುದು. ಲವಣವೆಂಬ ಉಪ್ಪಿನಲ್ಲಿ ನಿರಋತಿಯ ಮನೆಯನಿಪ ಅಂದರೆ ಅಧಿಷ್ಠಾನವಾಗಿದ್ದು ಅಂದರೆ ಅಭಿಮಾನಿ. ಅಲ್ಲಿ ಶ್ರೀಜನಾರ್ದನರೂಪವನ್ನು ಮರೆಯದೆ ಸ್ಮರಿಸಬೇಕು. ಫಲರಸವೆಂಬ ಶೀಕರಣೆಯಲ್ಲಿ ಪ್ರಾಣದೇವರನ್ನು ಅಭಿಮಾನಿಯೆಂದು ತಿಳಿದು ಅಲ್ಲಿ ಉಪೇಂದ್ರ ರೂಪವನ್ನು ಚಿಂತಿಸು. ವೀಳ್ಯದೆಲೆಯಲ್ಲಿ ದ್ಯುನದಿ ಎಂಬ ಗಂಗೆಯನ್ನು ಅಲ್ಲಿ ನಿಯಾಮಕ ಶ್ರೀಹರಿರೂಪವನ್ನು ತಿಳಿದು ಸ್ತುತಿಸುತ್ತಾ ಸುಖಿಸುವುದು. ||20||

# ಸರ್ವವ್ಯಾಖ್ಯಾನಸಾರಸಂಗ್ರಹ

## 1. ಮಾಷಸುಭಕ್ಷ್ಯದೊಳು–

ಮಾಷ ಎಂದರೆ ಉದ್ದು. ಉದ್ದಿನಿಂತ ತಯಾರಿಸಿದ ವಡೆ, ಜಹಂಗೀರು ಇತ್ಯಾದಿ ಉತ್ತಮಭಕ್ಷ್ಯಗಳಲ್ಲಿ ಸ್ವಾಯಂಭುವಮನುವು ಅಭಿಮಾನಿಯಾಗಿದ್ದಾನೆ. ಮನುವಿನಲ್ಲಿ ಅವನ ಅಂತರ್ಗತನಾದ ಶ್ರೀಅಚ್ಯುತನಾಮಕ ಶ್ರೀಪರಮಾತ್ಮನನ್ನು ಚಿಂತಿಸಬೇಕು. ಸದಾ ಸರ್ವಕಾಲಕ್ಕೂ ಚತುರ್ವಿಧ ನಾಶರಹಿತನಾಗಿ, ಶಕ್ತದೇಶಪ್ರಕಾರನಾಗಿರುವ ಶ್ರೀಪರಮಾತ್ಮನಿಗೆ **ಅಚ್ಯುತ**ನೆಂದು ಹೆಸರು.

## 2. ಲವಣದೊಳು–

ನಿತ್ಯ ಅಡಿಗೆಗೆ ಮತ್ತು ಭೋಜನದಲ್ಲಿ ಉಪಯೋಗಿಸುವ ಉಪ್ಪು. ಉಪ್ಪಿನಲ್ಲಿ ನೈರುತ್ಯದಿಕ್ಕಿನ ಅಧಿಪತಿಯಾದ **ನಿರಋತಿಯು** ಅಭಿಮಾನಿಯಾಗಿದ್ದಾನೆ. ಅವನಲ್ಲಿ ಅಂತರ್ಗತನಾಗಿರುವ ಶ್ರೀಜನಾರ್ದನನಾಮಕ ಶ್ರೀಪರಮಾತ್ಮನನ್ನು ನಿರಂತರ ಸ್ಮರಿಸುತ್ತಿರಬೇಕು. ಇದಕ್ಕೆ **ಮರೆಯದೆ** ಎಂದಿದ್ದಾರೆ ದಾಸಾರ್ಯರು.

3. ಪಕ್ವವಾಗಿರುವ ಫಲರಸಗಳಲ್ಲಿ ಪಂಚಪ್ರಾಣದಲ್ಲಿ ಒಬ್ಬನಾದ **ಪ್ರಾಣನಾಮಕ** ದಾಸಪ್ರಾಣನು ಅಭಿಮಾನಿಯು. ಅವನಲ್ಲಿ ಅಂತರ್ಗತ ಭಗವದ್ರೂಪ **ಉಪೇಂದ್ರನು** (ಇಂದ್ರಪದವಿಯನ್ನು ಆಳ್ದ ವಾಮನ **ಮೂರ್ತಿ**),

ತಾಂಬೂಲದಲ್ಲಿ ಉಪಯೋಗಿಸುವ **ವೀಳ್ಯದೆಲೆಯಲ್ಲಿ** ಅಭಿಮಾನಿಯು ದ್ಯುನದಿ ಎಂದರೆ ಅಮರತರಂಗಿಣೀ ಎಂದೆನಿಪ ಶ್ರೀಗಂಗಾದೇವಿ ಆಕೆಯಲ್ಲಿ **ಶ್ರೀಹರಿರೂಪವನು** ನೆನೆಯುತ್ತಾ, ಭಜಿಸುತ್ತಾ, ಪೂರ್ವೋಕ್ತ ದ್ರವ್ಯಗಳಲ್ಲಿ ಆಯಾಯ ಅಭಿಮಾನಿಗಳ ಅಂತರ್ಗತ ಭಗವದ್ರೂಪಗಳನ್ನ

ಸ್ತೋತ್ರಮಾಡುತ್ತಾ ಆನಂದಪಡು ಎಂದು ದಾಸಾರ್ಯರ ಅಮೃತೋಪದೇಶ. ॥20॥

| ಕ್ರಮ ಸಂಖ್ಯೆ | ಭೋಜ್ಯ ವಸ್ತುಗಳು | ಅಭಿಮಾನಿ ದೇವತಾ | ತದಂತರ್ಗತ ಭಗವದ್ರೂಪ |
|---|---|---|---|
| 1. | ಉದ್ಭಿನ ಭಕ್ಷ್ಯಗಳು | ಸ್ವಾಯಂಭುವ ಮನು | ಅಚ್ಯುತ |
| 2. | ಉಪ್ಪಿನಲ್ಲಿ | ನಿರುತಿ | ಜನಾರ್ದನ |
| 3. | ಫಲರಸಗಳಲ್ಲಿ | ಪ್ರಾಣನಾಮಕ ದಾಸಪ್ರಾಣ | ಉಪೇಂದ್ರ |
| 4. | ವಿಳ್ಯೇದೆಲೆಯಲ್ಲಿ | ಭಾಗೀರಥೀ ದೇವಿ | ಶ್ರೀಹರಿ |

## ಪದ್ಯ ೨೧

**ಮೂಲ :**

ವೇದವಿನುತಗೆ ಬುಧನು ಸುಸ್ನಾ ।
ದೋದಕಾಧಿಪನೆನಿಸಿಕೊಂಬನು ।
ಶ್ರೀದಕೃಷ್ಣನ ತಿಳಿದು ಪೂಜಿಸುತಿರು ನಿರಂತರದಿ ॥
ಸಾಧುಶರ್ವರ್ಯವ ಪುಷ್ಕರನು ಸುನಿ ।
ವೇದಿತ ಪದಾರ್ಥಗಳ ಶುದ್ಧಿಯು ।
ಗೈದಗೋಸುಗ ಹಂಸನಾಮಕಗರ್ಪಿಸುತಲಿಪ್ಪ ॥ ೨೧ ॥

**ಅವತರಣಿಕೆ :–**

ಇನ್ನೂ ನೈವೇದ್ಯಸಮರ್ಪಣಾನುಸಂಧಾನಕ್ರಮವನ್ನೇ ಹೇಳುತ್ತಾರೆ. ||21||

**ಪ್ರತಿಪದಾರ್ಥ :–**

**ವೇದವಿನುತಗೆ** = ವೇದಪ್ರತಿಪಾದ್ಯನಾದ ಶ್ರೀಪರಮಾತ್ಮನಿಗೆ, **ಬುಧನು** = ಬುಧನು, **ಸುಸ್ವಾದೋದಕಾಧಿಪನೆನಿಸಿಕೊಂಬನು** = ಪಾನಕ್ಕೆ ಯೋಗ್ಯವಾದ ಉದಕಾಭಿಮಾನಿ ಎನಿಸಿಕೊಳ್ಳುವನು. **ಶ್ರೀದ** = ಬುಧನ ಅಂತರ್ಗತನಾಗಿ, ಸಕಲೈಶ್ವರ್ಯಪ್ರದನಾದ, **ಕೃಷ್ಣನ** = ಶ್ರೀಕೃಷ್ಣದೇವರನ್ನು, **ತಿಳಿದು** = ಜ್ಞಾನಾನುಸಂಧಾನಪೂರ್ವಕವಾಗಿ, **ನಿರಂತರದಿ** = ಪ್ರತಿದಿನದಲ್ಲೂ, **ಪೂಜಿಸುತಿರು** = ಪೂಜಿಸುತ್ತಾ, ಶ್ರೀಪರಮಾತ್ಮನಿಗೆ ನಿವೇದನ ಮಾಡಬೇಕೆಂದು ತಾತ್ಪರ್ಯ. **ಸಾಧುಕರ್ಮವ** = ಸಮೀಚೀನ ಪುಣ್ಯಕರ್ಮಗಳನ್ನು, **ಪುಷ್ಕರನು** ಕರ್ಮಾಭಿಮಾನಿಯಾದ ಪುಷ್ಕರನು, **ಸುನಿವೇದಿತಪದಾರ್ಥಗಳ** = ಅನಿಷಿದ್ಧವಾದ ನಿವೇದನಕ್ಕೆ ಯೋಗ್ಯವಾದ ಭೋಜನಪದಾರ್ಥಗಳನ್ನು, **ಶುದ್ಧಿಯಗೈದಗೋಸುಗ** = ಶುದ್ಧಿಮಾಡುವದಕೋಸ್ಕರ, **ಹಂಸನಾಮಕಗೆ** = ಪುಷ್ಕರಾಂತರ್ಗತ ಶ್ರೀಹಂಸನಾಮಕ ಪರಮಾತ್ಮನಿಗೆ, **ಅರ್ಪಿಸುತಲಿಪ್ಪ** = ಭಗವದರ್ಪಣ ಮಾಡುತ್ತಲಿರುವನು. ||21||

## ವ್ಯಾಖ್ಯಾನಗಳು

**1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :–**

ಇನ್ನೂ ನೈವೇದ್ಯಸಮರ್ಪಣಾನುಸಂಧಾನಕ್ರಮವನ್ನೇ ಹೇಳತಾರೆ.

ವೇದವೇದ್ಯನಾದ ಶ್ರೀಪರಮಾತ್ಮಗೆ, ಬುಧನು ಪಾನಕ್ಕೆ ಯೋಗ್ಯವಾದ ಉದಕಾಭಿಮಾನಿ ಎನಿಸಿಕೋಂಬೋವನಾಗತಾನೆ. ಇವನ ಅಂತರ್ಗತದಲ್ಲಿ

ಐಶ್ವರ್ಯಪ್ರದನಾದ ಶ್ರೀಕೃಷ್ಣದೇವರನ್ನ ಅನುಸಂಧಾನ ಮಾಡಿ ಪ್ರತಿದಿನದಲ್ಲೂ ಪೂಜಿಸತಾ ಶ್ರೀಪರಮಾತ್ಮಗೆ ನಿವೇದನ ಮಾಡಬೇಕಂತ ತಾತ್ಪರ್ಯ. ಬಿಂಬ ಕ್ರಿಯಾಪೂರ್ವಕ ಪ್ರತಿಬಿಂಬಕ್ರಿಯಾನುಸಂಧಾನದಿಂದ ಯುಕ್ತವಾದ ಸವೀಚೀನ ಕರ್ಮಗಳಿಗೂನೂ, ಅನಿಷಿದ್ಧಗಳಾದ ಭಗವನ್ನಿವೇದನ ಮಾಡೋದಕ್ಕೆ ಯೋಗ್ಯವಾದ ಪದಾರ್ಥಗಳ ಭಗವದರ್ಪಣವನ್ನ ಅಧಿಕಾರಿಗಳು ಮಾಡಿದರೆ, ಆಯಾ ಪದಾರ್ಥಗಳಲ್ಲೂನೂ ಶುದ್ಧ ಮಾಡುವುದಕ್ಕೋಸ್ಕರ ಕರ್ಮಾಭಿಮಾನಿಯಾದ ಪುಷ್ಕರನು ಹಂಸರೂಪೀ ಪರಮಾತ್ಮಗೆ ಅರ್ಪಿಸತಾ ಇರೋವನಾಗಿದ್ದಾನೆ. ಅರ್ಪಣೆಮಾಡತಕ್ಕ ಕರ್ಮಕ್ಕೆ ಅಭಿಮಾನಿ ಪುಷ್ಕರ, ತದಂತರ್ಗತ ಹಂಸರೂಪೀ ಪರಮಾತ್ಮನ್ನ ತಿಳಿಯೋವರಾಗಬೇಕು.

**ವಿಶೇಷಾರ್ಥ :–**

ನೈವೇದ್ಯಸಮರ್ಪಣಕ್ರಮಾನುಸಂಧಾನ ಮೂರುಪ್ರಕಾರ.

1. ಪದಾರ್ಥಗಳ ಅಂತರ್ಗತ ಶ್ರೀಪರಮಾತ್ಮಗೆ ಆಯಾಪದಾರ್ಥಗಳ ಅರ್ಪಣಮಾಡೋದು.

2. ಪ್ರತಿಮಾಂತರ್ಗತ ಪರಮಾತ್ಮಗೆ ಪರಿದೃಶ್ಯಮಾನ ಪದಾರ್ಥಗಳ ಅಂತರ್ಗತದೇವರನ್ನ ಐಕ್ಯಚಿಂತನಾಪ್ರಕಾರ ಮಾಡೋದು.

3. ಭೋಜನರೀತ್ಯಾ ದೇಹಾಂತರ್ಗತ ಶ್ರೀಪರಮಾತ್ಮಗೆ ಸಮರ್ಪಣ ಕ್ರಮಪ್ರಕಾರ ಮಾಡೋದು. ಅಂತೂ ಮೂರು ಪ್ರಕಾರ ಸಮರ್ಪಣ ಕ್ರಮವು,

ನೈವೇದ್ಯಸಮರ್ಪಣ ಪ್ರಾರಂಭದಲ್ಲಿ ಪುಷ್ಕರ ಪ್ರಾರ್ಥನ ಮಾಡಬೇಕು. ಈ ಪದಾರ್ಥಗಳನ್ನ ಪರಮಾತ್ಮಗೆ ಅರ್ಪಿಸಿ ಪವಿತ್ರಮಾಡಿಕೊಡೆಂತ ಪುಷ್ಕರನ ಅಧೀನಮಾಡಿದರೆ, ಪದಾರ್ಥಗತ ಅಧಿಕಾರಿಗಳು ಸ್ವೀಕರಿಸತಕ್ಕ ರಸ, ತಾನು ಸ್ವೀಕರಿಸತಕ್ಕ ರಸ ಎರಡೂ ವಿಭಾಗ ಮಾಡಿ ತೆಗೆದು ತನಗೆ ಸ್ತೋತ್ರಮನಾದ ಶನೈಶ್ಚರನ ಕೈಯಲ್ಲಿ ಪೂರ್ವೋಕ್ತಪ್ರಕಾರ ಪ್ರಾರ್ಥನಿ ಮಾಡಿಕೊಡತಾನೆ.

ಇದೇ ಪ್ರಕಾರ ಸ್ತೋತ್ರಪಾರ ದ್ವಾರಾ ವಾಯುದೇವರಲ್ಲಿ ಸೇರಿ, ವಾಯು ದೇವರ ದ್ವಾರಾ ರಮಾದೇವೇರಲ್ಲಿ ಸೇರಿ, ರಮಾದೇವೇರ ದ್ವಾರಾ ಪರಮಾತ್ಮನಲ್ಲಿ ಸೇರಿ. ಪರಮಾತ್ಮ ಮಾನುಷಭೋಗ್ಯ, ದೇವಭೋಗ್ಯ ರಮಾಭೋಗ್ಯ, ಸ್ವ ಭೋಗ್ಯ ಯಾವತ್ತೂ ರಸಗಳ, ಪ್ರಳಯದಲ್ಲಿ ಜಗತ್ತು ಉದರದಲ್ಲಿ ಧರಿಸಿದಂತೆ ಧರಿಸೋವನಾಗತಾನೆ. ಈ ರೀತ್ಯಾ ಭಗವಂತ ಸ್ವೀಕರಿಸಿದ್ದರಿಂದ ಪವಿತ್ರವಾಗೋದಾಯಿತು. ತದನಂತರ ಆಭುಕ್ತ ಶೇಷವನ್ನ ಸರ್ವರೂ ಭೋಜನ ಮಾಡೋವರಾಗತಾರೆ, ಆ ಭೋಜನಕ್ರಮ ಎಂಥಾದ್ದೆಂದರೆ ಪರಮಾತ್ಮ ತನ್ನ ಸ್ವಾಪ್ಯರಸ ತಾನು ಸ್ವೀಕಾರಮಾಡಿ ರಮಾ-ಬ್ರಹ್ಮಾದಿಗಳು ಸ್ವೀಕರಿಸತಕ್ಕ ರಸ ಲಕ್ಷ್ಮೀದೇವೇರ ವಶ ಮಾಡತಾನೆ. ರಮಾದೇವೇರು ತಮ್ಮ ರಸ ತಾವು ಸ್ವೀಕಾರ ಮಾಡಿ. ಬ್ರಹ್ಮಾದಿಗಳು ಸ್ವೀಕಾರಮಾಡತಕ್ಕ ರಸ ಬ್ರಹ್ಮದೇವರ ವಶ ಮಾಡತಾರೆ. ಈ ರೀತ್ಯಾ ದೇವತೆಗಳು ಅವರವರ ರಸ ಅವರವರು ಸ್ವೀಕಾರ ಮಾಡಿ ಪುಷ್ಕರನವರೆಗೆ ಸ್ತೋತ್ರಪಾರ ದ್ವಾರಾ ಸ್ವಾಪರಂಗೆ ಬರೋವಾಗತದೆ. ಪುಷ್ಕರ ತನ್ನ ಭೋಗ್ಯರಸ ತಾನು ಸ್ವೀಕಾರ ಮಾಡಿ, ಮಾನುಷಭೋಗ್ಯರಸ ಪದಾರ್ಥದಲ್ಲಿ ಸೇರಿಸಿ ಇಟ್ಟು ಬಿಡತಾನೆ. ತದನಂತರ ಅಧಿಕಾರಿಗಳು ಭೋಜನ ಮಾಡತಾರೆ. ಅತ ಏವ ತ್ರಿವಿಧ ಪ್ರಕಾರ ಅನುಸಂಧಾನ ಕ್ರಮವು.

**ಪ್ರಮಾಣ :**

**ಅನರ್ಪಿತಂ ಸ್ವಬಿಂಬಾಗ್ನೌ ಧಾನ್ಯಮನ್ನಂ ಫಲಂ ಜಲಂ ।**
**ಯೋಽಶ್ನಾತಿ ಲೋಭಾನ್ಮೋಹಾದ್ವಾ ಪೂಯಶೋಣಿತಮತ್ತಿ ಸಃ ॥1॥**

**ಅನ್ಯಬಿಂಬಾರ್ಪಿತಂ ವ್ಯಾಪಿ ಪುನರೇವ ಸ್ವಬಿಂಬಕೇ ।**
**ಸಹಾರ್ಪಿತೇನ ಚಾಶ್ನೀಯಾತ್ ನಾನ್ಯಥಾ ತು ಕದಾಚನ ॥2॥**

ಪುನಶ್ಚ ತಮ್ಮ ಎಲಿಯಲ್ಲಿ ಬಡಿಸಿದ ಪದಾರ್ಥವನ್ನ ತಮ್ಮ ಬಿಂಬ ಮೂರ್ತಿಗೆ ಅರ್ಪಣ ಮಾಡಿ ಭೋಜನ ಮಾಡಬೇಕೆಂತ ತಾತ್ಪರ್ಯ. ॥21॥

**2. ಭಾವಪ್ರಕಾಶಿಕೆ :–**

ಶುದ್ಧೋದಕಕ್ಕೆ ಅಭಿಮಾನಿಯು **ಬುಧನು.** ಅಲ್ಲಿ **ಶ್ರೀಕೃಷ್ಣ**ನನ್ನು ಚಿಂತಿಸಬೇಕು. ಕರ್ಮಾಭಿಮಾನಿಯಾದ **ಪುಷ್ಕರನು** ಪರಮಾತ್ಮನಿಗಾಗಿ ನೈವೇದ್ಯಕ್ಕೆ ಸಿದ್ಧಪಡಿಸಿರುವ ಪದಾರ್ಥಗಳನ್ನು ಶುದ್ಧಿಮಾಡಿ, ಸಂಪೂರ್ಣ ಶುದ್ಧಿಗಾಗಿ ಹಂಸರೂಪೀ ಪರಮಾತ್ಮನಿಗರ್ಪಿಸುವನು. ಅಂದರೆ, ಇತರರು ಮಾಡಿದ ಪಾಕವನ್ನು ಶುದ್ಧಿ ಮಾಡುವ ಕರ್ಮವು ಪುಷ್ಕರನದು. ಅಲ್ಲಿ ಹಂಸ ನಾಮಕ ಪರಮಾತ್ಮನು ಇರುವನೆಂಬ ತಾತ್ಪರ್ಯ. ॥21॥

**4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :–**

ಬುಧಃಸ್ವಾದೂದಕ ಪತಿಃ ಶ್ರೀಕೃಷ್ಣಃ ತತ್ರದೇವತಾ॥ ಪುಷ್ಕರಃ ಸರ್ವ ಶುದ್ಧೀಶಃ ಶ್ರೀಹಂಸಃ ತತ್ರ ದೇವತಾ॥ ಇತ್ಯುಕ್ತಮಾಹ– "ವೇದ" ಇತಿ ॥21॥

## ಕನ್ನಡಾರ್ಥ

ಸ್ವಾದೂದಕ (ಸ್ವಾದುಯುಕ್ತ ಜಲ)ಕ್ಕೆ ಬುಧನು ಅಭಿಮಾನಿ, ಅಲ್ಲಿ ಶ್ರೀಕೃಷ್ಣರೂಪ. ಶುದ್ಧಿಕರ್ಮಗಳಿಗೆ ಪುಷ್ಕರನು ಅಭಿಮಾನಿ, ಅಲ್ಲಿ ಶ್ರೀಹಂಸ ನಾಮಕ ರೂಪ ಈ ವಿಷಯವನ್ನು "ವೇದವಿನುತಗೆ" ಈ ಪದ್ಯದಿಂದ ಹೇಳುತ್ತಾರೆ ॥21॥

**5. ಶ್ರೀಗುರುಹೃದಯಪ್ರಕಾಶಿಕೆ :**

ವೇದಸ್ತುತನಾದ ದೇವರಿಗೆ ಅಂದರೆ ಸ್ವಾಮಿ ಸೇವಾರ್ಥವಾಗಿ ಬುಧನು ಸ್ವಾದೋದಕವೆಂಬ ಸಿಹಿನೀರಿಗೆ ಅಭಿಮಾನಿಯಾಗಿರುವನು. ಅಲ್ಲಿ ಶ್ರೀದನೆಂಬ ಸಂಪತ್ಕರ ಶ್ರೀಕೃಷ್ಣರೂಪವನ್ನು ತಿಳಿದು ಸದಾ ಚಿಂತಿಸುವುದು. ಸಾಧುವೆಂಬ ಪುಣ್ಯಕರ್ಮಕ್ಕೆ ಅಭಿಮಾನಿಯಾದ ಪುಷ್ಕರನೆಂಬ ದೇವತೆಯು ಸುನಿವೇದಿತವೆಂಬ ದೇವರಿಗೆ ಒಪ್ಪಿಸಿದ ಪದಾರ್ಥಗಳನ್ನು ಶುದ್ಧಿ ಮಾಡುವದಕ್ಕೋಸ್ಕರ ಹಂಸ ಮೂರ್ತಿಗೆ ಅರ್ಪಣೆ ಮಾಡುವನೆಂದು ಚಿಂತಿಸುವುದು. ॥21॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ವೇದಾಭಿಮಾನಿಯು ಶ್ರೀಲಕ್ಷ್ಮೀದೇವಿಯು. ತಾರತಮ್ಯಕ್ರಮದಲ್ಲಿ ಶ್ರೀಬ್ರಹ್ಮದೇವರೂ, ಶ್ರೀವಾಯುದೇವರೂ, ಶ್ರೀಸರಸ್ವತೀದೇವಿ ಮತ್ತು ಶ್ರೀಭಾರತೀದೇವಿಯರೂ ವೇದಾಭಿಮಾನಿಗಳು. **ವೇದವಿನುತಗೆ** ಅಂದರೆ, ರಮಾಬ್ರಹ್ಮಾದಿಗಳಿಂದ ಸ್ತುತ್ಯನಾದ ಶ್ರೀಮನ್ನಾರಾಯಣನೆಂದರ್ಥ.

2. **ಶುಸ್ವಾದೋಕಾಧಿಪನೆನಿಸಿಕೊಂಬನು–**

ಶುದ್ಧವಾದ ಪಾನಯೋಗ್ಯವಾದ ನೀರಿಗೆ (ಶುದ್ಧೋದಕ) ಚಂದ್ರನ ಪುತ್ರನಾದ ಬುಧನು ಅಭಿಮಾನಿ ಎನಿಸಿಕೊಳ್ಳುತ್ತಾನೆ. ಬುಧನು ಚಂದ್ರನಿಂದ ತಾರಾದೇವಿಯಲ್ಲಿ ಜನಿಸಿದ ಪುತ್ರನು.

3. ಬುಧನಲ್ಲಿ ಅಂತರ್ಗತ ಭಗವದ್ರೂಪ **ಶ್ರೀಕೃಷ್ಣನು**. ಶ್ರೀಕೃಷ್ಣನು ಭಕ್ತಜನರಿಗೆ ಸಕಲ ಶುಭಪ್ರದನು. ಇದರಿಂದ **ಶ್ರೀದನೆಂಬ** ನಾಮ. ಶ್ರೀ ಮಂಗಳ (ಶುಭ) ಐಹಿಕದಲ್ಲಿ ಸನ್ಮಂಗಳವನ್ನು ಮತ್ತು ಪರದಲ್ಲಿ ಮೋಕ್ಷವನ್ನೂ ಕೊಡುವನಾದ್ದರಿಂದ 'ಶ್ರೀದ'ನು.

4. ಶುದ್ಧೋದಕಾಭಿಮಾನಿಯಾದ ಬುಧನಲ್ಲಿ ಅಂತರ್ಗತ ಶ್ರೀಕೃಷ್ಣನ ಭಗವದ್ರೂಪವನ್ನು ತಿಳಿದು. ನಿರಂತರದಿ ಉಪಾಸಿಸಬೇಕು.

5. ಶ್ರೀಹರಿಗೆ ಪ್ರೀತ್ಯರ್ಥವಾದ ಸತ್ಕರ್ಮಗಳು **ಸಾಧುಕರ್ಮಗಳು** ಅದಕ್ಕೆ ಅಭಿಮಾನಿ ಕರ್ಮಾಭಿಮಾನಿಯಾದ **ಪುಷ್ಕರನು.**

6. ನೈವೇದ್ಯಸಮರ್ಪಣಾಕ್ರಮದಿಂದ. ಶ್ರೀಪರಮಾತ್ಮನಿಗೆ ಐಕ್ಯಚಿಂತನಾರೂಪವಾಗಿ ಅರ್ಪಿಸಿದ ಅನಿಷಿದ್ಧ ಸುಪಕ್ವ ಪದಾರ್ಥಗಳಲ್ಲಿ ಪುಷ್ಕರನು, ಆಹಾರ ವಸ್ತುಗಳಲ್ಲಿರುವ ದೋಷವನ್ನು ಪರಿಹರಿಸಲೋಸುಗ ಪದಾರ್ಥಾಂ

ತರ್ಗತ ಭಗವದ್ರೂಪಗಳಿಗೂ ಹಂಸನಾಮಕ ಶ್ರೀಭಗವದ್ರೂಪಕ್ಕೆ ಐಕ್ಯ ಚಿಂತನೆ ಮಾಡಿ ಅರ್ಪಿಸುತ್ತಲಿರುವನು.

**ವಿಶೇಷಾಂಕ :**

ಜೀವರ ದೇಹಗತ ಸಕಲೇಂದ್ರಿಯಗಳಲ್ಲಿ ಇಂದ್ರಿಯಾಭಿಮಾನಿದೇವತೆಗಳು ಇದ್ದಾರೆ. ಆಯಾಯಾ ಇಂದ್ರಿಯಗಳಿಗೆ ಸನ್ನಿಕರ್ಷವಾಗುವ ವಿಷಯಾಂತರ್ಗತ ಭಗವದ್ರೂಪಗಳಿಗೂ, ತಮ್ಮ ಅಂತರ್ಯಾಮಿ ಭಗವದ್ರೂಪಗಳಿಗೂ, ಇಂದ್ರಿಯಾಭಿಮಾನಿ ದೇವತೆಗಳೂ ಐಕ್ಯಚಿಂತನಾಪೂರ್ವಕ ಸಮರ್ಪಿಸುತ್ತಿರುವರು. ಆಯಾಯಾ ಇಂದ್ರಿಯಾಂತರ್ಗತ ದೇವತೆಗಳಿಂದ ಬಿಂಬನಿಗೆ ನೈವೇದ್ಯ ಸಮರ್ಪಣಾಕ್ರಮ. ಜೀವನು ಈ ರಹಸ್ಯವನ್ನು ಅರಿಯುವುದೇ ಸರ್ವಕರ್ಮಗಳ ಅರ್ಪಣಾಕ್ರಮದ ಮರ್ಮವು. ॥21॥

## ಪದ್ಯ ೧೬

**ಮೂಲ :-**

**ರತಿ ಸಕಲ ಸುಸ್ವಾದುರಸಗಳ ।**
**ಪತಿಯೆನಿಸುವಳು ಅಲ್ಲಿ ವಿಶ್ವನು ।**
**ಹುತವಹನ ಜೂಲಿಗಳೊಳಗೆ ಭಾರ್ಗವನ ಚಿಂತಿಪುದು ॥**
**ಕ್ಷಿತಿಜ ಗೋಮಯಜಾದಿಯೊಳು ಸಂ ।**
**ಸ್ಥಿತ ವಸಂತನ ಋಷಭದೇವನ ।**
**ತುತಿಸುತಿರು ಸಂತತ ಸದಾ ಸದ್ಭಕ್ತಿಪೂರ್ವಕದಿ ॥ ॥೨೨॥**

**ಅವತರಣಿಕೆ :-**

ನೈವೇದ್ಯ ಸಮರ್ಪಣಾಸಮಯದಲ್ಲಿ ಚಿಂತಿಸಬೇಕಾದ ಅಭಿಮಾನಿಗಳನ್ನು

ಮತ್ತು ಅವರವರ ಅಂತರ್ಗತ ಭಗವದ್ರೂಪಗಳನ್ನು ತಿಳಿಸುತ್ತಾರೆ. ॥22॥

**ಪ್ರತಿಪದಾರ್ಥ :–**

**ರತಿ** = ಕಾಮನ ಪತ್ನಿಯಾದ ರತೀದೇವಿಯು, **ಸಕಲ** = ಸಮಸ್ತವಾದ, **ಸುಸ್ವಾದು ರಸಗಳ** = ಮಾಧುರ್ಯದಿಂದ ಯುಕ್ತವಾದ ರಸಗಳಿಗೆ, **ಪತಿಯೆನಿಸುವಳು** = ಅಭಿಮಾನಿ ಎಂದು ಕರೆಯಿಸುವಳು, **ಅಲ್ಲಿ** = ಈ ರತಿದೇವಿಯರ ಅಂತರ್ಗತನಾದ, **ವಿಶ್ವನು** = ವಿಶ್ವರೂಪೀ ಶ್ರೀಪರಮಾತ್ಮನನ್ನು ಚಿಂತಿಸಬೇಕು, **ಚೂಲಿಗಳೊಳಗೆ** = ಅಡಿಗೆ ಮಾಡುವ ಒಲೆಗಳಲ್ಲಿ, **ಹುತವಹನ** = ಅಗ್ನಿದೇವರು ಇದ್ದಾರೆ, **ಭಾರ್ಗವನ** = ಅಗ್ನ್ಯಂತರ್ಗತನಾದ ಶ್ರೀಪರಶುರಾಮದೇವರನ್ನು, **ಚಿಂತಿಪುದು** = ಧ್ಯಾನಿಸುವವರಾಗಬೇಕು. **ಕ್ಷಿತಿಜ** = ಭೂಮಿಯಲ್ಲಿ ಬೆಳೆಯುವ ವೃಕ್ಷಾದಿಗಳು. (ಕ್ಷಿತಿ–ಭೂಮಿ, ಕ್ಷಿತಿಜ–ಭೂಮಿಯಿಂದ ಬೆಳೆದ), **ಗೋಮಯಜಾದಿಯೊಳು** = ಸಗಣಿಯಿಂದ ಮಾಡಲ್ಪಟ್ಟ ಬೆರಣಿ ಮುಂತಾದ ಕಾಷ್ಠವನ್ನಾಗಿ ಉಪಯೋಗಿಸುವ ವಸ್ತುಗಳಲ್ಲಿ, **ಸಂಸ್ಥಿತ** = ವಿದ್ಯಮಾನನಾಗಿರುವ, **ವಸಂತನ** = ವಸಂತ ಋತುವಿಗೆ ಅಭಿಮಾನಿಯಾದ ದೇವತೆಯನ್ನೂ **ಋಷಭದೇವನ** = ವಸಂತಾಂತರ್ಗತ ಋಷಭನಾಮಕ ಶ್ರೀಪರಮಾತ್ಮನನ್ನು, **ತುತಿಸುತಿರು** = ಸ್ತೋತ್ರ ಮಾಡುತ್ತಿರು, **ಸಂತತ** = ನಿರಂತರದಲ್ಲಿಯೂ, **ಸದಾ** = ಸರ್ವಕಾಲಗಳಲ್ಲಿಯೂ, **ಸದ್ಭಕ್ತಿಪೂರ್ವಕದಿ** = ಸಮೀಚೀನವಾದ ಮಹಾತ್ಮ್ಯಜ್ಞಾನಪೂರ್ವಕ ಸುದೃಢ ಸ್ನೇಹರೂಪವಾದ ಭಕ್ತಿಯಿಂದ ಕೊಂಡಾಡುತ್ತಿರು (ನೈವೇದ್ಯ ಮತ್ತು ಭೋಜನ ಸಮಯಗಳಲ್ಲಿ ॥22॥

## ವ್ಯಾಖ್ಯಾನಗಳು

1. **ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :—**

ಇನ್ನೂ ನೈವೇದ್ಯಸಮರ್ಪಣಕ್ರಮವನ್ನೇ ಹೇಳುತಾರೆ.

ಮನ್ಮಥನ ಪತ್ನಿಯಾದ ರತೀದೇವೀರು ಸಮಸ್ತವಾದ ಪೂರ್ವೋಕ್ತಗಳಲ್ಲದೆ ತದನ್ಯಗಳಾದ ಸಿಹಿಯಿಂದ ಯುಕ್ತವಾದ ರಸಗಳಿಗೆ ಅಭಿಮಾನಿ ಎನಿಸತಾರ. ಈ ರತೀದೇವೀರ ಗೋಳಕಾಂತರ್ಗತದಲ್ಲಿ ವಿಶ್ವರೂಪೀ ಪರಮಾತ್ಮ ಇರೋವನಾಗಿದ್ದಾನೆ. ಅಡಿಗಿ ಮಾಡತಕ್ಕ ಒಲಿಗಳ ಒಳಗೆ ಅಗ್ನಿದೇವರು ಇರೋವರಾಗಿದ್ದಾರೆ. ಇವರಂತರ್ಗತದಲ್ಲಿ ಶ್ರೀಪರಶುರಾಮದೇವರನ್ನ ಅನುಸಂಧಾನ ಮಾಡೋವರಾಗಬೇಕು. ಭೂಮಿ ಭೇದಿಸಿಕೊಂಡು ಜನಿಸತಕ್ಕ ವೃಕ್ಷಾದಿಗಳು, ಈ ವೃಕ್ಷಾದಿಗಳು ಒಣಗಿದರೆ ಕಟ್ಟಿಗಿ. ಅಗ್ನಿಯಲ್ಲಿ ಹಾಕತಕ್ಕ ಕಾಷ್ಠಗಳು, ಆಕಳ ಸಗಣಿಯಿಂದ ಉತ್ಪನ್ನಗಳಾದ ಕುರುಳುಗಳು ಈ ಎರಡರಲ್ಲಿ ಚಂದಾಗಿ ಇರತಕ್ಕ ಅಭಿಮಾನಿಯಾದವ. ವಸಂತಋತು ಅಭಿಮಾನಿಯಾದ ತನ್ನಾಮಕ ದೇವತೆ. ಈ ವಸಂತನ ಅಂತರ್ಗತದಲ್ಲಿ ಋಷಭನಾಮಕ ಶ್ರೀಪರಮಾತ್ಮನ್ನ ಸರ್ವಕಾಲಗಳಲ್ಲೂ ಈ ಪ್ರಕಾರ ತಿಳದು ನಿರಂತರ ಅರ್ಪಣ, ಭೋಜನಕಾಲಗಳಲ್ಲಿ ಪೂರ್ವೋಕ್ತ ಅನುಸಂಧಾನ ಪೂರ್ವಕ ಅರ್ಪಿಸತಾ, ಸಮೀಚೀನವಾದ ಮಾಹಾತ್ಮ್ಯಜ್ಞಾನ ಪೂರ್ವಕ ಸ್ವದಢಸ್ನೇಹದಿಂದ ಶ್ರೀಪರಮಾತ್ಮನ್ನ ಸ್ತೋತ್ರ ಮಾಡತಾ ಇರಬೇಕಂತ ತಾತ್ಪರ್ಯ. ||22||

## 2. ಭಾವಪ್ರಕಾಶಿಕೆ :–

ಸಕಲವಾದ ಸ್ವಾದುರಸಗಳಿಗಭಿಮಾನಿಯು ರತೀದೇವಿ. ಅವರಲ್ಲಿ ಶ್ರೀವಿಶ್ವಮೂರ್ತಿಯನ್ನು ಚಿಂತಿಸಬೇಕು. ಅಡಿಗೆಯ ಒಲೆಗಳಿಗೆ ಅಭಿಮಾನಿಯು ಅಗ್ನಿಯು. ಅಲ್ಲಿ ಶ್ರೀಪರಶುರಾಮಮೂರ್ತಿಯನ್ನು ಚಿಂತಿಸಬೇಕು. ಸೌದೆ, ಬೆರಣಿ ಮೊದಲಾದವುಗಳಿಗೆ ಅಭಿಮಾನಿಯು ವಸಂತನು. ಅವನಲ್ಲಿ ಋಷಭದೇವರನ್ನು ಚಿಂತಿಸಬೇಕು. ||22||

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :–

ಸರ್ವಸ್ವಾದುರಸಾಧೀಶಾ ರತಿಃ ವಿಶ್ವಸ್ತು ತತ್ರಗಃ॥ ಸ್ಥಾಲೀಪತಿಃ ತತ್ರ ವಹ್ನಿಃ ಭಾರ್ಗವಸ್ತತ್ರ ದೇವತಾ॥ ಕರೀಷಕಾಷ್ಠಮಾನೀ ತು ವಸಂತಃ. ಋಷಭಃ ಪ್ರಭುಃ॥ ಇತ್ಯುಕ್ತಮಾಹ "ರತಿ" ಇತಿ. ||22||

## ಕನ್ನಡಾರ್ಥ

"ಎಲ್ಲ ಸ್ವಾದುರಸಗಳಿಗೆ ರತಿಯು ಅಭಿಮಾನಿ ದೇವತೆ. ಅಲ್ಲಿ ವಿಶ್ವನಾಮಕ ಭಗವದ್ರೂಪ, ಒಲೆಯ ಅಭಿಮಾನಿಯು ಅಗ್ನಿ, ಅಲ್ಲಿ ಪರಶುರಾಮ. ಹುರುಳು ಕಟ್ಟಿಗೆಗಳಿಗೆ ವಸಂತನು ಅಭಿಮಾನಿ ದೇವತೆ. ಅಲ್ಲಿ ಋಷಭ ರೂಪ" ಈ ವಿಷಯವನ್ನು "ರತಿ" ಈ ಪದ್ಯದಿಂದ ಹೇಳುತ್ತಾರೆ. ॥22॥

5. ಶ್ರೀಗುರುಹೃದಯಪ್ರಕಾಶಿಕೆ:

ಸುಸ್ವಾದು ಎಂಬ ಒಳ್ಳೆ ರುಚಿಯಾದ ಪದಾರ್ಥಗಳಲ್ಲಿ ರತಿದೇವಿ ಅಭಿಮಾನಿಯು. ಅಲ್ಲಿ ವಿಶ್ವಮೂರ್ತಿ ನಿಯಾಮಕನು. ಚುಲ್ಲಿ ಎಂಬ ಒಲೆಗಳಲ್ಲಿ ಹುತವಹನೆಂಬ ಅಗ್ನಿದೇವರು ಅಭಿಮಾನಿ. ಅಲ್ಲಿ ಭಾರ್ಗವನೆಂಬ ಪರಶುರಾಮನನ್ನು ಚಿಂತಿಸುವುದು. ಕ್ಷಿತಿಜವೆಂಬ ಮರ (ಸೌದೆ), ಗೋಮಯಜವೆಂಬ ಸಗಣಿಯಿಂದ ಆದ ಬೆರಣಿ ಮುಂತಾದ್ದರಲ್ಲಿ, ಸಂಸ್ಥಿತನೆಂದರೆ ಅಭಿಮಾನಿಯಾಗಿರುವ ವಸಂತನೆಂಬ ದೇವತೆಯನ್ನೂ, ಅಲ್ಲಿ ಋಷಭಮೂರ್ತಿಯನ್ನು ಸದಾ ಸದ್ಭಕ್ತಿಯಿಂದ ಸ್ತುತಿಸುತ್ತಿರುವುದು. ॥22॥

## ಸರ್ವವ್ಯಾಖ್ಯಾನಸಾರಸಂಗ್ರಹ

1. **ಸುಸ್ವಾದುರಸಗಳ :**

ಅತ್ಯಂತ ರುಚಿಕರವಾದ ರಸಯುಕ್ತ ಪದಾರ್ಥಗಳಲ್ಲಿ ಅಭಿಮಾನಿಯು ಮನ್ಮಥನ ಪತ್ನಿ **ಶ್ರೀರತೀದೇವಿ.**

2. ರತೀದೇವಿಯಲ್ಲಿ ಅಂತರ್ಗತ ಭಗವದ್ರೂಪ **ಶ್ರೀ ವಿಶ್ವನಾಮಕ ಪರಮಾತ್ಮನು.** ಸುಸ್ವಾದುರಸಗಳಲ್ಲಿ ರತೀದೇವಿಯೂ ಅಂತರ್ಗತ ಶ್ರೀವಿಶ್ವನಾಮಕ ಪರಮಾತ್ಮನನ್ನು ಚಿಂತಿಸಬೇಕು.

3. **ಚೂಲಿಗಳೊಳಗೆ**

ಅಡಿಗೆಮಾಡುವ ಒಲೆಗಳಿಗೆ "ಚೂಲಿ"-ಎಂದು ಹೆಸರು. ಒಲೆಗಳಲ್ಲಿ **ಅಗ್ನಿದೇವರು** ಅಭಿಮಾನಿಯು. ಯಜ್ಞಯಾಗಾದಿಗಳಲ್ಲಿ ಅರ್ಪಿಸುವ ಆಹುತಿಯನ್ನು ಆಯಾಯಾ ದೇವತೆಗಳಿಗೆ ಒಯ್ಯುವ ಅಗ್ನಿಗೆ **ಹುತವಹನೆಂದು ಹೆಸರು.** ಹುತವಹನಲ್ಲಿ ಶ್ರೀಪರಶುರಾಮದೇವರನ್ನು (ಭಾರ್ಗವ) ಚಿಂತಿಸಬೇಕು.

4. **ಕ್ಷಿತಿಜ**

ಕ್ಷಿತಿ ಎಂದರೆ, ಭೂಮಿ. ಜ ಎಂದರೆ ಹುಟ್ಟುವುದು. ಭೂಮಿಯಲ್ಲಿ ಹುಟ್ಟುವ ವೃಕ್ಷಗಳೆಂದರ್ಥ. ಅಡಿಗೆಗೆ ಉಪಯೋಗಿಸುವ ಕಟ್ಟಿಗೆಯು ಮರದ ತುಂಡುಗಳಿಂದ ಉಂಟಾಗುವುದು.

**ಗೋಮಯಜ**

ಗೋಮಯ ಎಂದರೆ, ಹಸುವಿನ ಸೆಗಣಿ ಎಂದರ್ಥ. ಗೋಮಯಜ ಎಂದರೆ, ಸೆಗಣಿಯಿಂದ ತಯಾರಿಸಿದ ಬೆರಣಿ ಎಂದಾಗುವುದು.

ಕಟ್ಟಿಗೆ ಮತ್ತು ಬೆರಣಿಗಳಲ್ಲಿ **ವಸಂತನು** ಅಭಿಮಾನಿಯಾಗಿದ್ದಾನೆ. ಅವನಲ್ಲಿ ಚಿಂತಿಸಬೇಕಾದ ಅಂತರ್ಗತ ಭಗವದ್ರೂಪವು **ಶ್ರೀವೃಷಭನಾಮಕನು.**

5. ಈ ರೀತಿಗಳಲ್ಲಿ ಸುಸ್ವಾದು ವಸ್ತುಗಳಲ್ಲಿ ಅಭಿಮಾನಿಯಾದ ಶ್ರೀರತೀದೇವಿಯಲ್ಲಿ ವಿಶ್ವನಾಮಕ ಪರಮಾತ್ಮನನ್ನು, ಅಡಿಗೆಯ ಒಲೆಗಳಲ್ಲಿ ಅಭಿಮಾನಿಯಾದ ಅಗ್ನಿಯಲ್ಲಿ ಭಾರ್ಗವನಾಮಕ ಶ್ರೀಪರಶುರಾಮನನ್ನು, ಮತ್ತು ಉರಿಸುವ ಕಟ್ಟಿಗೆ, ಬೆರಣಿ ಮುಂತಾದ ವಸ್ತುಗಳಲ್ಲಿ ವಸಂತನು ಅಭಿಮಾನಿ ತದಂಗರ್ತ ಶ್ರೀವೃಷಭ ದೇವರನ್ನು ನಿರಂತರದಲ್ಲಿ ಸಮೀಚೀನವಾದ ಭಕ್ತಿಭಾವದಿಂದ ಸ್ಮರಿಸುತ್ತಾ, ಸ್ತೋತ್ರಮಾಡುತ್ತಿರಬೇಕೆಂದು ದಾಸರಾಯರು ಚಿಂತನಾಕ್ರಮವನ್ನು ನಿರೂಪಿಸಿರುತ್ತಾರೆ. ॥22॥

## ಪದ್ಯ ೨೩

**ಮೂಲ :-**

ಪಾಕ ಕರ್ತೃಗಳೊಳಗೆ ಚತುರ್ದಶ ।
ಲೋಕಮಾತೆ ಮಹಾಲಕುಮಿಗತ ।
ಶೋಕ ವಿಶ್ವಂಭರನ ತಿಳಿವುದು ಎಲ್ಲಕಾಲದಲಿ ॥
ಚೌಕಶುದ್ಧ ಸುಮಂಡಲದಿ ಭೂ ।
ಸೂಕರಾಹ್ವಯು ಉಪರಿ ಚೈಲಪ ।
ಏಕದಂತ ಸನತ್ಕುಮಾರನ ಧೇನಿವುದು ಬುಧರು ॥ ॥೨೩॥

**ಅವತರಣಿಕೆ :-**

ನೈವೇದ್ಯ ಪ್ರಕರಣದ ವಿವರಗಳನ್ನು ಇನ್ನೂ ಈ ಪದ್ಯದಿಂದ ಮುಂದುವರಿಸುತ್ತಾರೆ. ॥23॥

**ಪ್ರತಿಪದಾರ್ಥ :-**

**ಪಾಕಕರ್ತೃಗಳೊಳಗೆ** = ಅಡಿಗೆ ಮಾಡುವವರಲ್ಲಿ, **ಚತುರ್ದಶ ಲೋಕಮಾತೆ** = ಹದಿನಾಲ್ಕು ಲೋಕಗತ ಪ್ರಾಣಿಗಳಿಗೆ ತಾಯಿಯಾದ, **ಮಹಾಲಕುಮಿ** = ಅನಾಲೋಚನೆಯಿಂದ ಸರ್ವವಿಷಯದ ಮಹಾಜ್ಞಾನಿಗಳಾದ ಶ್ರೀಲಕ್ಷ್ಮೀದೇವಿಯರು ಅಭಿಮಾನಿಯಾಗಿರುತ್ತಾರೆ, **ಗತಶೋಕ** = ಲಕ್ಷ್ಮ್ಯಂತರ್ಗತನಾಗಿ ದುಃಖರಹಿತನಾದ, **ವಿಶ್ವಂಭರನ** = ವಿಶ್ವಂಭರನಾಮಕ ಶ್ರೀ ಪರಮಾತ್ಮನನ್ನು, **ಎಲ್ಲ ಕಾಲದಲಿ** = ನಿರಂತರದಲ್ಲಿ. **ತಿಳಿವುದು** = ಅರಿತು ಚಿಂತಿಸಬೇಕು. **ಚೌಕಶುದ್ಧ** = ನಿವೇದನ ಪದಾರ್ಥಗಳನ್ನು ಇಡುವ ಭೂಪ್ರದೇಶ, ಚಚೌಕಾಕಾರವಾದ, **ಸುಮಂಡಲದಿ** = ಸಮೀಚೀನವಾದ ಮಂಡಲದಲ್ಲಿ, **ಭೂ** = ಚಚ್ಚಾಕಾಕಾರವಾದ ಮಂಡಲಕ್ಕೆ ಭೂದೇವಿ ಅಭಿಮಾನಿ

ಯಾಗಿದ್ದಾಳೆ, **ಶೂಕರಾಹ್ವಯು** = ಭೂದೇವಿಯರ ಅಂತರ್ಗತನಾಗಿ ಶ್ರೀವರಾಹದೇವರನ್ನು ಚಿಂತಿಸಬೇಕು, **ಉಪರಿ** = ನಿವೇದನ ಪದಾರ್ಥಗಳಿಗೆ ಹೊದಿಸತಕ್ಕ ವಸ್ತ್ರದಲ್ಲಿ, **ಚೈಲಪ** = ವಸ್ತ್ರಾಭಿಮಾನಿಯಾದ, **ಏಕದಂತ** = ಶ್ರೀವಿಘ್ನೇಶನು, **ಸನತ್ಕುಮಾರನ** = ವಿಘ್ನೇಶಾಂತರ್ಗತನಾದ ಶ್ರೀಸನತ್ಕುಮಾರನಾಮಕ ಶ್ರೀಪರಮಾತ್ಮನನ್ನು, **ಬುಧರು** = ಜ್ಞಾನಿಗಳು, **ಧೇನಿಪುದು** = ಅನುಸಂಧಾನಪೂರ್ವಕ ಚಿಂತಿಸುವವರಾಗಬೇಕು ಎಂತ ತಾತ್ಪರ್ಯ. ॥23॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಇನ್ನೂ ನೈವೇದ್ಯಸಮರ್ಪಣಕ್ರಮವನ್ನೇ ಹೇಳತಾರೆ.

ಅಡಗಿಮಾಡತಕ್ಕವರಲ್ಲಿ ಅಂದರೆ, ಪೂರ್ವೋಕ್ತಪ್ರಕಾರ ಸದ್ಭಕ್ತಿಪೂರ್ವಕ ಬಿಂಬಕ್ರಿಯಾನುಸಂಧಾನದಿಂದ ಮಾಡತಕ್ಕವರ ಶರೀರದಲ್ಲಿ, ಹದಿನಾಲ್ಕುಲೋಕ ಪ್ರಾಣಿಗಳಿಗೆ ತಾಯಿ ಆದಂಥಾ, ಅನಾಲೋಚನೆಯಿಂದ ಸರ್ವವಿಷಯಕ ಮಹಾ ಜ್ಞಾನಯುಕ್ತರಾದ ಲಕ್ಷ್ಮೀದೇವೇರು ಅಭಿಮಾನಿಯಾಗಿ ಇರತಾರೆ. ಇವರ ಅಂತರ್ಗತದಲ್ಲಿ ಶೋಕಶೂನ್ಯನಾದ ವಿಶ್ವಂಭರನಾಮಕ ಶ್ರೀಪರಮಾತ್ಮನ್ನ ನಿರಂತರದಲ್ಲಿ ಅನುಸಂಧಾನ ಮಾಡೋವರಾಗಬೇಕು. ನಿವೇದನಪದಾರ್ಥಗಳ ತಂದು ಇಡತಕ್ಕ ಭೂಪ್ರದೇಶ ಪರಿಶುದ್ಧತೆಗೋಸುಗ ಮಾಡತಕ್ಕ ಸಮೀಚೀನವಾದ ಮಂಡಲದಿ, —ಈ ಮಂಡಲ ಚೌಕ ಅಂದರೆ, ಚಚೌಕದಿಂದ ಯುಕ್ತವಾಗಿರಬೇಕು. ಈ ಮಂಡಲಕ್ಕೆ ಭೂದೇವೇರು ಅಭಿಮಾನಿಯಾಗಿರತಾರೆ. ಇವರ ಅಂತರ್ಗತದಲ್ಲಿ ವರಾಹದೇವರನ್ನ ಅನುಸಂಧಾನಮಾಡಬೇಕು. ನಿವೇದನ ಪದಾರ್ಥಗಳ ಮ್ಯಾಲೆ ಹೊದಿಸತಕ್ಕ ವಸ್ತ್ರಾಭಿಮಾನಿಯಾದವನು ವಿಘ್ನೇಶ. ಈ ವಿನಾಯಕನ ಅಂತರ್ಗತದಲ್ಲಿ ಸನತ್ಕುಮಾರನಾಮಕ ಶ್ರೀಪರಮಾತ್ಮನ್ನ ಜ್ಞಾನಿಗಳಾದವರು ಅನುಸಂಧಾನ ಮಾಡಿ ಧ್ಯಾನಿಸೋವರಾಗಬೇಕು ಎಂತ ತಾತ್ಪರ್ಯ. ॥23॥

## 2. ಭಾವಪ್ರಕಾಶಿಕೆ :-

ಅಡಿಗೆ ಮಾಡುವವರಲ್ಲಿ ಶ್ರೀರಮಾದೇವಿಯರನ್ನು, ಅವರಲ್ಲಿ ಶ್ರೀವಿಶ್ವಂಭರಮೂರ್ತಿಯನ್ನೂ ಚಿಂತಿಸಬೇಕು. ನೈವೇದ್ಯವನ್ನು ಇಡುವುದಕ್ಕಾಗಿ ಮಾಡಿರುವ ಮಂಡಲದಲ್ಲಿ ಭೂಮಿದೇವಿಯನ್ನೂ, ಆಕೆಯಲ್ಲಿ ವರಾಹಮೂರ್ತಿಯನ್ನೂ ಚಿಂತಿಸಬೇಕು. ನೈವೇದ್ಯದ ಪದಾರ್ಥಗಳ ಮೇಲೆ ಮುಚ್ಚುವ ವಸ್ತ್ರದಲ್ಲಿ ಗಣಪತಿಯನ್ನೂ, ಅವನಲ್ಲಿ ಸನತ್ಕುಮಾರನನ್ನು ತಿಳಿಯಬೇಕು. ಸನತ್ಕುಮಾರರು ಬ್ರಹ್ಮದೇವರ ಮಕ್ಕಳಾದ ನಾಲ್ವರ ಪೈಕಿ ಸನತ್ಕುಮಾರರು ಬೇರೆ. **ಭಾಗವತ ಪ್ರಥಮಸ್ಕಂಧ 3ನೆಯ ಅಧ್ಯಾಯದಲ್ಲಿ.**

"ಸ ಏವ ಪ್ರಥಮಂ ದೇವಃ ಕೌಮಾರಂ ಸರ್ಗಮಾಶ್ರಿತಃ। ಚಚಾರ ದುಶ್ಚರಂ ಬ್ರಹ್ಮಾ ಬ್ರಹ್ಮಚರ್ಯಮಖಂಡಿತಂ" ॥6॥

ಅದೇ ಪದ್ಮನಾಭರೂಪನಾದ ಶ್ರೀನಾರಾಯಣನೇ ಮೊದಲನೆಯ ಅವತಾರ **ಸನತ್ಕುಮಾರ**ನೆಂಬ ಬ್ರಾಹ್ಮಣನಾಗಿದ್ದು, ಅಖಂಡವಾದ ಬ್ರಹ್ಮಚರ್ಯವನ್ನು ಧರಿಸಿದನು ಎಂದು ಹೇಳಿರುವ ಭಗವದವತಾರವಾದ ಸನತ್ಕುಮಾರನನ್ನು ಚಿಂತಿಸಬೇಕೆಂಬ ತಾತ್ಪರ್ಯ. ॥23॥

## 4. ಶ್ರೀವ್ಯಾಸದಾಸಸಿದ್ಧಾಂತಕೌಮುದಿ :

"ಶ್ರೀದೇವಿ ಪಾಕಕರ್ತೃಸ್ಥಾ ತತ್ರ ವಿಶ್ವಂಭರಃ ಪ್ರಭುಃ॥ ನೈವೇದ್ಯ ಮಂಡಲಸ್ಥಾ ಭೂಃ ವರಾಹಃ ತತ್ರ ದೇವತಾ॥ ತದೂರ್ಧ್ವಭಾಗಪಃ ವಿಘ್ನಃ ತತ್ರ ಧ್ಯೇಯಃ ಕುಮಾರಕಃ॥ ಇತ್ಯುಕ್ತ್ವಮಾಹ "ಪಾಕ" ಇತಿ ॥23॥

### ಕನ್ನಡಾರ್ಥ

ಪಾಚಕರಲ್ಲಿ ಶ್ರೀದೇವಿಯು ಅಭಿಮಾನಿದೇವತೆ. ಅಲ್ಲಿ ವಿಶ್ವಂಭರರೂಪ. ನೈವೇದ್ಯಮಂಡಲಕ್ಕೆ ಭೂದೇವಿಯು ಅಭಿಮಾನಿನಿ. ಅಲ್ಲಿ ವರಾಹರೂಪ. ನೈವೇದ್ಯವಸ್ತುಗಳ ಮೇಲಾವರಣಕ್ಕೆ ಗಣಪತಿ ಅಭಿಮಾನಿ. ಅಲ್ಲಿ ಸನತ್ಕುಮಾರನಾಮಕ ರೂಪ. ಈ ವಿಷಯವನ್ನು "ಪಾಕ" ಈ ಪದ್ಯದಿಂದ ಹೇಳುತ್ತಾರೆ. ॥23॥

ಪಾಕವೆಂಬ ಅಡುಗೆ ಮಾಡುವವರಲ್ಲಿ ಲೋಕಮಾತೆಯಾದ ಮಹಾಲಕ್ಷ್ಮೀ ಅಭಿಮಾನಿ. ಅಲ್ಲಿ ಗತಶೋಕವೆಂಬ ನಿರ್ದುಃಖಾನಂದ ವಿಶ್ವಂಭರರೂಪವನ್ನು ಸದಾ ಚಿಂತಿಸುವುದು. ಚೌಕಶುದ್ಧವಾದ ಸುಮಂಡಲದಲ್ಲಿ ಭೂದೇವಿ ಅಭಿಮಾನಿ, ಭೂವರಾಹಮೂರ್ತಿ ನಿಯಾಮಕ. ಉಪರಿಚೈಲಪ ಅಂದರೆ ನಿವೇದನ ಪದಾರ್ಥಗಳ ಮೇಲೆ ಹೊದ್ದಿಸತಕ್ಕ ವಸ್ತ್ರದಲ್ಲಿ ಏಕದಂತನೆಂಬ ಗಣೇಶನು ಅಭಿಮಾನಿ. ಸನತ್ಕುಮಾರನೆಂಬ ದೇವರರೂಪ ಅಲ್ಲಿ ನಿಯಾಮಕ ಎಂದು ಜ್ಞಾನಿಗಳು ಚಿಂತಿಸುವುದು. ॥23॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಅಡಿಗೆ ಮಾಡುವವರಲ್ಲಿ **(ಪಾಕಕರ್ತೃಗಳೊಳಗೆ)** ಹದಿನಾಲ್ಕು ಲೋಕಗತಪ್ರಾಣಿಗಳಿಗೆ ಜಗಜ್ಜನನಿಯಾದ ಶ್ರೀಮಹಾಲಕ್ಷ್ಮೀದೇವಿಯರು ಅಭಿಮಾನಿಗಳಾಗಿದ್ದಾರೆ.

2. ಶ್ರೀಲಕ್ಷ್ಮೀದೇವಿಯರಲ್ಲಿ ಅಂತರ್ಗತವಾದ ಭಗವದ್ರೂಪ, ನಿರ್ದುಃಖಿನಾದ **ವಿಶ್ವಂಭರಮೂರ್ತಿ.**

ಪಾಕಕರ್ತೃಗಳ ಒಳಗೆ ಅಭಿಮಾನಿಯಾಗಿರುವ ಶ್ರೀಮಹಾಲಕ್ಷ್ಮೀದೇವಿಯರಲ್ಲಿ ಅಂತರ್ಗತನಾಗಿರುವ ಶ್ರೀವಿಶ್ವಂಭರಮೂರ್ತಿಯನ್ನು ತಿಳಿದು, ಜ್ಞಾನಾನುಸಂಧಾನಪೂರ್ವಕ ಚಿಂತಿಸಬೇಕು.

3. ನೈವೇದ್ಯಪದಾರ್ಥಗಳನ್ನು ಇಡುವಾಗ, ದೇವರ ಮುಂಭಾಗದಲ್ಲಿ ಭೂಮಿಯನ್ನು ಶುದ್ಧಗೊಳಿಸಿ, ಆ ಸ್ಥಾನದಲ್ಲಿ ಚಚೌಕವಾದ ಮಂಡಲವನ್ನು ನಿರ್ಮಿಸುತ್ತೇವೆ. ಅದನ್ನು ದಾಸರಾಯರು **ಚೌಕಶುದ್ಧ ಸುಮಂಡಲದಿ** ಎಂದಿದ್ದಾರೆ. ನೆಲವನ್ನು ಶುದ್ಧಗೊಳಿಸಿ, ಚಚೌಕವಾಗಿ ರಂಗವಲ್ಲಿಯಿಂದ ಚೌಕವನ್ನು ನಿರ್ಮಿಸಿ, **ಅದರ ಮೇಲೆ.** ಶ್ರೀಪರಮಾತ್ಮನ ಮುಂದೆ ನೈವೇದ್ಯಪದಾರ್ಥಗಳನ್ನು ಇಡಬೇಕು. ಇದಕ್ಕೆ 'ಮಂಡಲ'ವೆಂದು ಹೆಸರು.

ಇಂತಹ ಮಂಡಲದಲ್ಲಿ **ಭೂದೇವಿ** ಅಭಿಮಾನಿಯು. ಭೂದೇವಿಯಲ್ಲಿ ಅಂತರ್ಗತ ಭಗವದ್ರೂಪವು **ಶ್ರೀವರಾಹಮೂರ್ತಿ** (**ಸೂಕರಾಹ್ವಯ**) **ಸೂಕರಾ** ಹಂದಿವ ರಹರೂಪ. ಆಹ್ವಯ–ಹೆಸರಿನ)

ಅಂದರೆ, ನೈವೇದ್ಯಮಂಡಲದಲ್ಲಿ ಭೂದೇವಿ ಮತ್ತು ತದಂತರ್ಗತ ಶ್ರೀ **ವರಾಹರೂಪೀ ಶ್ರೀಹರಿಯನ್ನು** ಚಿಂತಿಸಬೇಕೆಂದು ತಾತ್ಪರ್ಯ.

4. **ಉಪರಿಚೈಲಪ** : ನೀವೇದನ ಪದಾರ್ಥಗಳ ಮೇಲೆ ಮುಚ್ಚುವ ಶುಭ್ರವಸ್ತ್ರದಲ್ಲಿ ಏಕದಂತನಾಮಕನಾದ **ಶ್ರೀ ಗಣಪತಿಯು ಅಭಿಮಾನಿಯು**

**ಗಣಪತಿಯಲ್ಲಿ** ಅಂತರ್ಗತನಾಗಿರುವ **ಸನತ್ಕುಮಾರ ರೂಪವನ್ನು** ಜ್ಞಾನಿಗಳು ನಿರಂತರದಲ್ಲಿ ಉಪಾಸಿಸುವರು.

ಪದ್ಮನಾಭರೂಪನಾದ ಶ್ರೀಪರಮಾತ್ಮನೇ ಪ್ರಥಮಾವತಾರದಲ್ಲಿ **ಸನತ್ಕುಮಾರನೆಂಬ** ಹೆಸರಿನಿಂದ ಅವತರಿಸಿದನು. ವಿಪ್ರನಾಗಿ ಅವತರಿಸಿ, ಅಖಂಡವಾದ ಬ್ರಹ್ಮಚರ್ಯವನ್ನು ಪಾಲಿಸಿದನು. ಬ್ರಹ್ಮಮಾನಸಪುತ್ರರಾದ ಸನಕಾದಿ ನಾಲ್ವರಲ್ಲಿ ಸನತ್ಕುಮಾರ ಋಷಿ ಬೇರೆ. ॥23॥

## ಪದ್ಯ ೨೦

**ಮೂಲ :**

ಶ್ರೀನಿವಾಸನ ಭೋಗ್ಯವಸ್ತುವ ।
ಕಾಣಗೊಡದಂದಲಿ ವಿಷ್ವ ।
ಕ್ಸೇನ ಪರಿಖಾರೂಪನಾಗಿಹನಲ್ಲಿ ಪುರುಷಾಖ್ಯ ॥
ತಾನೆ ಪೂಜಕ ಪೂಜ್ಯನೆನಿಸಿ ನಿ ।
ಜಾನುಗರ ಸಂತೈಪ ಗುರುಪವ ।
ಮಾನವಂದಿತ ಸರ್ವಕಾಲಗಳಲ್ಲಿ ಸರ್ವೇಶ ॥ ॥೨೪॥

**ಅವತರಣಿಕೆ :-**

ಅವಶಿಷ್ಟ ನಿವೇದನ ಕ್ರಮವನ್ನು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ. ॥24॥

**ಪ್ರತಿಪದಾರ್ಥ :-**

**ಶ್ರೀನಿವಾಸನ** = ಶ್ರೀಲಕ್ಷ್ಮೀನಿವಾಸನಾದ ಶ್ರೀಪರಮಾತ್ಮನ, **ಭೋಗ್ಯವಸ್ತುವ** = ನಿವೇದನಕ್ಕೆ ಯೋಗ್ಯವಾದ ಭೋಜನ ಪದಾರ್ಥಗಳನ್ನು, **ಕಾಣಗೊಡದಂದದಿ** = ಅನ್ಯರ ದೃಷ್ಟಿಗೆ ಗೋಚರವಾಗದಂತೆ, **ವಿಷ್ವಕ್ಸೇನ** = ವಾಯುಪುತ್ರನಾದ ವಿಷ್ವಕ್ಸೇನನು, **ಪರಿಚಾರರೂಪನಾಗಿ** = ವೇಯಾಕಾರದಿಂದ ಹಿಡಿಯತಕ್ಕ ವಸ್ತ್ರದಲ್ಲಿ, **ಇಹನಲ್ಲಿ** = ಅಭಿಮಾನಿಯಾಗಿ ವಿದ್ಯಮಾನನಾಗಿದ್ದಾನೆ. **ಪುರುಷಾಖ್ಯ** = ವಿಷ್ವಕ್ಸೇನನ ಅಂತರ್ಯಾಮಿಯಾಗಿ ಪುರುಷ ನಾಮಕ ಶ್ರೀಪರಮಾತ್ಮನು ಇದ್ದಾನೆ, **ತಾನೇ ಪೂಜ್ಯ ಪೂಜಕನೆನಿಸಿ** = ಸ್ವಯಂ ಪುರುಷನಾಮಕನು ಪೂಜೆಗೆ ಅರ್ಹರಾದವರಲ್ಲಿ ಪೂಜ್ಯಶಬ್ದವಾಚ್ಯನಾಗಿಯೂ, ಪೂಜೆ ಮಾಡುವವರಲ್ಲಿ ಪೂಜಕಶಬ್ದವಾಚ್ಯನೆಂದು ಕರೆಯಿಸತಕ್ಕವನಾಗಿ, ಪೂಜ್ಯದ್ರವ್ಯಗಳಲ್ಲಿ ಮತ್ತು ನಿವೇದನೆ ಮಾಡುವವರಲ್ಲಿ ಅಂತರ್ಯಾಮಿರೂಪದಿಂದಿದ್ದು. **ನಿಜಾನುಗರ** = ಸ್ವಭಕ್ತರಾದ ಜನರನ್ನು, (ಅವರಲ್ಲಿ ಪೂಜಕನೆಂದೆನಿಸಿ), **ಸಂತೈಪ** = ಸಂರಕ್ಷಿಸುವವನು, **ಗುರುಪವಮಾನ ವಂದಿತ** = ತ್ರಿಲೋಕಾಚಾರ್ಯರೂ, ಜೀವೋತ್ತಮರೂ, ಪಾವನನಾಮಕರೂ ಆದ ಮುಖ್ಯಪ್ರಾಣದೇವರಿಂದ ಸ್ತುತ್ಯನಾದ, **ಸರ್ವೇಶ** = ಸರ್ವಜೀವರಿಗೂ ನಿಯಾಮಕನಾದ, ಸರ್ವೋತ್ತಮನಾದ ಶ್ರೀಹರಿಯು ಸಂರಕ್ಷಿಸುವನು. ॥24॥

## ವ್ಯಾಖ್ಯಾನಗಳು

**1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-**

ಅವಶಿಷ್ಟ ನಿವೇದನಕ್ರಮ ಹೇಳುತಾರೆ.

ಲಕ್ಷ್ಮೀವಾಸನಾದ ಶ್ರೀಪರಮಾತ್ಮನ ನಿವೇದನಕ್ಕೆ ಯೋಗ್ಯವಾದ ಈ ತಂದಿಟ್ಟ ಜಡಪದಾರ್ಥಗಳಲ್ಲಿ ದೇವರ ಸ್ವಾಖ್ಯರಸ ಇರೋದಾಗಿ ಅದೆ. ಅದು ಸ್ವೀಕಾರ ಮಾಡೋನಿಮಿತ್ತ ತಂದಿಡುವ ಜಡರೂಪವಾದ ವಸ್ತುವನ್ನು ಅಧಿಕಾರಿ ಯಾದವ ನಿವೇದನ ಮಾಡೋಕಾಲದಲ್ಲಿ ಆ ಜಡದ್ರವ್ಯಗಳ ಅನ್ಯದೃಷ್ಟಿಗೆ ಕಾಣ ಸಧಾಂಗೆ ವಿಷ್ವಕ್ಸೇನ ನಾಮಕನು ವಲಯಾಕಾರದಿಂದ ಹಿಡಿಯತಕ್ಕ ವಸ್ತ್ರದಲ್ಲಿ ಪರದಾರೂಪದಲ್ಲಿ ಅಭಿಮಾನಿಯಾಗಿ ಇರತಾನೆ. ಈ ವಿಷ್ವಕ್ಸೇನನ ಅಂತರ್ಗತ ದಲ್ಲಿ ಪುರುಷನಾಮಕ ಶ್ರೀಪರಮಾತ್ಮ ಇದ್ದಾನೆ. ಭಕ್ತರು ಪೂಜಾಮಾಡತಕ್ಕ ವರಲ್ಲಿ ಇದ್ದು, ಪೂಜಾದ್ರವ್ಯಗಳಲ್ಲಿ, ನಿವೇದನದ್ರವ್ಯಗಳಲ್ಲಿ ಇದ್ದು, ತನ್ನ ಸ್ವಾಖ್ಯರೂಪಕ್ಕೆ ಐಕ್ಯಹೊಂದೋವನಾಗತಾನೆ ಎಂತ ಎನಿಸಿದವನಾಗಿ, ಈ ಪ್ರಕಾರ ಅನುಸಂಧಾನಯುಕ್ತರಾದ, ನಿಜವಾಗಿ ಅನುಸರಿಸಿದ ಸ್ವರೂಪಭಾವ ವುಳ್ಳ ಭಕ್ತರ, ಸರ್ವೋತ್ತಮನಾದ, ಶ್ರೀಗುರುಗಳಾದ ಜೀವೋತ್ತಮರಾದ ವಾಯುದೇವರಿಂದ ವಂದಿತನಾದ, ಶ್ರೀಪರಮಾತ್ಮ ಸಂರಕ್ಷಣ ಮಾಡೋವ ನಾಗತಾನೆ ಎಂತ ತಾತ್ಪರ್ಯ. ॥24॥

2. ಭಾವಪ್ರಕಾಶಿಕೆ :-

ಪರಮಾತ್ಮನಿಗೆ ನೈವೇದ್ಯಕ್ಕೆ ಇಟ್ಟಿರುವ ವಸ್ತುಗಳನ್ನು ಮತ್ತೊಬ್ಬರು ನೋಡದಂತೆ ವಿಷ್ವಕ್ಸೇನನು ನೈವೇದ್ಯದ ಸುತ್ತಲೂ ಪ್ರಾಕಾರದಂತೆ ಇರು ವನು. ಅವರಲ್ಲಿ ಶ್ರೀ ಪುರುಷಕರೂಪೀ ಶ್ರೀಪರಮಾತ್ಮನನ್ನು ಚಿಂತಿಸಬೇಕು. ಹೀಗೆ ಒಬ್ಬನೇ ಪರಮಾತ್ಮನು ಒಬ್ಬನಲ್ಲಿದ್ದು ಪೂಜಕನಾಗಿಯೂ, ಮತ್ತೊಬ್ಬ ನಲ್ಲಿ ಪೂಜ್ಯನಾಗಿಯೂ ಇದ್ದು ತನ್ನ ಭಕ್ತಜನರನ್ನು ಸದಾ ಸಂರಕ್ಷಿಸುವನು. ॥24॥

4. ಶ್ರೀವ್ಯಾಸಸಿದ್ಧಾಂತಕೌಮುದಿ :-

ವಿಷ್ವಕ್ಸೇನಸ್ತು ಆಧರೇ ಪುರುಷಃ ತತ್ರ ದೇವತಾ॥ ರಮಾ ಶ್ರೀತುಳಸೀ ಸಂಸ್ಥಾ ಕಪಿಲಃ ತತ್ರ ದೇವತಾ। ದುರ್ಗಾ ಭೋಜನ ಪಾತ್ರಸ್ಥಾ ನತ್ಯಾಖ್ಯಃ ತತ್ರ ದೇವತಾ॥ ಮುಖ್ಯಪ್ರಾಣವತಿಃ ಯಜ್ಞೇ ಯಜ್ಞಾಖ್ಯಃ ತತ್ರ ದೇವತಾ ಇತ್ಯುಕ್ತ್ವಂ ಉಪಲಕ್ಷಣೀಕೃತ್ಯ ಬ್ರೂತೇ "ಶ್ರೀ" ಇತಿ. ॥24॥

### ಕನ್ನಡಾರ್ಥ

ಅಧರ (ತೆರೆ)ಕ್ಕೆ ವಿಷ್ವಕ್ಸೇನನು ಅಭಿಮಾನಿ, ಅಲ್ಲಿ ಪುರುಷನಾಮಕ ರೂಪ. ಶ್ರೀತುಳಸಿಗೆ ರಮಾ ಅಭಿಮಾನಿ, ಅಲ್ಲಿ ಕಪಿಲನಾಮಕ ರೂಪ. ಭೋಜನ ಪಾತ್ರೆಗಳಿಗೆ ದುರ್ಗಾ ಅಭಿಮಾನಿ ದೇವತೆ, ಅಲ್ಲಿ ಸತ್ಯನಾಮಕರೂಪ. ಯಜ್ಞಾಭಿಮಾನಿ ಮುಖ್ಯಪ್ರಾಣ, ಅಲ್ಲಿ "ಯಜ್ಞ" ನಾಮಕರೂಪ. ಈ ಪ್ರಮೇಯವನ್ನು ಅನ್ಯಸಂಗ್ರಾಹಕವಾಗುವ ಹಾಗೆ "ಶ್ರೀನಿವಾಸನೆ" ಈ ಪದ್ಯದಿಂದ ಹೇಳುತ್ತಾರೆ. ॥24॥

### 5. ಶ್ರೀಗುರುಹೃದಯಪ್ರಕಾಶಿಕೆ :—

ಶ್ರೀನಿವಾಸನಾದ ಶ್ರೀಹರಿಯ ಭೋಗ್ಯವಸ್ತುಗಳನ್ನು ಇತರರು ನೋಡದ ಹಾಗೆ ವಿಷ್ವಕ್ಸೇನನೆಂಬ ದ್ವಾರಪಾಲಾಧಿಪತಿಯು ಪರಿಖಾ ಎಂಬ ತೆರೆಯಲ್ಲಿ ಅಭಿಮಾನಿಯು. ಅಲ್ಲಿ ಪುರುಷನೆಂಬ ದೇವರರೂಪ ನಿಯಾಮಕ. ಹೀಗೆ ಶ್ರೀಹರಿ, ತಾನೇ ಪೂಜಕರೆಂಬ ದೇವ-ಮನುಷ್ಯಾದಿಗಳಲ್ಲೂ, ಪೂಜ್ಯವೆಂಬ ಸಾಲಿಗ್ರಾಮ, ಪ್ರತಿಮೆ ಮೊದಲಾದದ್ದರಲ್ಲು ಇದ್ದು ಪೂಜಕ ಪೂಜ್ಯನೆಂಬ ಹೆಸರಿನಿಂದ ಮುಖ್ಯವಾಗಿ ಕರೆಸಿಕೊಳ್ಳುತ್ತಾ, ನಿಜಾನುಗರೆಂಬ ಸ್ವಾಭಾವಿಕಭಕ್ತರನ್ನು ಸಂರಕ್ಷಿಸುವನು. ಗುರುಪವಮಾನನೆಂಬ ಪ್ರಾಣದೇವರಿಂದ ನಮಸ್ಕೃತನಾದ ದೇವರು ಸರ್ವದಾ ಹೀಗಿರುವನೆಂದು ತಿಳಿಯುವುದು. ॥24॥

## ಸರ್ವವ್ಯಾಖ್ಯಾನಸಾರಸಂಗ್ರಹ

1. ಪರಮ ಮಂಗಳಪ್ರದಳಾದ ಶ್ರೀಲಕ್ಷ್ಮೀದೇವಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವವನಾದ್ದರಿಂದ ಶ್ರೀಹರಿಯು ಶ್ರೀನಿವಾಸ ನಾಮಕನು.

2. ಅಂತಹ ಶ್ರೀನಿವಾಸನಿಗೆ ನೈವೇದ್ಯವಿಡುವ ಕಾಲದಲ್ಲಿ ಅಡಿಗೆ ಮಾಡಿದ ಸುಭೋಜ್ಯ ಪದಾರ್ಥಗಳನ್ನು ಒಂದು ಹರಿವಾಣದಲ್ಲಿಟ್ಟು, ಶುದ್ಧ

ವಾಗಿ ಸಾರಿಸಿದ ಭೂಮಿಯ ಮೇಲೆ ಚೌಕಾಕಾರವಾದ ಮಂಡಲವನ್ನು ನಿರ್ಮಿಸಿ ಸುತ್ತಲೂ ರಂಗವಲ್ಲಿ ಹಾಕಿ, ಮಧ್ಯೆ ಶ್ರೀಕಾರ ಬರೆದು, ಹರಿವಾಣವನ್ನು ಆ ಮಂಡಲದ ಮೇಲೆ ಇಡಬೇಕು.

ನಿವೇದನ ಕಾಲದಲ್ಲಿ ಭೋಜ್ಯ ವಸ್ತುಗಳು ಇತರರಿಗೆ ಕಾಣದಂತೆ, ಒಂದು ವಸ್ತ್ರವನ್ನು ಅಡ್ಡವಾಗಿ ಹಿಡಿಯುವರು.

ಅಂತಹ ಅಡ್ಡ ವಸ್ತ್ರದಲ್ಲಿ ವಾಯುಪುತ್ರನಾದ ವಿಷ್ವಕ್ಸೇನನು ಅಭಿಮಾನಿಯಾಗಿದ್ದಾಗ ವಿಷ್ವಕ್ಸೇನನು ಪರಿಚಾರರೂಪನಾಗಿಹನಲ್ಲಿ. ಎಂದರೆ ಸುತ್ತಲೂ ಅಡ್ಡಗಟ್ಟುವ ವಸ್ತ್ರಾವರಣರೂಪನಾಗಿದ್ದಾನೆಂದು ತಾತ್ಪರ್ಯ.

3. ಅಂತಹ ವಿಷ್ವಕ್ಸೇನನಲ್ಲಿ ಪುರುಷವಾಚ್ಯ ಶ್ರೀಪರಮಾತ್ಮನ ಭಗವದ್ರೂಪ ಚಿಂತನೆ.

4. ಶ್ರೀಪರಮಾತ್ಮನು ಸ್ವರಮಣನು. ಆಪ್ತಕಾಮನಾದ್ದರಿಂದ ತನ್ನ ಪೂಜೆಯನ್ನು ತಾನೇ ಮಾಡಿಕೊಳ್ಳುತ್ತಾನೆ.

ಜೀವರ ಔಪಚಾರಿಕವಾದ ಪೂಜೆಯಿಂದ ಅವನಿಗೆ ಆಗಬೇಕಾದದ್ದು ಏನೇನೂ ಇಲ್ಲ. ಆದರೆ ಜೀವರನ್ನು ಅನುಗ್ರಹಿಸುವುದಕ್ಕಾಗಿ, ಅವರ ಪೂಜೆಯನ್ನು ಸ್ವೀಕರಿಸುವನು.

5. ಪೂಜೆಮಾಡುವ ಜೀವರಲ್ಲಿದ್ದು ಪೂಜಕವಾಚ್ಯನಾಗಿದ್ದಾನೆ. ಪೂಜೆಗೊಂಡ ಶಾಲಿಗ್ರಾಮ, ಪ್ರತಿಮಾದಿಗಳಲ್ಲಿ ಪೂಜ್ಯನಾಮಕನಾಗಿದ್ದಾನೆ. ಈ ಕಾರಣದಿಂದ ಪೂಜ್ಯನೂ ಅವನೇ; ಪೂಜಕನೂ ಅವನೇ.

6. ಈ ರೀತಿ ಪೂಜ್ಯ–ಪೂಜಕ ನಾಮಗಳಿಂದ ತಾನಿದ್ದು, ತನ್ನ ನಿಜ ಭಕ್ತರ (ನಿಜಾನುಗರ) ಕ್ಷೇಮಚಿಂತನೆ ಗೈಯ್ಯುತ್ತಾ ಸಂರಕ್ಷಿಸುವ ಕರುಣಾಳು.

7. ಅಂತಹ ಕರುಣಾಸಮುದ್ರನಾದ ಕಮಲದಳಾಯತಾಕ್ಷನು ತ್ರೈಲೋಕ್ಯಾಚಾರ್ಯರೂ, ಅವನ ಮುಖ್ಯ ಪ್ರತೀಕರೂ ಆದ ಗುರುಪವಮಾನ ವಂದಿತನು.

8. ಗುರುಪವಮಾನ ವಂದಿತನಾದ ಆ ಜಗದಾದಿಗುರುವು ಸರ್ವಕಾಲ ಅವಸ್ಥ ದೇಶಾದಿಗಳಲ್ಲಿ ವ್ಯಾಪ್ತನಾಗಿದ್ದು, ಸರ್ವಜೀವರಿಗೂ ಪ್ರಭುವಾಗಿ, ನಿಯಾಮಕನಾಗಿದ್ದಾನೆ. (ಸರ್ವೇಶ) ॥24॥

## ಪದ್ಯ ೨೫

**ಮೂಲ :**

**ನೂತನ ಸಮೀಚೀನ ಸುರಸೋ ।**
**ಪೇತ ಹೃದ್ಯಪದಾರ್ಥದೊಳು ವಿಧಿ ।**
**ಮಾತೆ ತತ್ತದ್ರಸದೊಳು ರಸರೂಪ ತಾನಾಗಿ ॥**
**ಪ್ರೀತಿಪಡಿಸುತ ನಿತ್ಯದಿ ಜಗ ।**
**ನ್ನಾಥ ವಿಠ್ಠಲನ ಕೂಡಿ ತಾ ನಿ ।**
**ರ್ಭೀತಳಾಗಿಹಳೆಂದರಿತು ನೀ ಭುಂಜಿಸಿ ಸುಖಿಸುತಿರು ॥ ॥೨೫॥**

**ಅವತರಣಿಕೆ :-**

ಅವಶಿಷ್ಟ ನಿವೇದನ ಕ್ರಮವನ್ನು ತಿಳಿಸುತ್ತಾರೆ. ॥25॥

**ಪ್ರತಿಪದಾರ್ಥ :-**

**ನೂತನ** = ತತ್ಕಾಲದಲ್ಲಿ ಹೊಸದಾಗಿ ಮಾಡಿದಂಥಾ, **ಸಮೀಚೀನ** = ಯೋಗ್ಯವಾದ ಮತ್ತು ಅನಿಷಿದ್ಧಗಳಾದ, **ಸುರಸೋಪೇತ** = ಸುವಾಸನೆ

ಯುಕ್ತವಾಗಿದ್ದು, ರುಚಿಕರವಾದ, **ಹೃದ್ಯ** = ಮನಸ್ಸಿಗೆ ಆನಂದವನ್ನುಂಟು ಮಾಡುವ, **ಪದಾರ್ಥದೊಳು** = ಆಹಾರ ವಸ್ತುಗಳಲ್ಲಿ (ಭೋಜ್ಯವಸ್ತು), **ವಿಧಿಮಾತೆ** = ಬ್ರಹ್ಮದೇವರ ಜನನಿಯಾದ ಶ್ರೀಲಕ್ಷ್ಮೀದೇವಿಯು, **ತತ್ತದ್ರಸದೊಳು** = ಆಯಾಯಾ ಭೋಜ್ಯವಸ್ತುಗತವಾದ ರಸಗಳಲ್ಲಿ, **ರಸರೂಪಕಾನಾಗಿ** = ರಸಾಕಾರದಿಂದ ರಸಪದವಾಚ್ಯಳಾಗಿ, **ನಿತ್ಯದಿ** = ಪ್ರತಿದಿನದಲ್ಲೂ **ಶ್ರೀಶಿಪಡಿಸುತ** = ತನ್ನ ಪತಿಯಾದ ಶ್ರೀಪರಮಾತ್ಮನನ್ನು ರಸರೂಪ ವಿಶೇಷಗಳಿಂದ ಸಂತೋಷಪಡಿಸುತ್ತಾ, **ಜಗನ್ನಾಥವಿಠ್ಠಲನ** = ಸರ್ವಜಗತ್ತಿಗೆ ಪ್ರಭುವಾದ ವಿಠ್ಠಲರೂಪೀ ಶ್ರೀಪರಮಾತ್ಮನನ್ನು (ದಾಸರ ಅಂಕಿತನಾಮಾತ್ಮಕ ಬಿಂಬನು) **ಕೂಡಿ** = ಅವಿಯೋಗದಿಂದ ಸರ್ವದಾ ಜೊತೆಯಾಗಿದ್ದು, **ತಾ ನಿರ್ಭೀತಳಾಗಿಹಳೆಂದು** = ತ್ರಿಗುಣ ಸಂಬಂಧ ಭಯರಹಿತರಾಗಿದ್ದಾರೆಂದು (ನಿತ್ಯಮುಕ್ತಳಾಗಿದ್ದಾಳೆಂದು), **ಅಂದು** = ಅನುಸಂಧಾನಪೂರ್ವಕ ತಿಳಿದು, **ನೀ ಭಜಿಸಿ** = ಭಕ್ತಿಪೂರ್ವಕವಾಗಿ ಕೊಂಡಾಡುತ್ತಿರುವನಾಗಿ, **ಸುಖಿಸುತ್ತಿರು** = ನಿಷ್ಕಾಮಭಾವನೆಯಿಂದ ಶ್ರೀಪರಮಾತ್ಮನ ಗುಣೋಪಾಸನೆ ಮಾಡುತ್ತಾ ಸುಖವಾಗಿರು ಎಂದು ದಾಸರಾಯರ ದಿವ್ಯಸಂದೇಶ. ||25||

## ವ್ಯಾಖ್ಯಾನಗಳು

### 1. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :

ಅವಶಿಷ್ಟ ನಿವೇದನಕ್ರಮ ಹೇಳತಾರೆ.

ತತ್ತತ್ಕಾಲದಲ್ಲಿ ಮಾಡಿದಂಥಾ. ಅಧಿಕಾರಿ ಸ್ವೀಕಾರ ಮಾಡೋದಕ್ಕೆ ಅನಿಷಿದ್ಧಗಳಾದ, ಯೋಗ್ಯಗಳಾದಂಥಾ, ಪಕ್ವಮಾಡೋದರಲ್ಲಿ ರಸ ವ್ಯತ್ಯಾಸವಾಗದಂತೆ ಸುವಾಸನೆಯಿಂದಲೂ ರುಚಿಕರವಾಗಿಯೂ ಇರುವಂಥ ಮನಸ್ಸಿಗೆ ಹರುಷ ಕೊಡುವಂಥ ಪರಿದೃಶ್ಯಮಾನ ಜಡಪದಾರ್ಥಗಳು, ಬ್ರಹ್ಮದೇವರಿಗೆ ತಾಯಿಯಾದ ಲಕ್ಷ್ಮೀದೇವೀರು, ಆಯಾ ಜಡಪದಾರ್ಥಗತ ರಸಗಳೊಳು ರಸರೂಪರು

ತಾವಾಗಿ ರಸಾಕಾರದಿಂದ ಇದ್ದವರಾಗಿ ಪ್ರತಿದಿನದಲ್ಲೂ, ತನ್ನ ರಸರೂಪಗಳ ಶ್ರೀಪರಮಾತ್ಮ ಭೋಜನಕ್ರಿಯಾದಿಂದ ಉದರದಲ್ಲಿ ಧರಿಸುವಂತೆ ಪ್ರಾರ್ಥನಾ ಮಾಡಿ, ಪರಮಾತ್ಮನ ಭೋಜನಕ್ರಿಯಾದ್ವಾರಾ ಉದರದಲ್ಲಿ ಪ್ರವೇಶ ಮಾಡಿ, ತಮ್ಮ ಪತಿಯಾದ ಶ್ರೀಪರಮಾತ್ಮನ್ನ ಇಂಥಾ ತಮ್ಮ ಸೇವಾದಿಂದ ಸಂತೋಷ ಪಡಿಸುತಾ, ಜಗತ್ತಿಗೆ ಸ್ವಾಮಿಯಾದ ವಿಠ್ಠಲರೂಪೀ ಶ್ರೀಪರಮಾತ್ಮನ್ನ ಅವಿಯೋಗದಿಂದ ಸರ್ವದಾ ಕೂಡಿಕೊಂಡು, ತಾವು ಅಸ್ವತಂತ್ರರೆಂಬೋ ಜೀವಲಕ್ಷಣ ಇದ್ದ ಕಾಲಕ್ಕೂ ತ್ರಿಗುಣಸಂಬಂಧ ಭಯದಿಂದ ರಹಿತರಾಗಿ ಇದ್ದಾರೆಂತ ತಿಳಿದು, ಇಂಥಾ ಲಕ್ಷ್ಮೀಸಮೇತನಾದ ಶ್ರೀನಾರಾಯಣದೇವರನ್ನ ಭಕ್ತಿಪೂರ್ವಕ ಭಜಿಸಿದವನಾಗಿ ನಿಷ್ಕಾಮದಿಂದ ಶ್ರೀಪರಮಾತ್ಮನ ಗುಣೋಪಾಸನ ಮಾಡುತಾ ಸುಖದಿಂದ ಇರೋವನಾಗು ಎಂತ ತಾತ್ಪರ್ಯ. ॥25॥

**31ನೇ ಸಂಧಿ 5ನೇ ಶ್ಲೋಕ–**

ಯಥಾ ಪ್ರವಿಷ್ಟಃ ಕುರುತೇ ಪುಮಾನ್ ದಾರುಮಯಾಕೃತೌ ।
ಚೇಷ್ಟಾಂ ತದಂಗ ಸಂಶ್ಲಿಷ್ಟೈ ಸ್ವಾಂಗೈಃ ತದ್ವತ್ಸ್ವಯಂ ಹರಿಃ ॥

ಎಂಬ ಬ್ರಹ್ಮಾಂಡಪುರಾಣವಚನ.

ಯಥಾ ದಾರುಮಯೀಂ ಯೋಷಾಂ ನರಃ ಸ್ಥಿರಸಮಾಹಿತಃ ।
ಇಂಗಯತ್ಯಂಗಮಂಗಾನಿ ತಥಾ ರಾಜನ್ ಇಮಾಃ ಪ್ರಜಾಃ ॥

ಇತಿ ಭಾರತೇ ।

**ಈ ನೈವೇದ್ಯಸಮರ್ಪಣ ಸಂಧಿಗೆ ಪ್ರಮಾಣ.**

ಸಂಸ್ಮರೇತರಮಂ ವಿಷ್ಣುಂ ರತ್ನಪೀಠ ಸುಸಂಸ್ಥಿತಮ್ ।
ರಮಾಬ್ರಹ್ಮಾದಿಭಿರ್ದೇವೈಃ ಸೇವ್ಯಮಾನಂ ಸುರೇಶ್ವರಮ್ ।
ಭಕ್ತಾನಾಮಭಿರಕ್ಷಾರ್ಥಾಯ ಭೋಕ್ತಾರಂ ಪೂರ್ಣಷಡ್ಗುಣಮ್ ।
ಸನ್ನಿಷಾ ಚ ಮಹಾಲಕ್ಷ್ಮೀ ಸ್ನಾನಂ ಕಾರಯತಿ ಪ್ರಭೋಃ ।

ಪೀತಾಂಬರಂ ತು ಗರುಡಃ ಆಸನಂ ಶೇಷ ಏವ ಚ ।
ಇಂದ್ರಸ್ತು ಕಲಶಂ ಗೋಪೀಚಂದನಂ ಕಾಮ ಏವ ಚ ।
ಆದರ್ಶಂ ತು ತತೋ ದದ್ಯಾತ್ಸೂರ್ಯಚಂದ್ರೌ ರಮಾಪತೇಃ ।
ಶ್ರೀಗಂಧಂ ಚ ತತೋ ದದ್ಯಾದ್ವನಮಾಲಾಂ ತಥೈವ ಚ ।
ಶ್ರೀದೇವೀ ವನಮಾಲಾಂ ಚ ವೈಜಯಂತೀ ತಥಾ ಶಿವಃ ।
ಪಾದುಕೇ ಏಿಂದ್ರ ಉದ್ದಿಷ್ಟಃ ಕೌಸ್ತುಭಂ ತು ವಿಧಿಃ ಶ್ರುತಃ ।
ಚೂಡಾರತ್ನಂ ಮರುದ್ದೇವಃ ಕುಂಡಲಂ ಶೇಷ ಏವ ಚ ।
ಅನ್ನಂ ಸರಸ್ವತೀ ಕುರ್ಯಾದ್ಬ್ರಹ್ಮಾ ಕುರ್ಯಾತ್ತಥಾ ರಸಮ್ ।
ಸೂಪಂ ಕುರ್ಯಾನ್ಮಹಾಲಕ್ಷ್ಮೀಃ ಘೃತಂ ನಾರಾಯಣಃ ಸ್ವಯಮ್ ।
ಪರಮಾನ್ನಂ ಭಾರತೀ ಚ ಭಕ್ಷ್ಯಂ ವಾಯುರ್ಜಗತ್ಪತಿಃ ।
ಇಂದ್ರಶಚ್ಯಾದಿಕಾಃ ಸರ್ವಾಃ ಕುರ್ಯುಃ ಶಾಕಾದಿಕಂ ತಥಾ ।
ಭಕ್ಷ್ಯಾಣಿ ಚಾಗ್ನಿಕೋಣೇಷು ಈಶಾನ್ಯೇ ಪಾಯಸಂ ನ್ಯಸೇತ್ ।
ನೈರುತ್ಯಾ ಲೇಹ್ಯಪೇಹ್ಯಾದಿ ವಾಯವ್ಯಾಮುಪಭೋಜನಮ್ ।
ಮಧ್ಯೇ ಚರುಂ ಸ್ಥಾಪಯಿತ್ವಾ ಘೃತಪಾತ್ರಂ ಸಮರ್ಪಯೇತ್ ।

ಪದಾರ್ಥಾಭಿಮಾನಿ ದೇವತೆಗಳು ತದಂತರ್ಗತ ಭಗವದ್ರೂಪಗಳನ್ನ ತಿಳಿಸುವ ಪ್ರಮಾಣಾರ್ಥವನ್ನೇ ಪದ್ಯಗಳಲ್ಲಿ ವರ್ಣಿಸಿದ್ದಾರೆ ಎಂತ ತಿಳಿಯಬೇಕು.

ನಾರಾಯಣಸ್ತು ಸರ್ವತ್ರ ಇತ್ಯೇವಂ ಧ್ಯೇಯಮಂಜಸಾ ।
ಯದ್ಯಪೀಶಸ್ವರೂಪತ್ವಂ ವಿವಿಧೈರ್ವಿಷಯೈಶ್ಶುಭೈಃ ।
ಅನಂತೇಂದ್ರಿಯಸಂಭೋಗೈರನಂತಶ್ಚ ರಮಾದಿಭಿಃ ।
ಅಲೌಕಿಕ ಮಹಾನಂದ ರಸಗಂಧಾ ಸಂಯುತೈಃ ।
ಗುಣಕ್ರಿಯಾದಿಕೈಃ ಧರ್ಮೈಃ ರೂಪಾದ್ಯೈಲಶ್ಚ ತಥಾವಿಧೈಃ ।

ಸಂತುಷ್ಟಃ ಸತತಂ ಸರ್ವೈಃ ಸರ್ವಾಕಾರೈಃ ಸದಾಗತೈಃ ।
ಭೋಗ್ಯಂ ಭೋಕ್ತಾ ಚ ಭೋಗಶ್ಚ ಯಥಾ ಭವಾನ್ ।
ಏವಂ ವಸ್ತು ತಥಾ ಭೋಕ್ತ್ರ್ಯ ಭೋಜ್ಯಾದಿ ವ್ಯವಹಾರಭಾಕ್ ।
ಮಹಾಲಕ್ಷ್ಮೀಸ್ವರೂಪಾನನಂತೇಂದ್ರಿಯ ಗೋಚರಾನ್ ।
ಅನಂತರಸಸದ್ಗಂಧ ಪೂರ್ವಧರ್ಮಾನ್ ತಥಾಖಿಲಾನ್ ।
ಆಕರ್ಮಾನ್ಸ್ವಾನನುಭವ ತಥಾ ಮುಕ್ತಸ್ವರೂಪಕಾನ್ ।
ಕೇವಲಾನ್ ಭೋಕ್ಷಸೇ ಸಾರಾನ್ ವಿಷ್ಣೋ ನಾನ್ಯತ್ರ ತೇ ರತಿಃ ।
ತತ್ತದಾಕಾರಕಾನ್ ಪ್ರಾಪ್ಯಾನ್ ರಮಾಬ್ರಹ್ಮಾದಿಕಾನಪಿ ।
ತಥಾವಿಧಾನ್ ಭೋಕ್ಷ್ಯಸಿ ತ್ವಂ ತೇ ತದ್ವಸ್ತ್ವಭಿಮಾನಿನಃ ।
ಏವಂ ಸುಪರಿಪೂರ್ಣೋಽಪಿ ಆತ್ಮಾರಾಮೋಽನಘೋಽಪಿ ಸನ್ ।
ಯಥೈವ ಘರ್ಮಸಂತಪ್ತಃ ಕ್ಷುತ್ಪಿಪಾಸಾರ್ದಿತಸ್ತಥಾ ।
ಸ್ವಮಾತ್ರಭೋಗಸಾರಾಂಶ್ಚ ತಥಾ ಲಕ್ಷ್ಮ್ಯಾದ್ಯಯೋಗ್ಯಕಾನ್ ।
ಪೃಥಕ್‌ಪೃಥಗ್ವಿಧಾನ್ ಸಾರಾನ್ ವಿಷಯೇ ಮೇಧ್ಯವಸ್ತುಗಾನ್ ।
ಚಿದಾನಂದಘನೈಶ್ವರ್ಯೈರಿಂದ್ರಿಯೈಃ ಸ್ವೀಕುರು ಪ್ರಭೋ ॥

ಇತ್ಯಾದಿ ಪ್ರಮಾಣಗಳು ತಿಳಿಯಬೇಕಂತ ತಾತ್ಪರ್ಯ.

॥ ಶ್ರೀಮಧ್ವೇಶಾರ್ಪಣಮಸ್ತು ॥

## 2. ಭಾವಪ್ರಕಾಶಿಕೆ :–

ಹೊಸದಾಗಿಯೂ, ಉತ್ತಮವಾಗಿಯೂ,ಉತ್ತಮ ರಸಗಳಿಂದ ಕೂಡಿದ್ದು ದಾಗಿಯೂ ಪಸನ್ನಗೊಳಿಸ್ಸವಾಗಿಯೂ ಇರುವ ಪದಾರ್ಥಗಳಲ್ಲಿ ಆಯಾರಸಗಳಲ್ಲಿ ತಾವೇ ರಸರೂಪರಾಗಿದ್ದು, ಶ್ರೀಹರಿಯನ್ನು ಪ್ರೀತಿಪಡಿಸುತ್ತ, ಪರಮಾತ್ಮನಿಂದ ಕೂಡಿ, ನಿರ್ಭೀತಳಾಗಿರುವಳೆಂತೆಂದು ತಿಳಿದು, ಶ್ರೀಜಗನ್ನಾಥವಿಠ್ಠಲನನ್ನು ಭಜ

ಸುತ್ತಾ ಸುಖದಿಂದ ಇರು ಎಂದು ದಾಸಾರ್ಯರು ನಿಜ ಶಿಷ್ಯರಿಗೆ ಬೋಧಿಸಿದ್ದಾರೆಂಬಲ್ಲಿಗೆ 31 ನೆಯ "ನೈವೇದ್ಯ ಪ್ರಕರಣ ಸಂಧಿ"ಯು ಸಮಾಪ್ತವಾಯಿತು. ॥25॥

4. ಶ್ರೀವ್ಯಾಸದಾಸಸಿದ್ಧಾಂತಕೌಮುದೀ :–

"ರಮಾತ್ಮಕಾನ್ ರಸಾನ್ ಭುಂಕ್ತೇ" ಇತ್ಯಸ್ಯ ಅರ್ಥಮಾಹ "ನೂತನ" ಇತಿ. ॥25॥

## ಕನ್ನಡಾರ್ಥ

"ರಮಾತ್ಮಕಗಳಾದ ರಸಗಳನ್ನು ಉಪಭೋಗಿಸುವನು" ಎಂಬ ವಿಷಯವನ್ನು "ನೂತನ" ಈ ಪದ್ಯದಿಂದ ಹೇಳುತ್ತಾರೆ. ॥25॥

೫. ಶ್ರೀಗುರುಹೃದಯಪ್ರಕಾಶಿಕೆ :–

ನೂತನವೆಂಬ ಹೊಸದಾದ ಸಮೀಚೀನ ಸುರಸೋಪೇತ ಹೃದ್ಯವೆಂಬ ಒಳ್ಳೆ ರಸಯುಕ್ತ ಮನೋಹರವಾದ ಪದಾರ್ಥಗಳಲ್ಲಿ ವಿಧಿಮಾತೆ ಎಂಬ ಮಹಾಲಕ್ಷ್ಮಿಯು, ಆಯಾಯಾ ರಸಗಳಲ್ಲಿ ರಸರೂಪವೆಂಬ ಅಭಿಮಾನಿಯಾಗಿ, ಜಗನ್ನಾಥವಿಠ್ಠಲಸ್ವಾಮಿಯನ್ನು ಪ್ರೀತಿಪಡಿಸುತ್ತಾ ಸದಾ ಆತನೀದ ಕೂಡಿ ನಿರ್ಭೀತಳೆಂಬ ಭಯಾದಿ ದೋಷರಹಿತ ಉತ್ಕೃಷ್ಟ ಸ್ವರೂಪಳಾಗಿರುವಳೆಂದು ಸಜ್ಜನರು ಸದಾ ಭಜಿಸುತ್ತಾ ಸುಖಿಯಾಗಿರುವುದು. ॥25॥

**ಪ್ರಮಾಣ—ಸಂಸ್ಕರೀತ್ ಪರಮಂ ವಿಷ್ಣು..................ಘೃತಪಾತ್ರಂ ಸಮರ್ಪಯೀತ್** ॥ ಈ ಪ್ರಮಾಣವು ಸಂಕರ್ಷಣ ಒಡೆಯರವ್ಯಾಖ್ಯಾನದಲ್ಲೇ ಕೊಟ್ಟಿದೆ. ನೋಡುವುದು.

**ಪ್ರಮಾಣ :**

ಅನ್ನೇ ಚಂದ್ರೋಽಭಿಮಾನಿ ಸ್ಯಾತ್ ಕೇಶವಸ್ತತ್ರ ದೇವತಾ ।
ಭಕ್ಷ್ಯೇ ಸೂರ್ಯೋ ಮಾಧವಶ್ಚ ಶ್ರೀಗೋವಿಂದೇ ಘೃತೇ ತಥಾ ।
ಕ್ಷೀರೇ ಸರಸ್ವತೀ ವಿಷ್ಣುಃ ಮಂಡೆ ಬ್ರಹ್ಮಾ ಮಧುರಿಪುಃ ।
ತ್ರಿವಿಕ್ರಮೋ ಮರುಚ್ಚೈವ ನವನೀತಾಧಿದೇವತಾಃ ।
ವಾಮನೋ ದಧ್ನಿ ವರುಣಃ ಶ್ರೀಧರೋಗರುಡಸ್ತಥಾ ।
ಸೂಪೇ ತು ಪತ್ರಶಾಖೇಷು ಹೃಷೀಕೇಶಶ್ಚ ಮಿತ್ರಕಃ ।
ಶೇಷಸ್ತು ಫಲಶಾಖೇಷು ಪದ್ಮನಾಭಸ್ತದೀಶ್ವರಃ ।
ದಾಮೋದರಶ್ಚಾಮ್ಲಪತಿಃ ಸೌಪರ್ಣೀ ಮಾನಿನೀಸ್ಮೃತಾ ।
ಮಧುಶಾಖೇ ಹರಃ ಪ್ರೋಕ್ತಃ ತತ್ರಸಂಕರ್ಷಣೋ ವಿಭುಃ ।
ವಾಸವೋ ವಾಸುದೇವಶ್ಚ ಗಂಡಶರ್ಕರಯೋ ಸ್ಮೃತೌ ।
ನಿಯಾಮಕಸ್ತು ಪ್ರದ್ಯುಮ್ನೋ ಮೌನೀ ಗುರುರುಪಸ್ಕರೇ ।
ಕಟುದ್ರವ್ಯೇ ಯಮೋದೇವೋ ಅನಿರುದ್ಧಸ್ತದೀಶ್ವರಃ ।
ಏಲಾರಾಮಠಕರ್ಪೂರೇ ಮನೋಜಃ ಪುರುಷೋತ್ತಮಃ ।
ಔದಲಾವಣಕೇದೇವೋ ಜಯಂತಶ್ಚ ಹ್ಯಧೋಕ್ಷಜಃ ।
ದಕ್ಷೋಮಾನಿ ಮಾಷಭಕ್ಷೇ ನೃಸಿಂಹಸ್ತತ್ರ ಚೇಶ್ವರಃ ।
ಲಡ್ಡುಕಾದಿ ಪದಾರ್ಥೇಷು ಮನುಸ್ವಾಯಂಭುವೋಽಚ್ಯುತಃ ।
ನಿಯತಿರ್ಲವಣೇ ದೇವೋ ಈಶಸ್ತತ್ರ ಜನಾರ್ದನಃ ।
ಪ್ರಾಣೋವ್ಯುರುದುಪೇಂದ್ರಶ್ಚ ಫಲೇ ಫಲರಸೇ ತಥಾ ।
ಹರಿರ್ಗಂಗಾ ತು ತಾಂಬೂಲೇ ಪತಿಸ್ಪಾದೂದಕೇ ಬುಧಃ ।
ವಿಧಿಷ್ಣುಸ್ತು ಪದಾರ್ಥಾನಾಂ ಪಾಕಶುದ್ಧೌ ತು ಪುಷ್ಕರಃ ।

ಹಂಸಸ್ಸ್ವಾದುರಸೇ ವಿಶ್ವೋ ರತಿಃ ಸ್ಯಾಲ್ಯಾಂ ಹುತಾಶನಃ ।
ಭಾರ್ಗವೋಧಿಪತಿಃ ಶಾಷ್ಟೇ ವಸಂತೋ ಋಷಭಸ್ತಥಾ ।
ನೈವೇದ್ಯಮಂಡಲೇ ಕ್ರೋಡೋ ಭೂಸ್ತದೋರ್ಧ್ವಂ ವಿನಾಯಕಃ ।
ಸನತ್ಕುಮಾರೋ ಅಭಿಮಾನಿ ವರುಷೋಪ್ಯರುಷೋತ್ತಮಃ ।
ಪಾತ್ರೇ ತು ವಾರುಣೀ ಪ್ರೋಕ್ತಾನಂದೋ ಭೋಜನಪಾತ್ರಕೇ ।
ದುರ್ಗಾಭಿಮಾನೀ ಸತ್ಯಾ ಚ ಸೌಪರ್ಣೀ ವ್ಯಂಜನೇ ತಥಾ ।
ಯಜ್ಞಾಧಿಕಾರಿಷು ಜ್ಞೇಯೋ ಮುಖ್ಯಪ್ರಾಣಸ್ತು ಮಾನವೈಃ ।
ಇತಿ ಸಂಚಿಂತ್ಯ ದೇವೇಶಂ ಲಕ್ಷ್ಮೀರಮಣಮವ್ಯಯಂ ।
ಸಮರ್ಪಯೇತ್ತು ನೈವೇದ್ಯಂ ಕೃತಕೃತ್ಯೋ ಭವೇನ್ನರಃ ॥

ವಾಸುದೇವಸ್ತು ಅನ್ನಸ್ಥೋ ಭಕ್ಷ್ಯೇ ಸಂಕರ್ಷಣಸ್ತಥಾ ।
ಪ್ರದ್ಯುಮ್ನಃ ಪರಮಾನ್ನಸ್ಥೋ ಅನಿರುದ್ಧೋ ಘೃತೇ ಸ್ಥಿತಃ ।
ನಾರಾಯಣಸ್ತು ಸರ್ವತ್ರ ಇತ್ಯೇವಂ ಧ್ಯೇಯಮಂಜಸಾ ।

ಯದ್ಯಪೀಶಸ್ವರೂಪಸ್ಥಃ ವಿವಿಧ್ಯ ವಿಷಯೈಸ್ಸುಭೈಃ ।
ಅನಂತೇದ್ರಿಯ ಸಂಭೋಗ್ಯಾನ್ ಅತರ್ಕ್ಯಾಂಶ್ಚ ರಮಾದಿಭಿಃ ।
ಅಲೌಕಿಕ ಮಹಾನಂತ ರಸಗಂಧಾದಿ ಸಂಯುತೈಃ ।
ಗುಣಕ್ರಿಯಾದಿ ಕೃದ್ಧರ್ಮೈಃ ರೂಪಾದ್ಯೈಶ್ಚ ತಥಾ ವಿಧೈಃ ।
ಸಂತುಷ್ಟಃ ಸಂತತಂ ಸರ್ವೈಃ ಸರ್ವಕಾರ್ಯೈಸ್ಸದಾತ್ಮಸ್ಯೈಃ ।
ಭೋಗ್ಯಂ ಭೋಕ್ತಾ ಚ ಭೋಗಶ್ಚ ಭೋಜಕಶ್ಚ ಯತೋ ಭವಾನ್ ।
ಏವಂ ವಸ್ತು ತಥಾ ಭೋಕ್ತೃ ಭೋಜ್ಯಾದಿ ವ್ಯವಹಾರಭಾಕ್ ।
ಮಹಾಲಕ್ಷ್ಮೀ ಸ್ವರೂಪಾಂಶ್ಚ ಅನಂತೇದ್ರಿಯ ಗೋಚರಾನ್ ।
ಅನಂತರಸ ಸ್ರಗ್ಗಂಧ ಪೂರ್ವಧರ್ಮಾನ್ ತಥಾಖಿಲಾನ್ ।
ಅತರ್ಕ್ಯ ಸ್ವಾನನುಭವಸಿ ತಥಾ ಮುಕ್ತಸ್ವರೂಪಕಾನ್ ।

ಕೇವಲಾನ್ ಭೋಕ್ಷ್ಯಸೇ ಸಾರಾನ್ ವಿಷ್ಣೋ ನಾನ್ಯತ್ರತೇ ರತಿಃ ।
ತತ್ತದಾಕಾರತಾಂ ಪ್ರಾಪ್ತಾನ್ ರಮಾ ಬ್ರಹ್ಮಾದಿಕಾನಪಿ ।
ತಥಾ ವಿಧಾನ್ ಭೋಕ್ಷ್ಯಸಿತ್ವಂ ತತ್ತದ್ವಸ್ತ್ವಭಿಮಾನಿನಃ ।
ಏವಂ ಸುಪರಿಪೂರ್ಣೋಽಪಿ ಆತ್ಮಾರಾಮೋ ಅನಘೋಽಪಿಸನ್ ।
ಯಥೈವ ಘರ್ಮಸಂತಪ್ತಃ ಕ್ಷುತ್ಪಿಪಾಸಾರ್ದಿತಸ್ತಥಾ ।
ಸ್ವಮಾತ್ರ ಭೋಗ್ಯ ಸಾರಾಂಶ್ಚ ತಥಾ ಲಕ್ಷ್ಮ್ಯಾದ್ಯಯೋಗ್ಯಕಾನ್ ।
ಪೃಥಕ್ ಪೃಥಕ್ ವಿಧಾನ್ ಸಾರಾನ್ ವಿಷಯೋ ಮೇಧ್ಯವಸ್ತುಗಾನ್ ।
ಚಿದಾನಂದ ಘನೈಶ್ವರ್ಯೈಃ ಇಂದ್ರಿಯೈಃ ಸ್ವೀಕುರು ಪ್ರಭೋ ॥

ಎಂಬುದಾಗಿ ಸಜ್ಜನೋದ್ಧಾರಾರ್ಥವಾಗಿ ಬಹು ಶ್ರೇಷ್ಠವಾದ ನೈವೇದ್ಯ ಸಮರ್ಪಣಾ ವಿಚಾರದಲ್ಲಿ ಅನುಸಂಧಾನಕ್ಕೆ ತರಬೇಕಾದ ಮಹಾ ಪ್ರಮೇಯಗಳನ್ನು ಶೇಖರಿಸಿರುತ್ತಾರೆ.

|| ಶ್ರೀಮಧ್ವೇಶಾರ್ಪಣಮಸ್ತು ||

## ಸರ್ವವ್ಯಾಖ್ಯಾನಸಾರಸಂಗ್ರಹ

1. ಭೋಜನ ವಸ್ತುಗಳ ವಿವರಗಳನ್ನು ಹೇಳುತ್ತಾರೆ. ಹೊಸದಾಗಿ ಅಂದರೆ ಆಗತಾನೇ ಬಿಸಿಬಿಸಿಯಾಗಿ ಮಾಡಿದ ಭೋಜ್ಯ ಪದಾರ್ಥಗಳು ನೂತನವೆನಿಸುವವು.

2. ಅವು ದೇವರ ನೈವೇದ್ಯಕ್ಕೆ ಯೋಗ್ಯವಾದ ಅನಿಷಿದ್ಧ ವಸ್ತುಗಳಾಗಿರಬೇಕು. ಇದನ್ನು [illegible]ಚೀನ ಎಂದಿದ್ದಾರೆ.

3. ಉತ್ತಮ ರುಚಿಯನ್ನು ಹೊಂದಿದ್ದು, ರಸೋಪೇತವಾಗಿರಬೇಕು. **(ಸುರಸೋಪೇತ)**

4. ಇಂತಹ ನೂತನವಾದ, ಸುಸಮೀಚೀನವಾದ ಸುರಸಯುಕ್ತವಾದ ಭೋಜ್ಯವಸ್ತುಗಳಲ್ಲಿ ಬ್ರಹ್ಮನ ಜನನಿಯಾದ ಶ್ರೀ ಲಕ್ಷ್ಮೀದೇವಿಯು **(ವಿಧಿಮಾತೆ)** ಅಭಿಮಾನಿಯಾಗಿದ್ದಾಳೆ.

5. ವಿಧಿಮಾತೆಯಾದ ಶ್ರೀಲಕ್ಷ್ಮೀದೇವಿಯು ಆಯಾಯಾ ಪದಾರ್ಥಗತ ರಸಾಂತರ್ಗತಳಾಗಿ ರಸಪದವಾಚ್ಯನಾಗಿರುವ ಶ್ರೀಜಗನ್ನಾಥವಿಠ್ಠಲ ನಾಮಕನಾದ ಶ್ರೀಪರಮಾತ್ಮನನ್ನು (ಸ್ವಾಖ್ಯರಸರೂಪನಾದ) ಸದಾ ಸರ್ವಕಾಲವೂ ಸೇವಿಸುತ್ತಾ, ಪ್ರೀತಿಪಡಿಸುತ್ತಿದ್ದಾಳೆ. ಅಂತಹ ಶ್ರೀಲಕ್ಷ್ಮೀದೇವಿಯು ಸ್ವಾಖ್ಯರಸರೂಪನಾದ ತನ್ನ ಪತಿಯೊಡನೆ ರಸಾಂತರ್ಗತಳಾಗಿದ್ದು, ನಿತ್ಯಾವಿಯೋಗಿನಿಯಾಗಿದ್ದು ತ್ರಿಗುಣಾತೀತಳಾಗಿ, ಸದಾ ನಿರ್ವಿಕಾರಳಾಗಿ, ಯಾವುದೇ ವಿಧವಾದ ದೋಷರಹಿತಳಾಗಿದ್ದಾಳೆಂದು ಅರಿತು, ಭುಜಿಸುತ್ತಾ, ತದ್ರಸಾಂತರ್ಗತ ರಮಾರಮಣನ ಭಗವದ್ರೂಪಗಳನ್ನು ಸದಾ ಚಿಂತಿಸುತ್ತಾ ಆನಂದಿಸುತ್ತಿರಬೇಕೆಂದು ದಾಸರಾಯರು ತಿಳಿಸುತ್ತಾ, ಪ್ರಸಕ್ತ **ನೈವೇದ್ಯಪ್ರಕರಣಸಂಧಿಯನ್ನು** ಈ 25ನೆಯ ಅಂತ್ಯಪದ್ಯದಿಂದ ಉಪಸಂಹರಿಸುತ್ತಾರೆ. ॥25॥

ಇಲ್ಲಿಗೆ ಪ್ರಸಕ್ತ ಸಂಧಿಗತ 25ನೆಯ ಅಂತ್ಯಪದ್ಯದ **ಸರ್ವವ್ಯಾಖ್ಯಾನಸಾರಸಂಗ್ರಹವೆಂಬ** ತಾತ್ಪರ್ಯಸಾರವು ಪರಿಸಮಾಪ್ತಿಯಾಯಿತು.

॥ ಶ್ರೀಲಕ್ಷ್ಮೀನರಸಿಂಹಾರ್ಪಣಮಸ್ತು ॥

—✱—